


ತತ್ವಜ್ಞಾನಿಗಳು ಇದುವರೆಗೆ ಜಗತ್ತನ್ನು ಕುರಿತು ವಿವಿಧ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಆದರೆ ಆಗಬೇಕಾಗಿರುವುದು ಈ ಜಗತ್ತಿನ ಬದಲಾವಣೆ.

ಚರಿತ್ರೆಯ ದಿಕ್ಕನ್ನು ಬದಲಾಯಿಸುವುದು ದುರ್ಬಲರ ಬಲವೇ ಹೊರತು ಬಲಶಾಲಿಗಳ ದೌರ್ಬಲ್ಯವಲ್ಲ.

ವಿಶ್ವರಂಗ

ಮಾರ್ಕ್ಸ್ ಮರಣ ಶತಾಬ್ದಿ ವಿಶೇಷಾಂಕ

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಕಾರ್ಲ್ ಮಾರ್ಕ್ಸ್ ಮರಣ ಶತಾಬ್ಧಿ

ವಿಶೇಷಾಂಕ

ಬೆಲೆ: ರೂ. 1—00

ಸಂಪುಟ 5] ದಿನಾಂಕ: 13-3-1983 [ಸಂಚಿಕೆ 10-11

ಒಳಪುಟಗಳಲ್ಲಿ....

ವಿಶೇಷ ಸಂಚಿಕೆಯ ಕುರಿತು......

'**1883** ಮಾರ್ಚ್ 14ರ ಅಪರಾಹ್ನ ಎರಡೂ ಮುಕ್ಕಾಲು ಗಂಟೆಗೆ ಮಾನವ ಕುಲದ ಮಹಾನ್ ಚಿಂತಕ ಯೋಚಿಸುವುದನ್ನು ನಿಲ್ಲಿಸಿದ' ಇದು ಜಗತ್ತಿನ ಶ್ರಮಜೀವಿ ವರ್ಗದ ಕೈಗೆ ಸುಲಿಗೆಕೋರರನ್ನು ಎದುರಿಸಿ ಹೋರಾಡಲು ಮತ್ತು ತಮ್ಮದೇ ಪ್ರಭುತ್ವವೊಂದನ್ನು ಸ್ಥಾಪಿಸಲು ಬೇಕಾದಂತಹ ಸೈದ್ಧಾಂತಿಕ ಹಾಗೂ ಹೋರಾಟದ ಅಸ್ತ್ರವನ್ನು ನೀಡಲು ತಮ್ಮ ಇಡೀ ಜೀವಮಾನವನ್ನೇ ಮುಡುಪಾಗಿಟ್ಟ ಮಹಾನ್ ಕ್ರಾಂತಿಕಾರಿ ಕಾರ್ಲ್ ಮಾರ್ಕ್ಸ್ ಕೊನೆಯುಸಿರೆಳೆದಾಗ ಅವರ ಆಪ್ತ ಒಡನಾಡಿ ಮತ್ತೊಬ್ಬ ಮಹಾನ್ ಚಿಂತಕ ಫ್ರೆಡರಿಕ್ ಎಂಗೆಲ್ಸರು ತೆಗೆದ ಉದ್ಗಾರ.

ಜಗತ್ತಿನ ಕಾರ್ಮಿಕ ವರ್ಗ ಇಂದು ಕಾರ್ಲ್ ಮಾರ್ಕ್ಸರನ್ನೂ ಅವರು ನೀಡಿದ ತತ್ವಗಳನ್ನೂ ಅತ್ಯಂತ ಉಜ್ವಲವಾಗಿ ಪ್ರೀತಿಸುತ್ತಿದೆ. ಮಾರ್ಕ್ಸ್‌ವಾದವು ಎಲ್ಲಾ ಭಾಷಿಕ, ಭೌಗೋಳಿಕ ಜನಾಂಗೀಯ ಗಡಿಗಳನ್ನು ಮೀರಿ ಜಗತ್ತಿನಾದ್ಯಂತ ಇರುವ ದುಡಿಯುವ ವರ್ಗದ ಮಾರ್ಗ ದರ್ಶಕ ಸಿದ್ಧಾಂತವಾಗಿ ಬೆಳೆಯುತ್ತಿದೆ. ಜಗತ್ತಿನ ಮೂರನೇ ಒಂದು ಭಾಗದಲ್ಲಿ ಸಮಾನತೆಯ ಕೆಂಪು ಹೂಗಳು ಅರಳಿವೆ.

ಮಾರ್ಕ್ಸ್ ಮರಣ ಶತಾಬ್ದಿಯನ್ನು ಜಗತ್ತಿನ ಎಲ್ಲಾ ಭಾಗಗಳ ಕಾರ್ಮಿಕ ವರ್ಗವು ಆಚರಿಸುತ್ತಿರುವ ಈ ಸಂದರ್ಭದಲ್ಲಿ 'ಐಕ್ಯರಂಗ' ತನ್ನೆಲ್ಲಾ ಆರ್ಥಿಕ ಅಡಚಣೆಗಳ ನಡುವೆಯೂ ಕೂಡ ಮಾರ್ಕ್ಸ್ ಕುರಿತಾದ ವಿಶೇಷ ಸಂಚಿಕೆಯೊಂದನ್ನು ತನ್ನ ಓದುಗರಿಗೆ ನೀಡುತ್ತಿದೆ.

ವಿಶೇಷ ಸಂಚಿಕೆಗಾಗಿ ಆಕರ್ಷಕವಾದ ಮುಖಪುಟವನ್ನು ಸಿದ್ಧ ಪಡಿಸಿಕೊಟ್ಟ ಗೆಳೆಯ ವಸಂತ ಅವರಿಗೂ, ಲೇಖನಗಳನ್ನು ನೀಡಿ ಸಹಕರಿಸಿದ ಸಂಗಾತಿಗಳಿಗೂ, ಅನುವಾದಕರಿಗೂ, ಜಾಹೀರಾತುದಾರರಿಗೂ ಹಾಗೂ ಸಂಚಿಕೆಯನ್ನು ಶೀಘ್ರವಾಗಿ ಮತ್ತು ಸುಂದರವಾಗಿ ಮುದ್ರಿಸಿ ಕೊಟ್ಟ ಕರ್ನಾಟಕ ಪ್ರೆಸ್‌ಮನ್ ಅಸೋಸಿಯೇಟ್ಸ್‌ನ ಕಾರ್ಮಿಕ ಬಂಧುಗಳಿಗೂ ನಾವು ಕೃತಜ್ಞರಾಗಿದ್ದೇವೆ.

—**ಸಂಪಾದಕ ಮಂಡಳಿ**

ಕಾರ್ಲ್ ಹೈನ್‌ರಿಕ್ ಮಾರ್ಕ್ಸ್
ಜೀವನ ಮತ್ತು ಕೃತಿ

ಕತ್ತಲ ಜಗತ್ತಿಗೆ

ಬೆಳಕಿನ ಕಿರಣ

ಅಜ್ಞಾನದ ಅಂಧಕಾರಕ್ಕೆ

ವಿಜ್ಞಾನದ ಮಿಲನ

ಭಾವನಾವಾದದ ಬಸಿರಲ್ಲಿ

ಭೌತವಾದದ ಜನನ

ಇದು—

ಅಸಮತೆಯ ಅಗ್ನಿಕುಂಡದ ಒಳಗೆ

ಸಮತೆಯ ಚೆಂಗುಲಾಬಿಗಳ

ಅರಳಿಸಿದ

ಮಹಾನ್ ಕನಸುಗಾರ

ಕಾರ್ಲ್‌ಮಾರ್ಕ್ಸ್‌ನ ಜೀವನ ಕಾವ್ಯ.

ಜನನ 1818ರ ಮೇ 5ರಂದು. ಈಗಿನ ಜರ್ಮನಿಯ ಒಂದು ರಾಜ್ಯ ಪ್ರಷ್ಯಾದ ರಾಜಪ್ರಭುತ್ವಕ್ಕೆ ಸೇರಿದ್ದ ರೈನ್ ಲ್ಯಾಂಡ್‌ನ ಟ್ರಿಯರ್ ನಗರದಲ್ಲಿ. ತಂದೆ ಹೈನ್‌ರಿಕ್ ಮಾರ್ಕ್ಸ್ ಸಮರ್ಥ ನ್ಯಾಯವಾದಿ, ರಾಜಕೀಯವಾಗಿ, ಧಾರ್ಮಿಕವಾಗಿ ಉದಾರವಾದಿ. ಹುಟ್ಟಿನಿಂದ ಯಹೂದಿಯಾಗಿದ್ದರೂ ನಂತರ ಪ್ರಾಟೆಸ್ಟೆಂಟ್ ಮತ ಅಂಗೀಕರಿಸಿದ್ದರು.

ಕಾರ್ಲ್‌ನ ಆರಂಭದ ವ್ಯಾಸಂಗ ಟ್ರಿಯರ್‌ನಲ್ಲೇ. ಉದಾರವಾದಿ ಮುಖ್ಯೋಪಾಧ್ಯಾಯರು ಹಾಗೂ ಭೌತವಾದಿ ಗಣಿತ ಅಧ್ಯಾಪಕರ ಬಗ್ಗೆ ಪ್ರಷ್ಯಾ ಸಾಮಂತಶಾಹಿಯ ದುರ್ವರ್ತನೆ ಕಂಡ ಆತನಿಗೆ ಅಂದಿನಿಂದಲೇ ಎಲ್ಲಾ ರೀತಿಯ ಪ್ರತಿಗಾಮಿ ವಿಚಾರಗಳ ಬಗ್ಗೆ ತೀವ್ರ ದ್ವೇಷ. ಯುರೋಪಿನಲ್ಲಿ ವ್ಯಾಪಿಸಿದ್ದ ಪ್ರಗತಿಶೀಲತೆಯ ಪ್ರಭಾವ.

1835ರಲ್ಲಿ ಬಾನ್ ವಿಶ್ವವಿದ್ಯಾಲಯದಲ್ಲಿ ಕಾನೂನು ವ್ಯಾಸಂಗ ಆರಂಭ. ಒಂದು ವರುಷದ ನಂತರ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಕಾನೂನಿನೊಂದಿಗೆ ಇತಿಹಾಸ ಹಾಗೂ ತತ್ವಶಾಸ್ತ್ರದ ತೀವ್ರ ಅಧ್ಯಯನ. ಪ್ರಖ್ಯಾತ ತತ್ವಜ್ಞಾನಿ ಹೆಗೆಲ್‌ರ ತತ್ವಶಾಸ್ತ್ರದಿಂದ ನಾಸ್ತಿಕವಾದಿ ಹಾಗೂ ಕ್ರಾಂತಿಕಾರಿ ಪ್ರೇರಣೆ ಪಡೆದ ಕೆಲ ಯುವಕರ "ಎಡ ಹೆಗೆಲಿಯನ್" ಗುಂಪಿಗೆ ಸೇರ್ಪಡೆ. ಸಾಮಂತಶಾಹೀ ಪ್ರಭುತ್ವದ ರಾಜಧಾನಿಯಲ್ಲಿ ಆಳರಸರ ದರ್ಪ, ಬೂರ್ಜ್ವಾಗಳ ಸುಲಿಗೆ ಹಾಗೂ ಬಹುಸಂಖ್ಯಾತ ಜನಸಾಮಾನ್ಯರ ಕಡುಬಡತನದ ಪ್ರತ್ಯಕ್ಷ ದರ್ಶನ. ಇನ್ನೂ ಹೆಗೆಲ್‌ರ ಭಾವನಾವಾದಿ ಪ್ರಭಾವದೊಳಗೇ ಇದ್ದರೂ ಗ್ರೀಸಿನ ಪ್ರಾಚೀನ ಭೌತವಾದಿ ಹಾಗೂ ನಾಸ್ತಿಕವಾದಿ ತತ್ವಜ್ಞಾನಿ ಎಪಿಕ್ಯೂರಸ್‌ನ ಬಗ್ಗೆ ಪ್ರಬಂಧ ಬರೆದು 1841ರ ಏಪ್ರಿಲ್‌ನಲ್ಲಿ ಡಾಕ್ಟರೇಟ್ ಪದವಿಯೊಂದಿಗೆ ವಿಶ್ವವಿದ್ಯಾಲಯದ ವ್ಯಾಸಂಗದ ಕೊನೆ. ಮಾರ್ಕ್ಸ್‌ರ ಸೈದ್ಧಾಂತಿಕ ಬೆಳವಣಿಗೆಯ ಮೊದಲ ಘಟ್ಟ ಇದು.

ಪ್ರಾಧ್ಯಾಪಕನಾಗುವ ಬಯಕೆಯಿದ್ದರೂ ಸಾಮಂತಶಾಹಿಗಳ ಪ್ರತಿಗಾಮಿ ನೀತಿಯಿಂದಾಗಿ ಅವಕಾಶ ದೊರೆಯಲಿಲ್ಲ ಬದಲಿಗೆ ಪ್ರಷ್ಯಾದ ಊಳಿಗಮಾನ್ಯ ಪ್ರಭುಗಳ ವಿರುದ್ಧ ಪ್ರಜಾಪ್ರಭುತ್ವ, ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಿಗೆ ತನ್ನ ಸೈದ್ಧಾಂತಿಕ ಕೆಲಸಗಳನ್ನು ಬದಿಗಿಟ್ಟು, ಧುಮುಕಬೇಕಾಯಿತು.

ಎಡ ಹೆಗೆಲ್‌ವಾದಿಗಳೊಂದಿಗೆ ಸಂಪರ್ಕ ಹೊಂದಿದ್ದ ಕೆಲ ಪ್ರಗತಿಶೀಲ ಬೂರ್ಜ್ವಾ ಪ್ರಜಾಪ್ರಭುತ್ವವಾದಿಗಳು ಕ್ಯೋಲ್ನ್ ನಗರದಲ್ಲಿ ಆರಂಭಿಸಿದ ವಿರೋಧೀ ಪತ್ರಿಕೆ "ರೈನಿಷೆರೆಝೈಟುಂಗ್" (ರೈನ್‌ನ ಸಮಾಚಾರ)ಗೆ ಲೇಖನ ಬರೆಯಲು ಮಾರ್ಕ್ಸ್ ಹಾಗೂ ಇತರ ಎಡಹೆಗೆಲ್‌ವಾದಿಗಳಿಗೆ ಆಹ್ವಾನ. ನಂತರ 1842ರ ಅಕ್ಟೋಬರ್‌ನಲ್ಲಿ ಮಾರ್ಕ್ಸ್ ಸ್ವತಃ ಈ ಪತ್ರಿಕೆಯ ಸಂಪಾದಕರಾಗಿ ಬಾನ್‌ನಿಂದ ಕ್ಯೋಲ್ನ್‌ನಿಗೆ. ನಂತರ ಮೂಡಿಬಂದ ಪತ್ರಿಕೆಯ ಕ್ರಾಂತಿಕಾರಿ ಜನವಾದಿ – ಪ್ರವೃತ್ತಿಯಿಂದಾಗಿ ಪ್ರಷ್ಯಾದ ಪ್ರಗತಿಶೀಲ ವಲಯಗಳಲ್ಲಿ ಪತ್ರಿಕೆಯ ಪ್ರಭಾವ. ಪರಿಣಾಮವಾಗಿ ಸಾಮಂತಶಾಹೀ ಪ್ರಭುತ್ವದಿಂದ

ಇಮ್ಮಡಿ, ಮುಮ್ಮಡಿ ಸೆನ್ಸಾರ್‌ಶಿಪ್. ಮಾರ್ಕ್ಸ್ ಸಂಪಾದಕತ್ವಕ್ಕೆ ರಾಜೀನಾಮೆಯಿತ್ತರು. ನಂತರ ಪತ್ರಿಕೆಯೂ ನಿಂತಿತು. ಆದರೆ ಮಾರ್ಕ್ಸ್‌ಗೆ ಈಗ ಆದ ಪತ್ರಿಕಾ ಅನುಭವದಿಂದ ಅರ್ಥಶಾಸ್ತ್ರದ ಆಳ ಅಧ್ಯಯನ ಅತೀ ಆಗತ್ಯ ಅನ್ನಿಸಿತು.

1843 ರ ಜೂನ್ 19 ರಂದು ಬಾಲ್ಯ ಗೆಳತಿ ಜೆನ್ನಿ ವಾನ್‌ವೆಸ್ಟ್‌ಫಾಲೆನ್‌ರೊಂದಿಗೆ ವಿವಾಹ. ಈಕೆ ಸಿರಿವಂತ ಕುಟುಂಬದಿಂದ ಬಂದಿದ್ದರೂ ಮುಂದೆ ಕೌಟುಂಬಿಕವಾಗಿ ಮಾತ್ರವಲ್ಲ ಮಾರ್ಕ್ಸ್‌ರ ಎಲ್ಲಾ ಸೈದ್ಧಾಂತಿಕ ಚಟುವಟಿಕೆಗಳಲ್ಲಿ ಹೋರಾಟಗಳಲ್ಲಿ, ಬಡತನದ ನೋವುಗಳಲ್ಲಿ ಸುಯೋಗ್ಯ ಸಂಗಾತಿ.

1843ರಲ್ಲೇ **"ಹೆಗೆಲ್‌ರ ತತ್ವಶಾಸ್ತ್ರದ ವಿಮರ್ಶೆಗೊಂದು ಕೊಡುಗೆ"**ಯ ಹಸ್ತಪ್ರತಿ ಸಿದ್ಧ [ಪ್ರಕಟಣೆ ಮಾತ್ರ 1927ರಲ್ಲಿ ಸೋವಿಯೆತ್ ಯೂನಿಯನ್ನಿನಲ್ಲಿ]. ಈ ಹೊತ್ತಿಗಾಗಲೇ ಮಾರ್ಕ್ಸ್ ಭೌತವಾದಿ ಹಾಗೂ ಸಮತಾವಾದಿ.

ಪ್ರಷ್ಯಾದಲ್ಲಿ ಕ್ರಾಂತಿಕಾರಿ ವಿಚಾರಗಳ ಪ್ರಚಾರಕ್ಕೆ ಅವಕಾಶವಿಲ್ಲ ಎಂದು ಕಂಡುಕೊಂಡ ಮೇಲೆ 1843ರಲ್ಲಿ ಪ್ಯಾರಿಸ್ಸಿಗೆ, ಎಡಹೆಗೆಲಿಯನ್ ಮಿತ್ರ ರೂಗೆಯೊಂದಿಗೆ 'ಡಾಯ್‌ಟ್ಸ್-ಫ್ರಾಂರ್ಝೋಸಿಶೆ ಯಾಹ್ರ್‌ಬುಖ್' (ಜರ್ಮನ್-ಫ್ರೆಂಚ್ ವಾರ್ಷಿಕ) ಎಂಬ ತೀವ್ರವಾದಿ ಪತ್ರಿಕೆಯ ಆರಂಭ. ಪ್ರತಿಯೊಂದರ ನಿರ್ದಯ ಟೀಕೆ–ವಿಶೇಷವಾಗಿ "ಅಸ್ತ್ರಗಳ ಮೂಲಕ ಟೀಕೆ" ಮಾಡಲು ಜನಸಾಮಾನ್ಯರು ಹಾಗೂ ಕಾರ್ಮಿಕರಿಗೆ ಪತ್ರಿಕೆಯ ಮೂಲಕ ಮನವಿ. ಫ್ರೆಡರಿಕ ಎಂಗೆಲ್ಸ್ ಪ್ಯಾರಿಸ್ ಆಗಮನ ಹಾಗೂ ಭೇಟಿ. ಅಂದಿನಿಂದಲೇ ಅತ್ಯಂತ ಫಲಪ್ರದವಾದ ಒಂದು ಚಾರಿತ್ರಿಕ ಗೆಳೆತನದ ಆರಂಭ. ಕಾರ್ಮಿಕರ ನಡುವೆ ಆಗ ಹರಡಿದ್ದ ವಿವಿಧ ಕಾಲ್ಪನಿಕ ಸಮಾಜವಾದೀ ವಿಚಾರಗಳನ್ನು ಕುರಿತು ವಿವಿಧ ವಲಯಗಳಲ್ಲಿ ತೀವ್ರ ಚರ್ಚೆ. ರಾಜಕೀಯ ಅರ್ಥಶಾಸ್ತ್ರ 'ಫ್ರೆಂಚ್ ಸಮಾಜವಾದ, ಫ್ರೆಂಚ್ ಇತಿಹಾಸದ ಅಧ್ಯಯನದ ಫಲವಾಗಿ **"1844ರ ಆರ್ಥಿಕ ಹಾಗೂ ತತ್ವಶಾಸ್ತ್ರೀಯ ಹಸ್ತ ಪ್ರತಿಗಳು"** ರಚನೆ. ಕೇವಲ ಸೈದ್ಧಾಂತಿಕ ಚರ್ಚೆಗಳಲ್ಲೇ ಮುಳುಗಿ ಕಾರ್ಮಿಕರ ಬಗ್ಗೆ ತಾತ್ಸಾರ ಭಾವ ತಳೆದಿದ್ದ ಎಡಹೆಗೆಲಿಯನ್ನರ ನಿಲುವನ್ನು ಧೂಳೀಪಟ ಮಾಡುವ **"ವಿಮರ್ಶಾತ್ಮಕ ವಿಮರ್ಶೆಯ ವಿಮರ್ಶೆ"**ಯ ಪ್ರಕಟಣೆ. ಪದೇ ಪದೇ ಪ್ರಷ್ಯಾ ಸರಕಾರದ ಒತ್ತಾಯಕ್ಕೆ ಒಳಗಾಗುತ್ತಿದ್ದ ಫ್ರೆಂಚ್ ಸರಕಾರದ ಆಜ್ಞೆಯ ಮೇರೆಗೆ ಪ್ಯಾರಿಸ್ಸಿನಿಂದ 1845 ರ ಫೆಬ್ರುವರಿಯಲ್ಲಿ ಬ್ರಸೆಲ್ಸ್‌ಗೆ.

ಬ್ರಸೆಲ್ಸ್‌ನಲ್ಲೂ ಕ್ರಾಂತಿಕಾರಿ ಸೈದ್ಧಾಂತಿಕ ಚಟುವಟಿಕೆಗಳ ಮುಂದುವರಿಕೆಯ ಫಲವಾಗಿ ಯಾಂತ್ರಿಕ ಭೌತವಾದದ ನ್ಯೂನ್ಯತೆಗಳ ಕುರಿತಾದ **"ಫ್ಯೂಯೆರ್ ಬಾಕ್ ಕುರಿತು ಪ್ರಬಂಧ"**. ಕಾಲ್ಪನಿಕ ಸಮಾಜವಾದಿಗಳು, 'ನಿಜ ಸಮಾಜವಾದೀ' ಎಂದು ಹೇಳಿಕೊಳ್ಳುವವರು ಇತ್ಯಾದಿ ಕಾರ್ಮಿಕವರ್ಗಪರವಲ್ಲದ ಸಮಾಜವಾದಿ ಸಿದ್ಧಾಂತಗಳ ವಿಮರ್ಶೆಗಳಾಗಿ ಎಂಗೆಲ್ಸ್‌ರೊಂದಿಗೆ **"ಪವಿತ್ರ ಕುಟುಂಬ"** ಹಾಗೂ **"ಜರ್ಮನ್ ಸಿದ್ಧಾಂತ"** ಮತ್ತು "ಬಡತನದ ತತ್ವಶಾಸ್ತ್ರ" ಬರೆದ ಪ್ರೌಧಾನರ ವಿಚಾರಗಳ ಕಟುವಿಮರ್ಶೆ **"ತತ್ವಶಾಸ್ತ್ರದ ಬಡತನ"**ದ ರಚನೆ.

1847 ರಲ್ಲಿ ಮಾರ್ಕ್ಸ್ ಹಾಗೂ ಎಂಗೆಲ್ಸರು 'ಕಮ್ಯುನಿಸ್ಟ್ ಲೀಗ್' ಎಂಬ ಅದುವರೆಗೆ ರಹಸ್ಯ ಪ್ರಚಾರ ಸಂಸ್ಥೆಯಾಗಿದ್ದ ಸಂಘಟನೆಯನ್ನು ಸೇರಿದರು. ಮಾರ್ಕ್ಸ್‌ರ ಮಾರ್ಗದರ್ಶನದಲ್ಲಿ ಕಾರ್ಮಿಕ ಚಳವಳಿಯಲ್ಲಿ ಮೊತ್ತಮೊದಲ ಬಾರಿಗೆ ಉಚ್ಚಮಟ್ಟದ ಸಂಘಟನಾ ನೀತಿಯ ಅಳವಡಿಕೆ. "ಮಾನವರೆಲ್ಲಾ ಸೋದರರು" ಎಂಬ ಅದುವರೆಗಿನ ಧ್ಯೇಯ ವಾಕ್ಯದ ಬದಲು "ಜಗತ್ತಿನ ದುಡಿಯುವ ಜನರೇ, ಒಂದಾಗಿ" ಎಂಬ ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯತೆಯನ್ನು ಸಾರುವ ಧ್ಯೇಯ ವಾಕ್ಯ ಕಮ್ಯುನಿಸ್ಟ್ ಲೀಗ್‌ನದಾಯಿತು. ಇದರೊಂದಿಗೆ ಮಾರ್ಕ್ಸ್‌ವಾದ ಹಾಗೂ ಕಾರ್ಮಿಕ ಚಳವಳಿ ಬೆಸೆತ ಆರಂಭ. ಕಾರ್ಮಿಕರ ಸಮತಾವಾದಿ ವಿಚಾರಗಳ ಪ್ರಚಾರದ ಉದ್ದೇಶದಿಂದ 'ಕಾರ್ಮಿಕರ ಶಿಕ್ಷಣ ಸಮಾಜ'ಗಳ ಆರಂಭ. **"ಕೂಲಿ ದುಡಿಮೆ ಹಾಗೂ ಬಂಡವಾಳ"** ಎಂಬ ಕೃತಿಯು ಜರ್ಮನ್ ಸಂಸ್ಥೆಯಲ್ಲಿ ಕಾರ್ಮಿಕ ವರ್ಗದ ಹೊಸ ಆರ್ಥಿಕ ಸಿದ್ಧಾಂತವನ್ನು ಜನಪ್ರಿಯ ಭಾಷೆಯಲ್ಲಿ ಮುಂಡಿಮಾಡಿದ ಭಾಷಣಗಳನ್ನು ಆಧರಿಸಿದ ರಚನೆ. "ಜರ್ಮನ್–ಬ್ರಸೆಲ್ ಪತ್ರಿಕೆ"ಯ ಮೂಲಕ ಮಾನವನ ಉದ್ಧಾರದ ಕಾರ್ಯದಲ್ಲಿ ಕಾರ್ಮಿಕರ ಗುರಿ ಹಾಗೂ ಪಾತ್ರದ ಬಗ್ಗೆ ಪ್ರಚಾರ. 1847 ರಲ್ಲಿ ಬ್ರಸೆಲ್ಸ್‌ನಲ್ಲಿ ನಡೆದ ಬೂರ್ಜ್ವಾ ಅರ್ಥಶಾಸ್ತ್ರಜ್ಞರ ಸಮ್ಮೇಳನದಲ್ಲಿ ಭಾಗವಹಿಸಿ ಬೂರ್ಜ್ವಾ ಅರ್ಥಶಾಸ್ತ್ರದ ಗೋಸುಂಬೆತನ ಬಯಲಿಗೆಳೆದರು.

ಲಂಡನ್‌ನಲ್ಲಿ 1847ರ ನವೆಂಬರ್‌ನಲ್ಲಿ ನಡೆದ ಕಮ್ಯುನಿಸ್ಟ್ ಲೀಗ್‌ನ ಎರಡನೇ ಮಹಾ ಅಧಿವೇಶನದಲ್ಲಿ ಪ್ರಮುಖ ಪಾತ್ರ. ಅಧಿವೇಶನದ ಕೇಳಿಕೆಯ ಮೇರೆಗೆ ಈಗ ಕಾರ್ಮಿಕ ವರ್ಗದ ಕೈಪಿಡಿಯಾಗಿ ಸುಪ್ರಸಿದ್ಧವಾಗಿರುವ ಅದುವರೆಗಿನ ಮಾರ್ಕ್ಸ್‌ರ ಎಲ್ಲಾ ಸೈದ್ಧಾಂತಿಕ ಚಟುವಟಿಕೆಗಳ ಸಾರಾಂಶದಂತಿದ್ದ **"ಕಮ್ಯೂನಿಸ್ಟ್ ಪಕ್ಷದ ಪ್ರಣಾಳಿಕೆ"**ಯ ರಚನೆ ಎಂಗೆಲ್ಸ್‌ರೊಂದಿಗೆ. 1848ರ ಆರಂಭದಲ್ಲಿ ಯುರೋಪಿನಾದ್ಯಂತ ಕ್ರಾಂತಿಯ ಪ್ರವಾಹ. ಫೆಬ್ರವರಿ ತಿಂಗಳಲ್ಲಿ ಫ್ರಾನ್ಸ್‌ನಲ್ಲಿ ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿ ನಡೆದಾಗ ಮಾರ್ಕ್ಸ್‌ಗೆ ಬ್ರಸೆಲ್ಸ್ ಬಿಡಲು ಆಜ್ಞೆ. ಅಲ್ಲಿಂದ ಪ್ಯಾರಿಸ್ಸಿಗೆ ನಿರ್ಗಮನ. ಮಾರ್ಚ್ ತಿಂಗಳಲ್ಲಿ ಆಸ್ಟ್ರಿಯಾದಲ್ಲಿ ಹಾಗೂ ಸ್ವಂತ ದೇಶದಲ್ಲೂ ಇಂತಹದೇ ಕ್ರಾಂತಿ ನಡೆದಾಗ ಪ್ಯಾರಿಸ್ಸಿನಿಂದ ಜರ್ಮನಿಯ ಕೊಲೋನ್‌ನಿಗೆ ಬಂದು ಕ್ರಾಂತಿಕಾರೀ ಚಟುವಟಿಕೆಗಳಲ್ಲಿ ಪಾತ್ರ. "ನವರೈನಿಷ್ ಪತ್ರಿಕೆ" ಪ್ರಧಾನ ಸಂಪಾದಕತ್ವ. ಜರ್ಮನಿಯಲ್ಲಿ

ಕ್ರಾಂತಿಯನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದ ಪ್ರತಿ ಕ್ರಾಂತಿಯ ಸರಕಾರದಿಂದ ಮಾರ್ಕ್ಸ್ ಮೇಲೆ ಮೊಕದ್ದಮೆ. ಮೊಕದ್ದಮೆ ವಿಫಲವಾದರೂ ಜರ್ಮನಿ ಬಿಡಲು ಮಾರ್ಕ್ಸ್‌ಗೆ ಆದೇಶ. ಪ್ಯಾರಿಸ್ಸಿಗೆ ಬಂದ ಮೇಲೆ ಅಲ್ಲಿ ಜೂನ್ 13 ರಂದು ಫೆಬ್ರುವರಿ ಕ್ರಾಂತಿಯ ಸಾಧನೆಗಳಿಂದ ಕಾರ್ಮಿಕ ವರ್ಗವನ್ನು ವಂಚಿಸಿದುದನ್ನು ಪ್ರತಿಭಟಿಸಲು ಪ್ಯಾರಿಸ್ಸಿನಲ್ಲಿ ನಡೆದ ಭಾರೀ ಮತಪ್ರದರ್ಶನದಲ್ಲಿ ಪಾಲುಗೊಂಡುದಕ್ಕಾಗಿ ಪ್ಯಾರಿಸ್ಸಿನಿಂದಲೂ ಬಹಿಷ್ಕಾರ. ಅಲ್ಲಿಂದ ಲಂಡನ್‌ಗೆ ಹೋದ ಮಾರ್ಕ್ಸ್ ಕೊನೆಯದಿನಗಳವರೆಗೂ, ಅಲ್ಲೇ ಉಳಿದರು.

1848–49ರ ಕ್ರಾಂತಿಕಾರೀ ಅವಧಿ ಮಾರ್ಕ್ಸ್‌ರ ಕ್ರಾಂತಿಕಾರೀ ಸಿದ್ಧಾಂತದ ಪ್ರಥಮ ಉಜ್ವಲ ಸಮರ್ಥನೆ. ಈ ಅವಧಿಯ ಅನುಭವಗಳನ್ನು ಸಂಗ್ರಹಿಸಿ ಬರೆದ **"ಫ್ರಾನ್ಸಿನಲ್ಲಿ ವರ್ಗ ಹೋರಾಟಗಳು"** ಸಮಾಜದ ಪರಿವರ್ತನೆಯಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರ ನಿರ್ವಹಿಸಬೇಕಾದ ಕಾರ್ಯಭಾರಗಳ ವೈಜ್ಞಾನಿಕ ವಿಶ್ಲೇಷಣೆಯ ಕೃತಿ. 1851ರಲ್ಲಿ ಫ್ರಾನ್ಸಿನ ಲೂಯಿ ಬೋನಾಪಾರ್ಟೆಯ ಬೆಂಬಲಿಗರು ಕ್ಷಿಪ್ರ ಕ್ರಾಂತಿ ನಡೆಸಿ ಅಲ್ಲಿ ಸರ್ವಾಧಿಕಾರ ಬಂದಾಗ 1848–49ರ ಹಾಗೂ ಈ ಘಟನೆಗಳ ಕುರಿತ **"ಲೂಯಿ ಬೋನಾಪಾರ್ಟೆಯ ಹದಿನೆಂಟನೇ ಬ್ರುಮೇರ್"** ಕ್ರಾಂತಿಯ ಸಿದ್ಧಾಂತದ, ಪ್ರಭುತ್ವದ ಬಗ್ಗೆ ಮಾರ್ಕ್ಸ್‌ವಾದೀ ಸಿದ್ಧಾಂತದ ಉತ್ಕೃಷ್ಟ ಗ್ರಂಥ.

ರಾಜಕೀಯ ದೇಶಭ್ರಷ್ಟರಾಗಿ ಮಾರ್ಕ್ಸ್ ಹಾಗೂ ಅವರ ಕುಟುಂಬ ಅನುಭವಿಸಬೇಕಾದ ಕಷ್ಟ - ನಷ್ಟಗಳು ಅಪಾರ. ಕಡುಬಡತನ, ಉಪವಾಸ, ಅನಾರೋಗ್ಯ ಏಳರಲ್ಲಿ ನಾಲ್ಕು ಮಕ್ಕಳ ಸಾವು. ಆದರೂ ಕುಟುಂಬ ಮಾರ್ಕ್ಸ್‌ಗೆ ಹೊರೆಯೆಂದೆನಿಸಲಿಲ್ಲ. ಬದಲಿಗೆ ತನ್ನ ಹೋರಾಟಗಳ ಬೆನ್ನೆಲುಬು, ಆರೈಕೆ ಹಾಗೂ ಪ್ರೀತಿಯ ಸೆಲೆಯಾಗಿತ್ತು. ಮಾರ್ಕ್ಸ್‌ರು ತಮ್ಮ ಅತೀವ ತಾಳ್ಮೆ, ಪತ್ನಿ ಜೆನ್ನಿಯ ಪೂರ್ಣ ಸಹಕಾರ ಹಾಗೂ ಗೆಳೆಯ ಎಂಗೆಲ್ಸ್‌ರ ಸತತ ಸಹಾಯದಿಂದ ಇವನ್ನೆಲ್ಲಾ ಎದುರಿಸಿದರು.

1850ರ ನಂತರ ಕೆಲಕಾಲ ಮಾರ್ಕ್ಸ್ ಆರ್ಥಿಕ ಸಂಶೋಧನೆಯಲ್ಲಿ ಮಗ್ನ. ಈ ನಡುವೆ 1851ರಿಂದ "ನ್ಯೂಯಾರ್ಕ್ ಟ್ರಿಬ್ಯೂನ್" ಪತ್ರಿಕೆಯ ಲಂಡನ್ ವರದಿಗಾರರಾಗಿ ಒಂದು ದಶಕದ ಕಾಲ ಆರ್ಥಿಕ ಪರಿಸ್ಥಿತಿಯ ಕುರಿತು, ಯುರೋಪಿಯನ್ ದೇಶಗಳ ಕುರಿತು, ಕಾರ್ಮಿಕ ವರ್ಗದ ಹಾಗೂ ಪ್ರಜಾಪ್ರಭುತ್ವ ಚಳವಳಿಯ ಕುರಿತು ಆಳವಾದ, ವಿಶ್ಲೇಷಣಾತ್ಮಕ ಲೇಖನಗಳನ್ನು ಬರೆದರು. ಭಾರತ ಕುರಿತಾದ ಮಾರ್ಕ್ಸ್ ಬರಹಗಳು ಇದೇ ಅವಧಿಯವು. ಆರ್ಥಿಕ ಸಂಶೋಧನೆಯ ಫಲವಾಗಿ ಮೂಡಿದ ಕೃತಿಗಳು "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಕೊಡುಗೆ" (1859ರಲ್ಲಿ)ಹಾಗೂ'ಬಂಡವಾಳ'[ದಾಸ್ ಕ್ಯಾಪಿಟಲ್]ಮಹಾಗ್ರಂಥದ ಮೊದಲನೇ ಸಂಪುಟ (1867 ರಲ್ಲಿ). ಈ ಗ್ರಂಥಗಳು ರಾಜಕೀಯ ಅರ್ಥಶಾಸ್ತ್ರದಲ್ಲಿ ಒಂದು ಕ್ರಾಂತಿಯನ್ನೇ ಉಂಟು ಮಾಡಿದವು. ಮಾರ್ಕ್ಸ್‌ವಾದೀ ಅರ್ಥಶಾಸ್ತ್ರದಲ್ಲಿ ನಿರ್ಧಾರಕ ಘಟ್ಟವಿದು.

1850ರ ಹಾಗೂ 60ರ ದಶಕದಲ್ಲಿ ಯುರೋಪಿನಲ್ಲೆಲ್ಲಾ ಪ್ರಜಾಪ್ರಭುತ್ವವಾದೀ ಕಾರ್ಮಿಕ ಚಳವಳಿ ಮತ್ತೆ ವ್ಯಾಪಿಸಲಾರಂಭಿಸಿದಾಗ ಮಾರ್ಕ್ಸ್ ಕಾರ್ಯಾಚರಣೆ ಮತ್ತೆ ಆರಂಭ. 1864ರ ಸೆಪ್ಟೆಂಬರ್ 28ರಂದು ಅಂತರ್ರಾಷ್ಟ್ರೀಯ ದುಡಿಯುವ ಜನರ ಸಂಘ–ಸುಪ್ರಸಿದ್ಧ ಪ್ರಥಮ ಅಂತರ್ರಾಷ್ಟ್ರೀಯ–ದ ಸ್ಥಾಪನೆ. ಸಮಾಜವಾದೀ ಚಳವಳಿಯ ಅಂತರ್ರಾಷ್ಟ್ರೀಯ ಸ್ವಭಾವವನ್ನು, ಸ್ವತಃ ಕಾರ್ಮಿಕರಿಗೂ ಮತ್ತು ಬೂರ್ಜ್ವಾಗಳಿಗೂ, ಸರಕಾರಗಳಿಗೂ ತೋರಿಸಿಕೊಟ್ಟು ಕಾರ್ಮಿಕ ವರ್ಗಕ್ಕೆ ಪ್ರೋತ್ಸಾಹ ಹಾಗೂ ಬಲವನ್ನು ನೀಡುವ, ಅದೇ ಸಮಯದಲ್ಲಿ ಕಾರ್ಮಿಕವರ್ಗದ ಶತ್ರುಗಳ ಎದೆಯಲ್ಲಿ ನಡುಕ ಹುಟ್ಟಿಸುವ ಅಂತರ್ರಾಷ್ಟ್ರೀಯ ಸಂಘಟನೆಯೊಂದನ್ನು ಸ್ಥಾಪಿಸಬೇಕೆಂಬ ಮಾರ್ಕ್ಸ್‌ರ ಅಭೀಷ್ಟೆ ಸಾಕಾರ. ಮಾರ್ಕ್ಸ್‌ರ ನೇತೃತ್ವದಲ್ಲಿ ಈ ಸಂಘದ ಚಾರಿತ್ರಿಕ ಪಾತ್ರ. ಸಂಘಟನೆಯೊಳಗೆ ವಿವಿಧ ಕಾರ್ಮಿಕ ವರ್ಗ–ವಿರೋಧೀ ಪ್ರವೃತ್ತಿಗಳ ವಿರುದ್ಧ ಹೋರಾಟಗಳ ಮೂಲಕ ವಿವಿಧ ದೇಶಗಳ ಶ್ರಮಜೀವಿಗಳ ಹೋರಾಟಕ್ಕೆ ಏಕರೂಪದ ತಂತ್ರದ ರಚನೆ.

1870–71ರ ಯುಗಾಂತರಕಾರೀ ಘಟನೆಗಳು. 1871ರ ಮಾರ್ಚ್‌ನಲ್ಲಿ ಪ್ಯಾರಿಸ್ಸಿನಲ್ಲಿ ಕಾರ್ಮಿಕ ವರ್ಗದ ಕ್ರಾಂತಿ. ಪ್ಯಾರಿಸ್ ಕಮ್ಯೂನ್ ರೂಪದಲ್ಲಿ ಇತಿಹಾಸದಲ್ಲಿ ಮೊತ್ತ ಮೊದಲ ಕಾರ್ಮಿಕ ವರ್ಗದ ಪ್ರಭುತ್ವ. ಅದರಲ್ಲಿ ಮಾರ್ಕ್ಸ್ ಹಾಗೂ ಎಂಗೆಲ್ಸ್‌ರ ಸಕ್ರಿಯ ಪಾತ್ರ. ಕಮ್ಯೂನ್‌ನ ಪತನದ ನಂತರ ಕಾರ್ಮಿಕ ವರ್ಗದ ಸರ್ವಾಧಿಕಾರ ಸ್ಥಾಪಿಸುವಲ್ಲಿ ಪ್ಯಾರಿಸ್ ಕಮ್ಯೂನಿನ ಚಾರಿತ್ರಿಕ ಮಹತ್ವದ ಪ್ರಗಾಢವಾದ, ಸುಸ್ಪಷ್ಟವಾದ ವೈಜ್ಞಾನಿಕ ವಿಶ್ಲೇಷಣೆಯ **"ಫ್ರಾನ್ಸಿನಲ್ಲಿ ಅಂತರ್ಯುದ್ಧ"**ದ ರಚನೆ—ಪ್ರಥಮ ಅಂತರ್ರಾಷ್ಟ್ರೀಯದ ಜನರಲ್ ಕೌನ್ಸಿಲನ್ನು ಉದ್ದೇಶಿಸಿದ ಭಾಷಣದ ರೂಪದಲ್ಲಿ, ಬಕೂನಿಸ್ಟ್ ಅರಾಜಕತಾವಾದಿಗಳು ಸಂಘಟನೆಯನ್ನು ಒಡೆದ ನಂತರ 1872ರ ಹೇಗ್ ಮಹಾಧಿವೇಶನದ ನಂತರ ಅಂತರ್ರಾಷ್ಟ್ರೀಯದ ಜನರಲ್ ಕೌನ್ಸಿಲನ್ನು ನ್ಯೂಯಾರ್ಕ್‌ಗೆ ವರ್ಗಾಯಿಸುವಂತೆ ಮಾಡಿದರು ಮಾರ್ಕ್ಸ್. ಅಂತರ್ರಾಷ್ಟ್ರೀಯ ಈ ಹೊತ್ತಿಗೆ ತನ್ನ ಚಾರಿತ್ರಿಕ ಪಾತ್ರ ವಹಿಸಿತ್ತು. ವಿವಿಧ ದೇಶಗಳಲ್ಲಿ ಸಮಾಜವಾದಿ ಕಾರ್ಮಿಕ ಪಕ್ಷಗಳು ಉದಯಿಸಿದ್ದವು. 1875ರಲ್ಲಿ ರಚಿಸಿದ **"ಗೋಥಾ ಕಾರ್ಯಕ್ರಮದ ವಿಮರ್ಶೆ"** ಜರ್ಮನ್ ಸಮಾಜವಾದಿಗಳಲ್ಲಿ ಕೆಲವರ ಮೇಲೆ ಪ್ರಭಾವ ಬೀರಿದ್ದ ಲಾಸೇಲಿಯನ್‌ವಾದದ ವಿಮರ್ಶೆಯೊಂದಿಗೆ ಕಮ್ಯೂನಿಸಂನ ಬೆಳವಣಿಗೆ ಹಾಗೂ ಪ್ರಭುತ್ವ ನಶಿಸಿಹೋಗುವುದರ ನಡುವಿನ ಸಂಬಂಧದ ವೈಜ್ಞಾನಿಕ ವಿಶ್ಲೇಷಣೆಯ ಗ್ರಂಥ. ವೈಜ್ಞಾನಿಕ ಸಮತಾವಾದದ ಮಹತ್ವದ ಕಾರ್ಯಕ್ರಮ ದಸ್ತಾವೇಜು ಇದು. ಕೊನೆಯ ದಿನಗಳಲ್ಲಿ 'ಬಂಡವಾಳ'ದ 2ನೇ ಹಾಗೂ 3ನೇ ಸಂಪುಟದ ರಚನೆಯೊಂದಿಗೆ ವಿವಿಧ ಸೈದ್ಧಾಂತಿಕ ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ ಮಗ್ನ. 1881ರ ಡಿಸೆಂಬರ್ 2ರಂದು ಜೀವನವಿಡೀ ಸುಯೋಗ್ಯ ಸಂಗಾತಿಯಾಗಿದ್ದ ಪತ್ನಿ ಜೆನ್ನಿಯ ಮರಣ. 1883ರ ಮಾರ್ಚ್ 14ರಂದು ಈ ಘಟನಾಮಯ ಕ್ರಾಂತಿಕಾರೀ ಜೀವನದ ಕೊನೆ. ●

ಮಾರ್ಕ್ಸ್‌ವಾದ ಇಂದಿನ ಸಂದರ್ಭದಲ್ಲಿ

–ಕಾ. ಇ. ಎಂ. ಎಸ್. ನಂಬೂದಿರಿಪಾದ್

ಕಾರ್ಲ್‌ಮಾರ್ಕ್ಸ್‌ ಮರಣ ಶತಾಬ್ಧಿಯನ್ನು ನಾವಿಂದು ಆಚರಿಸುತ್ತಿರುವ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳಬರುತ್ತಿದೆ. ಇಂದಿನ ಪ್ರಪಂಚದ ಸ್ಥಿತಿಗತಿಗಳಿಗೆ ಕಾರ್ಲ್‌ಮಾರ್ಕ್ಸ್‌ನ ತತ್ವಗಳು ಯಾವುದೇ ಸಾಂಗತ್ಯ ಹೊಂದಿವೆಯೇ ? ಏಕೆಂದರೆ ಆ ಮಹಾ ಬೋಧಕ ಗತಿಸಿ ಒಂದು ಶತಮಾನವೇ ಕಳೆದಿದೆ. ಅವನ ಪ್ರಮುಖ ಕೃತಿಗಳಾದ ಕಮ್ಯುನಿಸ್ಟ್ ಮ್ಯಾನಿಫೆಸ್ಟೊ, ಕ್ಯಾಪಿಟಲ್ ಮುಂತಾದವುಗಳನ್ನು ಬರೆದದ್ದು ಇನ್ನೂ ಹಿಂದೆಯೇ ಮಾರ್ಕ್ಸ್‌ನ ಪ್ರಮುಖ ಬೋಧನೆಗಳು ರೂಪಿಸಿಕೊಂಡ ತರುವಾಯ ಪ್ರಪಂಚ ಸಾಕಷ್ಟು ವಿದ್ಯಮಾನಗಳನ್ನು ಕಂಡಿದೆ. ಹೀಗಾಗಿ ಅವು 'ಹಳಸ'ಲಾಗಿಲ್ಲವೆ ? ಮಾರ್ಕ್ಸ್‌ವಾದಿಗಳೆಂದು ಹೇಳಿಕೊಳ್ಳುವವರು ಇಂದಿನ ವಾಸ್ತವತೆಯೊಂದಿಗೆ ಹೆಜ್ಜೆ ಹಾಕಲಾರದವರಾಗಿಲ್ಲವೆ ?

ಆರಂಭದಲ್ಲೇ ಒಂದು ವಿಷಯ ಸ್ಪಷ್ಟಪಡಿಸಿಕೊಳ್ಳೋಣ. ಬುದ್ಧ, ಕ್ರಿಸ್ತ, ಮಹಮ್ಮದ್, ಶಂಕರ ಇನ್ನಿತರ ಮಹಾಬೋಧಕರು ಹಾಗೂ ದಾರ್ಶನಿಕ ಹೆಸರಿನೊಡನೆ ಕೇಳಿಬರುವ "ಪಂಥ"ಗಳಂತೆ ಮಾರ್ಕ್ಸ್‌ವಾದ ಒಂದು ಪಂಥವಲ್ಲ. ಮೇಲಿನವರನ್ನು ಗುರುತಿಸುವಂತೆ ಮಾರ್ಕ್ಸ್ ಒಬ್ಬ "ಸಂತ ಮತ್ತು ಋಷಿ"ಯು ಅಲ್ಲ. ಆತ ಸಾಮಾಜಿಕ ಬದಲಾವಣೆಯ ವಿಜ್ಞಾನಿಯಾಗಿದ್ದ. ಕಾರ್ಮಿಕ ವರ್ಗದ ಕ್ರಾಂತಿಯ ಸಿದ್ಧಾಂತವನ್ನು ಪ್ರತಿಪಾದಿಸಿ ಜಾಗತಿಕ ಮಟ್ಟದಲ್ಲಿ ಕಾರ್ಯಾಚರಣೆಯನ್ನು ವಿವರಿಸಿದ ವ್ಯಕ್ತಿ ಆತ. ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಉಗಮ, ಬೆಳವಣಿಗೆ ಹಾಗೂ ಅನಿವಾರ್ಯ ಪತನ ಇದೇ ಮಾರ್ಕ್ಸ್‌ನ ವೈಜ್ಞಾನಿಕ ಸಂಶೋಧನೆಯ ಕೇಂದ್ರ ವಿಷಯ. ಆದ್ದರಿಂದಲೇ ಆತ ಬಂಡವಾಳಶಾಹೀ ಜಗತ್ತಿನ ಪ್ರತಿಯೊಂದು ವಿದ್ಯಮಾನವನ್ನು ಸೂಕ್ಷ್ಮವಾಗಿ ಗಮನಿಸುತ್ತಾ, ಅವುಗಳನ್ನು ಮತ್ತೆ ಮತ್ತೆ ವಿಮರ್ಶಿಸುತ್ತಾ, ವಿಶ್ಲೇಷಿಸುತ್ತಾ ತನ್ನ ಮೂಲ ಸಂಶೋಧನೆಗಳನ್ನು ಶ್ರೀಮಂತಗೊಳಿಸಿದ.

ಇದು ಮಾರ್ಕ್ಸ್‌ಗೆ ಸ್ವತಃ ಮತ್ತು ತನ್ನ ಗೆಳೆಯ ಹಾಗೂ ಮಾರ್ಗದರ್ಶಿ ಕಾಲವಾದ ನಂತರ ಬದುಕುಳಿದ ಎಂಗೆಲ್ಸ್‌ಗೆ ಕ್ರಾಂತಿಕಾರಿ ಆಂದೋಲನದ ಅನುಭವಗಳನ್ನು ಮೂಲ ತಿಳುವಳಿಕೆಯೊಂದಿಗೆ ಸಮ್ಮಿಳನಗೊಳಿಸಿ ಅದನ್ನು ಶ್ರೀಮಂತಗೊಳಿಸಲು ಸಹಾಯವಾಯಿತು. ಉದಾಹರಣೆಗೆ– ಮಾರ್ಕ್ಸ್ ಮತ್ತು ಎಂಗೆಲ್ಸರ ಬೋಧನೆಗಳನ್ನು ಸರಳ, ಸಂಕ್ಷಿಪ್ತ ಹಾಗೂ ಜನಪ್ರಿಯ ಭಾಷೆಗಳಲ್ಲಿ ಪ್ರತಿಪಾದಿಸುವ ಕಮ್ಯುನಿಸ್ಟ್ ಮ್ಯಾನಿಫೆಸ್ಟೋನಲ್ಲಿ 1871ರ ಪ್ಯಾರಿಸ್ ಕಮ್ಯೂನ್‌ನ ಅನುಭವದ ನಂತರ ಈ ಇಬ್ಬರು ಲೇಖಕರು ಜತೆಯಾಗಿ ಪ್ರಮುಖ ತಿದ್ದುಪಡಿಯೊಂದನ್ನು ತಂದರು. ಕಾರ್ಮಿಕ ವರ್ಗ ಹಿಂದೆ ತಿಳಿಸಿದಂತೆ ಹಾಲಿ ಇರುವ ಪ್ರಭುತ್ವ ಯಂತ್ರವನ್ನು ಕೈವಶ ಮಾಡಿಕೊಳ್ಳಲು ಆಗುವುದಿಲ್ಲ. ಅದನ್ನು ನಾಶಗೊಳಿಸಲೇಬೇಕು. ಇದೇ ಆ ತಿದ್ದುಪಡಿ.

ಮತ್ತೆ ಹತ್ತೊಂಭತ್ತನೇ ಶತಮಾನದ ಮಧ್ಯಭಾಗದ ಬೂರ್ಜ್ವಾ ಕ್ರಾಂತಿಗಳ ಕುರಿತಾದ ಮಾರ್ಕ್ಸ್‌ರ ಪ್ರಮುಖ ಕೃತಿಯೊಂದರ ಮುನ್ನುಡಿಯಲ್ಲಿ ಎಂಗೆಲ್ಸ್ ಯೂರೋಪಿನ ಕ್ರಾಂತಿಕಾರೀ ಚಳುವಳಿಯನ್ನು ವಿಶ್ಲೇಶಿಸುವಲ್ಲಿ ತಾವಿಬ್ಬರು ಎಲ್ಲಿ ಮತ್ತು ಹೇಗೆ ತಪ್ಪಿದರೆಂದು ವಿವರಿಸಿದ್ದಾರೆ. ಕ್ರಾಂತಿಕಾರಿ ಚಳುವಳಿಯನ್ನು ಹರಿಬಿಟ್ಟು, ಅದರ ನಂತರ ಅದು ಇಳಿಮುಖವಾಗಲು ಕಾರಣವಾದ ಪರಿಸ್ಥಿತಿಯ ಬದಲಾವಣೆಯನ್ನು ಅಧ್ಯಯನ ಮಾಡುವಲ್ಲಿ ಹಾಗೂ ವಿವೇಚಿಸುವುದರಲ್ಲಿ ವಿಫಲರಾದೆವು ಎಂದಿದ್ದಾರೆ ಅವರು. ಕಾರ್ಮಿಕ ವರ್ಗದ ಕ್ರಾಂತಿಯ ತಂತ್ರವು ಆರ್ಥಿಕ ವ್ಯವಸ್ಥೆಯ ಮೇಲ್ಮುಖ ಅಥವಾ ಅದೋಮುಖ ಹರಿವಿಗನುಗುಣವಾಗಿ ಕ್ರಾಂತಿಕಾರಿ ಚಳುವಳಿಯ ಅಲೆಗಳಲ್ಲಿ ಕಂಡುಬರುವ ಇಳಿತ ಭರಿತವನ್ನು ಆಧರಿಸಿರಬೇಕು ಎಂಬ ಗಂಭೀರ ಪಾಠವನ್ನು ಇದರಿಂದ ಅವರು ತಿಳಿದರು. ನಮಗೆ ತಿಳಿದಿರುವಂತೆ ಮಾರ್ಕ್ಸ್ ತನ್ನ ಶೈಕ್ಷಣಿಕ ಜೀವನವನ್ನು ತತ್ವಶಾಸ್ತ್ರದ ವಿದ್ಯಾರ್ಥಿಯಾಗಿ ಆರಂಭಿಸಿದ ಮಾರ್ಕ್ಸ್ ಹಾಗೂ ಎಂಗೆಲ್ಸ್ ಜತೆಯಾಗಿ 'ಕಮ್ಯುನಿಸ್ಟ್ ಪ್ರಣಾಳಿಕೆ' ಯನ್ನು ರಚಿಸುವವರೆಗಿನ ಅವರಿಬ್ಬರ ಎಲ್ಲ ಕೃತಿಗಳೂ ಜರ್ಮನಿಯ ಯುವ ಹೆಗೆಲಿಯನ್ನರಲ್ಲಿ ಅತ್ಯಂತ ಮೇಧಾವಿಗ

ಳಿಬ್ಬರು **ದ್ವಂದ್ವಮಾನ ಹಾಗೂ ಚಾರಿತ್ರಿಕ ಭೌತವಾದದ** ಪ್ರತಿಪಾದಕರಾಗಿ ಮಾರ್ಪಾಡುಗೊಂಡ ಪ್ರಕ್ರಿಯೆಯನ್ನು ಬಿಂಬಿಸುತ್ತವೆ. ಆ ಕಾಲಾವಧಿಯ ವಿಪುಲ ಸಾಹಿತ್ಯದಲ್ಲಿ **ಹೆಗೆಲಿಯನ್ ದ್ವಂದ್ವಾತ್ಮಕತೆ** ಯಲ್ಲಿರುವ ಎಲ್ಲಾ ವೈಜ್ಞಾನಿಕ ಅಂಶಗಳನ್ನು ಉಳಿಸಿಕೊಂಡು **ಹೆಗೆಲರ ಭಾವನಾವಾದ**ವನ್ನು ಅಲ್ಲಗಳೆದ ಸಿದ್ಧಾಂತವೊಂದು ಹೇಗೆ ವಿಕಾಸಗೊಂಡಿತು ಎಂಬುದನ್ನು ಕಾಣಬಹುದು. ಅದೇ ರೀತಿ, ಫ್ಯೂಯರ್ ಬಾಹ್‌ರ ಭೌತವಾದವನ್ನು ಅಧ್ಯಯನ ಮಾಡಿ, ಅದನ್ನನುಸರಿಸಿದ ಯುವಕ ಮಾರ್ಕ್ಸ್ ಫ್ಯೂಯರ್‌ಬಾಹ್‌ರ ಭೌತವಾದದ ತಿರುಳನ್ನು ಸ್ವೀಕರಿಸಿ ಅವರಲ್ಲಿದ್ದ ಆಧ್ಯಾತ್ಮಿಕ ಅಂಶವನ್ನು ತ್ಯಜಿಸಿದ.

ಆದ್ದರಿಂದ ಈ ಆರಂಭದ ಕೃತಿಗಳಲ್ಲಿ ಅಪ್ರಬುದ್ಧ ಯುವಕ ಮಾರ್ಕ್ಸ್‌ನ ಅಂಶಗಳಿರುವುದು ಸ್ವಾಭಾವಿಕವೇ. ಆದಾಗ್ಯೂ ಮಾರ್ಕ್ಸ್ ತೀವ್ರಗತಿಯಲ್ಲಿ ತನ್ನ ಅಪ್ರಭುದ್ಧತೆಯನ್ನು ಮೀರುತ್ತಾ ದ್ವಂದ್ವಮಾನ ಹಾಗೂ ಚಾರಿತ್ರಿಕ ಭೌತವಾದದ ಮೊದಲ ಹಾಗೂ ಅತ್ಯಂತ ಪ್ರತಿಭಾಪೂರ್ಣ ಪ್ರತಿಪಾದನೆ – ಕಮ್ಯೂನಿಸ್ಟ್ ಮ್ಯಾನಿಫೆಸ್ಟೋವನ್ನು ಎಂಗೆಲ್ಸ್‌ರೊಂದಿಗೆ ರಚಿಸಿದ ಪ್ರಬುದ್ಧ ಮಾರ್ಕ್ಸ್ ಆಗಿ ಬೆಳೆಯತೊಡಗಿದ್ದ. ಅದೇ ರೀತಿ ಎಂಗೆಲ್ಸ್‌ನ ದಕ್ಷ ಸಹಾಯದೊಂದಿಗೆ ಪ್ರಬುದ್ಧ ಸಿದ್ಧಾಂತಿ ಮಾರ್ಕ್ಸ್, ರಾಜಕೀಯ ಅರ್ಥಶಾಸ್ತ್ರದ ಉಜ್ವಲ ಕೃತಿ 'ಕ್ಯಾ ಪಿ ಟ ಲ್' (ಬಂಡವಾಳ) ರಚಿಸಿದರು. ಎಂಗೆಲ್ಸ್ ಮಾತುಗಳಲ್ಲಿ ಹೇಳುವುದಾದರೆ ಈ ಕೃತಿ "ಕಾರ್ಮಿಕ ವರ್ಗದ ಬೈಬಲ್" ಆಗಿಬಿಟ್ಟಿದೆ. ಈ ರೀತಿ ಯುವಹೆಗೆಲಿಯನ್ ತತ್ವಜ್ಞಾನಿ ಮಾರ್ಕ್ಸ್, ಎಂಗೆಲ್ಸ್‌ರ ಸಹಕಾರದೊಂದಿಗೆ ರಾಜಕೀಯ ಅರ್ಥಶಾಸ್ತ್ರಜ್ಞನಾಗಿ ಪ್ರ ಪ ಂ ಚ ದ ಕಾರ್ಮಿಕ ವರ್ಗದ ಉದಯೋನ್ಮುಖಿ ನಾಯಕನಾಗಿ ತನ್ನನ್ನು ಪರಿವರ್ತಿಸಿಕೊಂಡ.

ಮಾರ್ಕ್ಸ್ ವಾಸ್ತವವಾಗಿ ತತ್ವಜ್ಞಾನಿಯೇ, ರಾಜಕೀಯ ಅರ್ಥಶಾಸ್ತ್ರಜ್ಞನೇ ಅಥವಾ ಕ್ರಾಂತಿಕಾರಿ ಕಾರ್ಮಿಕ ವರ್ಗದ ವ್ಯವಹಾರ ಕುಶಲ ನಾಯಕನೇ ಎಂಬ ಪ್ರಶ್ನೆಯನ್ನು ಕೆಲವೊಮ್ಮೆ ಕೇಳಲಾಗುತ್ತದೆ. ತತ್ವಜ್ಞಾನಿಗಳ ಗುಂಪಿಗೆ ಸೇರಿದ ಬುದ್ಧಿಜೀವಿಗಳು ಆತ ತಮ್ಮಲ್ಲೊಬ್ಬ ಎಂದು ಹೇಳಿಕೊಳ್ಳುತ್ತಾರೆ. ತಮ್ಮ ಬೌದ್ಧಿಕ ಕ್ಷೇತ್ರದಲ್ಲಿ ಆತನ ಅಮೂಲ್ಯ ಕೊಡುಗೆಗಳಿವೆ ಎಂದು ಹೇಳಿ ಆತನ ತತ್ವಶಾಸ್ತ್ರದ ಸಿದ್ಧಾಂತಗಳಲ್ಲಿ ಗಂಭೀರ ದೋಷಗಳಿವೆಯೆನ್ನುತ್ತಾರೆ. ರಾಜಕೀಯ ಅರ್ಥಶಾಸ್ತ್ರದ ಕ್ಷೇತ್ರಕ್ಕೆ ಸೇರಿದ ವಿದ್ವಾಂಸರು ಆತ ತಮ್ಮ ಕ್ಷೇತ್ರಕ್ಕೆ ಸೇರಿದವನೆಂದು ಹೇಳಿಕೊಳ್ಳುತ್ತಾರೆ. ಆದರೆ ಬಂಡವಾಳಶಾಹಿಯ ಬೆಳವಣಿಗೆ ಹಾಗೂ ಅದು ಎದುರಿಸುವ ಬಿಕ್ಕಟ್ಟಿನ ಬಗ್ಗೆ ಮಾ ರ್ಕ್ಸ್ ವಾ ದೀ ಸಿದ್ಧಾಂತದಲ್ಲಿ ಲೋಪಗಳನ್ನು ಹೆಕ್ಕಿ ತೋರಿಸಲಾರಂಭಿಸುತ್ತಾರೆ. ರಾಜಕೀಯ ವಿಜ್ಞಾನಿಗಳೂ ತಮಗೆ ಸಂಬಂಧಿಸಿದ ಸಿದ್ಧಾಂತಗಳಲ್ಲಿ ಆತನ ಪಾಂಡಿತ್ಯವನ್ನು ಹೊಗಳುತ್ತಾರೆ. ಆದರೆ ಮುಂದುವರಿದು ಅವರು ಮಾರ್ಕ್ಸ್‌ನೊಂದಿಗೆ ಸಂಬದ್ಧವಾದ ಕ್ರಾಂತಿಕಾರೀ ಸಿದ್ಧಾಂತಗಳು ಹಾಗೂ ಕಾರ್ಯಾಚರಣೆಯನ್ನು ಟೀಕಿಸುತ್ತಾರೆ.

ದುರದೃಷ್ಟದಿಂದ ಅವರೆಲ್ಲರ ಸ್ಥಿತಿ ಆನೆಯನ್ನು ಮುಟ್ಟಿ ತಾವು ಮುಟ್ಟಿದ ಅದರ ಭಾಗಗಳನ್ನೇ ಆನೆಯೆಂದು ಹೇಳಿದ ಏಳು ಜನ ಕುರುಡರ ಸ್ಥಿತಿಯಾಗಿದೆ. ಮಾರ್ಕ್ಸ್ ಜಾಗತಿಕ ತತ್ವಶಾಸ್ತ್ರದ ಇತಿಹಾಸದಲ್ಲಿ ಸೇರಿಸುವಷ್ಟು ಎತ್ತರದ ವ್ಯಕ್ತಿತ್ವವಿರುವ ಪ್ರತಿಭಾವಂತ ತತ್ವಜ್ಞಾನಿಯೆಂಬುದು ನಿಸ್ಸಂಶಯ. ಜಗತ್ತಿನ ರಾಜಕೀಯ ಅರ್ಥಶಾಸ್ತ್ರಜ್ಞ ಹಾಗೂ ರಾಜಕೀಯ ವಿ ಜ್ಞಾ ನಿ ಗ ಳ ಲ್ಲೂ ಆತನಿಗೆ ಅಷ್ಟೇ ಉನ್ನತವಾದ ಸ್ಥಾನವಿದೆ. ಆದರೆ ಆತ ತನ್ನ ಮೊದಲಿನವರು ಹಾಗೂ ಸಮಕಾಲೀನರಿಗಿಂತ ಭಿನ್ನವಾದ ತತ್ವಜ್ಞಾನಿ, ರಾಜಕೀಯ ಅರ್ಥಶಾಸ್ತ್ರಜ್ಞ ಹಾಗೂ ರಾಜಕೀಯ ವಿಜ್ಞಾನಿಯಾಗಿದ್ದ. ಒಂದು ಹೊಸ ವರ್ಗದ, ಇತರ ಎಲ್ಲಾ ತತ್ವಜ್ಞಾನಿಗಳು, ರಾಜಕೀಯ ಅರ್ಥಶಾಸ್ತ್ರಜ್ಞರು ಹಾಗೂ ರಾಜಕೀಯ ವಿಜ್ಞಾನಿಗಳು ಪ್ರತಿನಿಧಿಸುವ ವರ್ಗಗಳಿಗಿಂತ ಭಿನ್ನವಾದ ಹಾಗೂ ಅವಕ್ಕೆ ವಿರುದ್ಧವಾದ ವರ್ಗದ ತತ್ವಜ್ಞಾನಿ, ರಾಜಕೀಯ ಅರ್ಥಶಾಸ್ತ್ರಜ್ಞ ಹಾಗೂ ರಾಜಕೀಯ ವಿಜ್ಞಾನಿ ಆಗಿದ್ದ ಆತ.

ಕಾರ್ಮಿಕ ವರ್ಗದ ಸಿದ್ಧಾಂತಿ

ಮಾರ್ಕ್ಸ್‌ನ ಆರಂಭದ ಬರಹಗಳನ್ನು ಅಧ್ಯಯನ ಮಾಡಿದರೆ ಆತ ಹೆಗೆಲಿಯನ್ ದ್ವಂದ್ವಮಾನ ವಿಧಾನದ ಪ್ರಕ್ರಿಯೆಯಾಗಿಯೇ ಆ ಸಮಯದಲ್ಲಿ ಯುರೋಪಿನ ಸಮಾಜದಲ್ಲಿ ಏನು ಹೊಸದಾಗಿ ಮೂಡುತ್ತಿದೆಯೆಂಬುದನ್ನು ಹುಡುಕುತ್ತಿದ್ದ, ಕಂಡುಹಿಡಿಯುತ್ತಲಿದ್ದ ಎಂಬುದನ್ನು ಕಾಣಬಹುದು. ಬೂರ್ಜ್ವಾ ವರ್ಗ ಹಾಗೂ ಕಾರ್ಮಿಕ ವರ್ಗ ಎಂಬ ಎರಡು ಹೊಸ ವರ್ಗಗಳು ಬೆಳೆಯುತ್ತಿರುವ ಬಂಡವಾಳಶಾಹಿ ಸಮಾಜದಲ್ಲಿ ಮೂಡಿಬರುತ್ತಿದ್ದುದನ್ನು ನೋಡಿದ ಆತ ವರ್ಗ ಸಮಾಜದ ಉದಯದೊಂದಿಗೆ ಸ್ವ–ಪರಕೀಯತೆಯೆಡೆಗೆ ತಳ್ಳಲ್ಪಟ್ಟ ಮಾನವಕುಲದ ವಿಮುಕ್ತಿಯ ಪ್ರಕ್ರಿಯೆಯನ್ನು ಈ ವರ್ಗಗಳ ನಡುವಿನ ವೈರುಧ್ಯದಲ್ಲಿ ಕಾಣುತ್ತಾನೆ.

ಹೆಗೆಲಿಯನ್ನರಲ್ಲಿ ಜನಪ್ರಿಯವಾಗಿದ್ದ ಪರಕೀಯತೆಯ ಸಿದ್ಧಾಂತವನ್ನು ಕಾರ್ಮಿಕ ವರ್ಗದ ಈ ಇಬ್ಬರು ಉದಯೋನ್ಮುಖಿ ಸಿದ್ಧಾಂತಿಗಳು ಉತ್ಪಾದನೆಯಲ್ಲಿ ನಿರತವಾದ ವರ್ಗಗಳಿಗೆ ತಮ್ಮ ಶ್ರಮದಿಂದ ಉತ್ಪತ್ತಿಹೊಂದಿದ ವಸ್ತುಗಳು ಪರಕೀಯವಾಗುವ ಪ್ರಕ್ರಿಯೆಯಾಗಿ ಕಂಡರು. ಕಾರ್ಮಿಕ ವರ್ಗ ಬೂರ್ಜ್ವಾ ವರ್ಗವನ್ನು ಕ್ರಾಂತಿಯ ಮೂಲಕ ಕಿತ್ತೆಸೆಯುವಲ್ಲಿ ಎಲ್ಲಾ ಉತ್ಪಾದನಾನಿರತ ವರ್ಗಗಳ ನೇತೃತ್ವ ವಹಿಸಿ ಹೊಸ ಸಮಾಜ ಕಟ್ಟಿದಾಗ ಉತ್ಪಾದನಾ ನಿರತ ವರ್ಗಗಳು

ತಮ್ಮ ಈ ಪರಕೀಯತೆಯನ್ನು ಮೀರಿ ನಿಲ್ಲುತ್ತವೆ. ಈ ಹೊಸ ಸಮಾಜದಲ್ಲಿ ಮಾನವನ ಸ್ವ–ಪರಕೀಯತೆ ಹಳೆಯ ಮಾತಾಗಿಬಿಡುತ್ತದೆ.

ಈ ಪ್ರಕ್ರಿಯೆಯ ಕುರಿತು ಮಾರ್ಕ್ಸ್ ಎಂಗೆಲ್ಸರ ಚರ್ಚೆಗಳಲ್ಲಿ ಹೆಗೆಲಿಯನ್ ಛಾಯೆಗಳು ಕಂಡುಬಂದರೂ ಈ ಇಬ್ಬರು ಯುವ ಹೆಗೆಲಿಯನ್ನರು ತಮ್ಮ ಹೆಗೆಲ್‌ವಾದದಾಚೆಗೆ ಶೀಘ್ರವಾಗಿ ಬೆಳೆಯುತ್ತಿರುವುದನ್ನು ಕಾಣಬಹುದು. ಬೆಳೆಯುತ್ತಿರುವ ಕಾರ್ಮಿಕ ವರ್ಗ–ಮಾನವಕುಲದ ವಿಮೋಚಕ ವರ್ಗವೆಂಬ ಕ್ರಾಂತಿಕಾರೀ ನಿರ್ಣಯಕ್ಕೆ ಬಂದ ಅವರು ಮುಂದೆ ಸಮಾಜವಾದಕ್ಕೆ ಅನಿವಾರ್ಯವಾಗಿಯೇ ಸ್ಥಾನ ಬಿಟ್ಟು ಕೊಡಬೇಕಾದ ಬಂಡವಾಳ ಶಾಹಿಯ ಹುಟ್ಟು, ಬೆಳವಣಿಗೆ ಹಾಗೂ ಬಿಕ್ಕಟ್ಟಿನ ವ್ಯವಸ್ಥಿತ ಅಧ್ಯಯನಕ್ಕೆ ತೊಡಗುತ್ತಾರೆ. ಈ ಪ್ರಕ್ರಿಯೆಯಲ್ಲಿಯೇ ಈ ಎರಡು ಯುವ ಹೆಗೆಲಿಯನ್ ತತ್ವಜ್ಞಾನಿಗಳು ಜಾಗತಿಕ ಪಟ್ಟದಲ್ಲಿ ಕ್ರಾಂತಿಕಾರಿ ಕಾರ್ಮಿಕ ವರ್ಗದ ಸಿದ್ಧಾಂತಿಗಳಾಗಿ ತಮ್ಮನ್ನು ಅಭಿವೃದ್ಧಿ ಪಡಿಸಿಕೊಂಡದ್ದು.

ಬೇರೆ ಮಾತಿನಲ್ಲಿ ಹೇಳುವುದಾದರೆ ತತ್ವಜ್ಞಾನಿ ಮಾರ್ಕ್ಸ್‌ನಲ್ಲಿ ಪ್ರಮುಖವಾಗಿ ಕಾಣಬರುವುದು ಜಾಗತಿಕ ಬಂಡವಾಳ ಶಾಹಿಯ ವಿರುದ್ಧ ಕಾರ್ಮಿಕ ವರ್ಗದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕ್ರಿಯಾಶಾಲಿ ವ್ಯಕ್ತಿ ಸುಪ್ರಸಿದ್ಧ ಫ್ಯೂಯೆರ್‌ಬಾಹ್‌ನ ಕುರಿತು 'ಮಹಾಪ್ರಬಂಧ"ದಲ್ಲಿ ಆತನೇ ಹೇಳುವಂತೆ "ತತ್ವಜ್ಞಾನಿಗಳು ಇದುವರೆಗೆ ಪ್ರಪಂಚದ ವ್ಯಾಖ್ಯಾನ ಮಾಡಿದ್ದಾರೆ. ಆದರೆ ಆಗಬೇಕಾಗಿರುವುದು ಪ್ರಪಂಚದ ಬದಲಾವಣೆ" ಸಕ್ರಿಯ ಕ್ರಾಂತಿಕಾರಿ ಕೆಲಸಗಳಿಂದ ಪ್ರತ್ಯೇಕಗೊಂಡ ಕೇವಲ ಅಕಡೆಮಿಕ್ ಅಧ್ಯಯನ ಹಾಗೂ ಸಂಶೋಧನೆ ಮಾರ್ಕ್ಸ್‌ವಾದಕ್ಕೆ ಪರಕೀಯವಾದದ್ದು. ಅದೇ ರೀತಿ ಅಧ್ಯಯನ, ಸಂಶೋಧನೆಯೊಂದಿಗೆ ಸಂಬಂಧವಿಲ್ಲದ ಸಕ್ರಿಯ ಕ್ರಾಂತಿಕಾರಿ ಕೆಲಸವೂ ಕೂಡಾ.

ಮಾರ್ಕ್ಸ್‌ನ ನಿಜವಾದ ಕೊಡುಗೆ

ದ್ವಂದ್ವಮಾನ ವಿಧಾನ, ಭೌತವಾದೀ ದೃಷ್ಟಿಕೋನ, ಮತ್ತು ವರ್ಗ ಹೋರಾಟದ ಸಿದ್ಧಾಂತ – ಇವು ಮಾರ್ಕ್ಸ್ ಸ್ವತಃ ಹೇಳಿರುವಂತೆ ಆತನದೇ ವಿಶಿಷ್ಟ ಕೊಡುಂಗೆಗಳೇನೂ ಅಲ್ಲ. ಹೆಗೆಲ್‌ನಿಂದ ದ್ವಂದ್ವಮಾನ ವಿಧಾನ, ಫ್ಯೂಯರ್‌ಬಾಹ್ ಹಾಗೂ ಹಿಂದಿನ ಭೌತವಾದಿಗಳಿಂದ ಭೌತವಾದ, ಆಡಂ ಸ್ಮಿತ್ ಹಾಗೂ ರಿಕಾರ್ಡೊ ಇತ್ಯಾದಿ ರಾಜಕೀಯ ಅರ್ಥಶಾಸ್ತ್ರಜ್ಞರಿಂದ ವರ್ಗ ಹೋರಾಟದ ಕಲ್ಪನೆಯನ್ನು ಉತ್ತರಾಧಿಕಾರದಲ್ಲಿ ಪಡೆದ ಮಾರ್ಕ್ಸ್ ಮಾಡಿದ್ದ ಪ್ರಮುಖ ಕೆಲಸವೆಂದರೆ ಇವನ್ನು ಅರಗಿಸಿಕೊಂಡು, ಸಮ್ಮಿಳಿತಗೊಳಿಸಿ ಜಾಗತಿಕ ಬಂಡವಾಳ ಶಾಹಿಯ ವಿರುದ್ಧ ಬೃಹತ್ ಹೋರಾಟದಲ್ಲಿ ಜಾಗತಿಕ ಕಾರ್ಮಿಕ ವರ್ಗದ ಕೈಯಲ್ಲಿ ತೀಕ್ಷ್ಣ ಅಸ್ತ್ರವಾಗುವ ಸಿದ್ಧಾಂತವನ್ನು ರೂಪಿಸಿದ್ದು.

ಹೆಗೆಲಿಯನ್ ದ್ವಂದ್ವಾತ್ಮಕತೆ ತಲೆಕೆಳಗಾಗಿ ನಿಂತಿತ್ತು ಎಂದ ಮಾರ್ಕ್ಸ್. ಅದು ಭಾವನಾವಾದಿ ದ್ವಂದ್ವಾತ್ಮಕತೆ. ಮಾರ್ಕ್ಸ್ ಅದನ್ನು ಸರಿಪಡಿಸಿದ; ಭೌತವಾದದ ಆಧಾರದ ಮೇಲೆ ನಿಲ್ಲಿಸಿದ.

ಭೌತವಾದಿ ತತ್ವಶಾಸ್ತ್ರ ಅಗ ಅಧ್ಯಾತ್ಮಿಕವಾಗಿತ್ತು. ಮಾರ್ಕ್ಸ್ ಅದನ್ನು ದ್ವಂದ್ವಾತ್ಮಕ ಭೌತವಾದವನ್ನಾಗಿ ಪರಿವರ್ತಿಸಿದ.

'ವರ್ಗ ಹೋರಾಟವನ್ನು' ಮಾರ್ಕ್ಸ್ 'ಕಾರ್ಮಿಕ ವರ್ಗದ ಸರ್ವಾಧಿಕಾರ'ವನ್ನಾಗಿ ಅಭಿವೃದ್ಧಿ ಪಡಿಸಿದ. ಇದು ಕೇವಲ ಪರಿವರ್ತನೆಯ ಸಮಯದಲ್ಲಿ. ನಂತರ ಬರುವ ಹೊಸ-ಸಮಾಜದಲ್ಲಿ ವರ್ಗಗಳಿರುವುದಿಲ್ಲ, ವರ್ಗಹೋರಾಟವಿರುವುದಿಲ್ಲ. ಅದು ಎಂಗೆಲ್ಸ್‌ರ ಮಾತಿನಲ್ಲಿ "ಮಾನವಕುಲ ಆವಶ್ಯಕತೆಯ ಸಾಮ್ರಾಜ್ಯದಿಂದ ಸ್ವಾತಂತ್ರ್ಯದ ಸಾಮ್ರಾಜ್ಯದೆಡೆಗೆ ಮುನ್ನಡೆದ" ಘಟ್ಟ.

ಇಲ್ಲಿದೆ ಸದ್ಯದ ವಾಸ್ತವತೆಯ ಗಟ್ಟಿ ನೆಲದಲ್ಲಿ ನಿಂತು ಭವಿಷ್ಯದಲ್ಲಿ ಬಹಳ ದೂರ ಸಾಗಬಲ್ಲ ಋಷಿಯೊಬ್ಬಾತನ ದೂರದೃಷ್ಟಿ. ಸದ್ಯದ ವಾಸ್ತವತೆಯಲ್ಲಿ ಒಂದೆಡೆ ಅತ್ಯಂತ ಅಮಾನವೀಯ ದಬ್ಬಾಳಿಕೆಯಿದ್ದರೆ, ಇನ್ನೊಂದೆಡೆ ಅತ್ಯಂತ ವೀರೋಚಿತ ಹಾಗೂ ಧೈರ್ಯಶಾಲೀ ಹೋರಾಟವಿದೆ. ಮನುಷ್ಯನಲ್ಲಿ ಅತ್ಯಂತ ಕೀಳಾದ ಹಾಗೂ ಕ್ರೂರವಾದದ್ದಕ್ಕೆ ವಿರುದ್ಧವಾಗಿ ಮಾನವಕುಲದಲ್ಲಿ ಉಜ್ವಲವಾದುದೂ ಉನ್ನತವಾದುದು ಇರುವ ವಾಸ್ತವತೆಯಿದ್ದು ಶೋಷಕರು ಹಾಗೂ ಶೋಷಿತರು, ಬೂರ್ಜ್ವಾ ವರ್ಗ ಮತ್ತು ಕಾರ್ಮಿಕವರ್ಗ ಪರಸ್ಪರ ಎದುರಿಸಿ ಚಾರಿತ್ರಿಕ ಕದನ ನಡೆಸುತ್ತಾರೆ. ಅಂತಿಮವಾಗಿ ಅದು ವರ್ಗ ಸಮಾಜದಿಂದ ವರ್ಗರಹಿತ ಸಮಾಜದೆಡೆಗೆ ಮಾನವತೆಯ ಪರಿವರ್ತನೆಯಲ್ಲಿ ಕೊನೆಗೊಳ್ಳುತ್ತದೆ.

ಆರ್ಥಿಕ ಸಿದ್ಧಾಂತಗಳು

ಕಾರ್ಲ್ ಮಾರ್ಕ್ಸ್‌ರ ಆರ್ಥಿಕ ಸಿದ್ಧಾಂತಗಳ ಬಗ್ಗೆ ಒಂದು ಮಾತು. ವರ್ಗ ಹೋರಾಟದ ಸಿದ್ಧಾಂತದಂತೆ ಮೌಲ್ಯದ ಶ್ರಮ ಸಿದ್ಧಾಂತವನ್ನೂ ತಾನು ತನ್ನ ಹಿಂದಿನ ರಾಜಕೀಯ ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್ ಮತ್ತು ರಿಕಾರ್ಡೊರಿಂದ ಪಡೆದುದಾಗಿ ಮಾರ್ಕ್ಸ್ ಹೇಳುತ್ತಾನೆ. ಆದರೆ ಅದಕ್ಕೆ ಮಾರ್ಕ್ಸ್ ಇನ್ನೊಂದು ಪ್ರಶ್ನೆ ಸೇರಿಸಿದ. ಶಾಸ್ತ್ರೀಯ ಅರ್ಥಶಾಸ್ತ್ರಜ್ಞರ ಪ್ರಕಾರ ಬಂಡವಾಳಶಾಹಿ ಸಮಾಜದಲ್ಲಿ ಎಲ್ಲಾ ಮೌಲ್ಯಗಳ ಮೂಲವಾದ ಶ್ರಮದ ಮೌಲ್ಯದ ಮೂಲ ಯಾವುದು? **ಶ್ರಮಶಕ್ತಿ** ಹಾಗೂ **ಶ್ರಮ** ಇವುಗಳ ನಡುವೆ ವ್ಯತ್ಯಾಸವೆಂಬುದೇ ಮಾರ್ಕ್ಸ್ ಈ ಪ್ರಶ್ನೆಗೆ ನೀಡಿದ ಉತ್ತರ.

ಇದು ಬಳಕೆಯಾದಾಗ ತನ್ನ ಉತ್ಪಾದನೆಗೆ ಬೇಕಾದುದಕ್ಕಿಂತ ಹೆಚ್ಚು ಮೌಲ್ಯ ಉತ್ಪಾದಿಸುವ ಏಕಮಾತ್ರ ಸರಕು.

ಬೇರೆ ಮಾತಲ್ಲಿ ಹೇಳುವುದಾದರೆ ಶ್ರಮಿಕ ಹಾಗೂ ಆತನ ಕುಟುಂಬವನ್ನು ನಿರ್ವಹಿಸಲು ಬೇಕಾದ ಅಗತ್ಯ ಸಾಮಾನುಗಳ ಅಥವಾ ಸರಕುಗಳ ಉತ್ಪಾದನೆಯಲ್ಲಿ ಬಳಕೆಯಾಗುವ ಶ್ರಮ ಶಕ್ತಿಯ ಮೌಲ್ಯ, ಶ್ರಮಶಕ್ತಿಯನ್ನು ಪಡೆದಾತ ಅದನ್ನು ಕೆಲಸಕ್ಕೆ ಹಚ್ಚಿ (ಬಳಸಿ) ಪಡೆಯುವ ಉತ್ಪಾದನೆಗಿಂತ ಕಮ್ಮಿ ಯಿರುತ್ತದೆ.

ಈ ಎರಡರ ನಡುವಣ ವ್ಯತ್ಯಾಸ ಅಂದರೆ **ಶ್ರಮಶಕ್ತಿಯ ಮೌಲ್ಯ ಅಥವಾ ಕೂಲಿ** ಹಾಗೂ **ಶ್ರಮದ ಮೌಲ್ಯ** (ಇದು ಉತ್ಪಾದನೆಗೊಂಡ ವಸ್ತುವಿನ ಮೌಲ್ಯ) ಇವುಗಳ ನಡುವಿನ ವ್ಯತ್ಯಾಸವೇ ಮಾರ್ಕ್ಸ್ ವಿವರಿಸಿದ **ಅಧಿಕ ಮೌಲ್ಯ** ಇದು **ಲಾಭ**ವಾಗಿ ಪರಿವರ್ತಿತಗೊಂಡು ಬಂಡವಾಳಶಾಹಿಗಳ ವಿವಿಧ ವಿಭಾಗಗಳಿಗೆ ಅವರವರ ಆದಾಯವಾಗಿ ಹಂಚಲ್ಪಡು ತ್ತದೆ-ಅಂದರೆ ಕೈಗಾರಿಕೋದ್ಯಮಿಗಳು ಹಾಗೂ ವ್ಯಾಪಾರಿಗಳಿಗೆ ಲಾಭವಾಗಿ, ಲೇವಾದೇವಿಗಾರರಿಗೆ ಅಥವಾ ಬ್ಯಾಂಕುಗಳಿಗೆ ಬಡ್ಡಿಯಾಗಿ, ಭೂಮಾಲಕರಿಗೆ ಗೇಣಿಯಾಗಿ ಇತ್ಯಾದಿ.

ಮಾರ್ಕ್ಸ್‌ನ ವಿದ್ವತ್ಪೂರ್ಣ ಕೃತಿ "ಬಂಡವಾಳ" (ಕ್ಯಾಪಿಟಲ್)ದಲ್ಲಿರುವ ಅಂತರಾಳ ಇದು. ಈ ಕೃತಿಯ ಮೊದಲ ಸಂಪುಟವನ್ನು ಬಿಟ್ಟು ಉಳಿದ ಯಾವುದನ್ನೂ ಅಂತಿಮ ರೂಪಕ್ಕೆ ತಂದು ಮುಗಿಸುವುದು ಆತನ ಜೀವಮಾನಾವಧಿಯಲ್ಲಿ ಆಗಲಿಲ್ಲ. ಆತನ ಗೆಳೆಯ ಹಾಗೂ ಸಹಯೋಗಿ ಎಂಗೆಲ್ಸ್ ಆತ ಬಿಟ್ಟು ಹೋದ ಟಿಪ್ಪಣಿಗಳನ್ನು ಸಂಪಾದಿಸಿ ಎರಡನೇ ಹಾಗೂ ಮೂರನೇ ಸಂಪುಟ ತಯಾರಿಸಬೇಕಾಯಿತು. ಈ ಕೃತಿ ಸಮಸ್ತವಾಗಿ ಬಿಂಬಿಸುವ ಅಂಶವೆಂದರೆ ಪ್ರಕೃತಿ, ಸಮಾಜ ಹಾಗೂ ಮಾನವ ಚಿಂತನೆಯ ವಿದ್ಯಮಾನಗಳಂತೆ ಬಂಡವಾಳ ಶಾಹಿ ವ್ಯವಸ್ಥೆಯೂ ತನ್ನ ಆಂತರಿಕ ವೈರುಧ್ಯಗಳು ತೀವ್ರ ಗೊಳ್ಳುವುದರ ಮೂಲಕ ಅದು ಕುಸಿಯುವವರೆಗೂ ಬೆಳೆದು ಸಮಾಜವಾದದ ಹೊಸ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ. ಈ ಹೊಸ ವ್ಯವಸ್ಥೆ ತನ್ನ ದಾರಿ ಮುಗಿಸಿ ಸಮತಾವಾದ (ಕಮ್ಯುನಿಸಂ) ವಾಗಿ ಬೆಳೆಯುತ್ತದೆ.

ಈ ದೃಷ್ಟಿ ದ್ವಂದ್ವಮಾನ ಚಾರಿತ್ರಿಕ ಭೌತವಾದವನ್ನು ಪ್ರತಿಪಾದಿಸಿದ ಈ ಇಬ್ಬರು ಚಿಂತಕರ ವೈಯಕ್ತಿಕ ಆಸೆ ಹಾಗೂ ಯೋಚನೆಯ ಮೇಲೆ ನಿಂತ ದೃಷ್ಟಿಯಲ್ಲ. ಇದು ಸಮಾಜ ಜೀವನಕ್ಕೆ ಅನ್ವಯಿಸಬಹುದಾದ ಅಭಿವೃದ್ಧಿ ನಿಯಮಗಳನ್ನು ಕಂಡು ಹಿಡಿದುದರ ಫಲವಷ್ಟೆ. ಬೇರೆ ಯಾವುದೇ ನೈಸರ್ಗಿಕ ವಿಜ್ಞಾನದಲ್ಲಿ ಆ ವಿಜ್ಞಾನದ ನಿಯಮಗಳು ಅನ್ವಯವಾಗುವಂತೆ ಈ ನಿಯಮ ಗಳೂ ಅನ್ವಯವಾಗುತ್ತವೆ. ಇದೇ, ತಮ್ಮ ಹಿಂದಿನ ಸಮಾಜ ವಾದಿಗಳ ಸಿದ್ಧಾಂತಗಳಂತೆ **ಕಾಲ್ಪನಿಕ**ವಾಗದೆ ತಮ್ಮ ಸಮಾಜ ವಾದವನ್ನು **ವೈಜ್ಞಾನಿಕ**ವಾಗಿಸಿದ ಅಂಶ ಎಂದು ಮಾರ್ಕ್ಸ್, ಎಂಗೆಲ್ಸ್ ಹೇಳಿಕೊಂಡಿರುವುದನ್ನು ಸಮರ್ಥಿಸುತ್ತದೆ. ಸಂಪೂರ್ಣ ಮಾರ್ಕ್ಸ್‌ವಾದೀ ಸಿದ್ಧಾಂತವನ್ನು ತನ್ನ ಸುಪ್ರಸಿದ್ಧ ಕರಪತ್ರ "ಸಮಾಜವಾದ—ಕಾಲ್ಪನಿಕ ಹಾಗೂ ವೈಜ್ಞಾನಿಕ"ದಲ್ಲಿ ಸುಲಲಿತವಾಗಿ ವಿವರಿಸಿದ ಕೀರ್ತಿ ಎಂಗೆಲ್ಸ್‌ಗೆ ಸಲ್ಲಬೇಕು. ಈ ಕರ ಪತ್ರ ಆತ ವಿರೋಧಿಯೊಬ್ಬನ ವಾದಗಳಿಗೆ ಉತ್ತರವಾಗಿ ರಚಿಸಿದ ಕೃತಿಯಾದ "ಆ್ಯಂಟಿ–ಡ್ಯೂರಿಂಗ್"ನ ಕೆಲವು ಅಧ್ಯಾಯ ಗಳು. ವೈಜ್ಞಾನಿಕವಾದ್ದರಿಂದ ಮಾರ್ಕ್ಸ್‌ವಾದ ನೈಸರ್ಗಿಕ ಹಾಗೂ ಸಾಮಾಜಿಕ ವಿಜ್ಞಾನಗಳಲ್ಲಿ ಹಾಗೂ ಇವೆರಡು ಕ್ಷೇತ್ರಗಳ ಸಿದ್ಧಾಂತಗಳ ಮೊತ್ತವಾದ ತತ್ವಶಾಸ್ತ್ರದಲ್ಲಿನ ಎಲ್ಲಾ ಬೆಳವಣಿಗೆಗಳನ್ನು ತಿಳಿದಿರಬೇಕು. ಮಾರ್ಕ್ಸ್, ಎಂಗೆಲ್ಸರನ್ನು ಈ ಹಿಂದಿನ ಬೋಧಕರಿಂದ ಪ್ರತ್ಯೇಕಿಸುವ ಅಂಶ ಇದೇ. ಈ ಎಲ್ಲಾ ಬೋಧಕರಂತೆ ದ್ವಂದ್ವಮಾನ ಹಾಗೂ ಚಾರಿತ್ರಿಕ ಭೌತವಾದದ ಈ ಇಬ್ಬರು ಪ್ರತಿಪಾದಕರು ತಾವು ಅಂತಿಮ ಹಾಗೂ ನಿರಪೇಕ್ಷ ಸತ್ಯವನ್ನು ಕಂಡುಹಿಡಿದೆವು ಎಂದೇನೂ ಹೇಳಲಿಲ್ಲ. ವಾಸ್ತವದಲ್ಲಿ ಅಂತಿಮ ಹಾಗೂ ನಿರಪೇಕ್ಷ ಸತ್ಯ ಎಂಬುದೇ ಇಲ್ಲ. ನೈಸರ್ಗಿಕ ಹಾಗೂ ಸಾಮಾಜಿಕ ವಿಜ್ಞಾನಗಳು ನಿಸರ್ಗವನ್ನು ಅರ್ಥಮಾಡಿಕೊಂಡು ಅದನ್ನು ಬದಲಿಸುವ ಮಾನವನ ಕೊನೆಯಿಲ್ಲದ ಪ್ರಯತ್ನಗಳ ಭಾಗವಷ್ಟೆ. ಈ ಪ್ರಯತ್ನಗಳು ಆತನಿಗೆ ಅಂತಿಮ ಹಾಗೂ ನಿರಪೇಕ್ಷ ಸತ್ಯದ ಹತ್ತಿರ-ಹತ್ತಿರ ಹೋಗಲು ಅನುವು ಮಾಡಿಕೊಡುತ್ತವೆ— ಆದರೆ ಎಂದೂ ಅಲ್ಲಿ ತಲುಪುವುದಿಲ್ಲ ಎಂದು ಅವರು ತೋರಿಸಿ ಕೊಟ್ಟರು.

ಸೂತ್ರಾಂಧತೆಗೆ ಅವಕಾಶವಿಲ್ಲ

ಆದ್ದರಿಂದ ಮಾರ್ಕ್ಸ್‌ವಾದದ ಮಾರ್ಗದರ್ಶನದಲ್ಲಿ ನಡೆಯುವವರು ನಿಸರ್ಗ, ಸಮಾಜ ಹಾಗೂ ಮಾನವ ಚಿಂತನೆಯಲ್ಲಿನ ಬೆಳವಣಿಗೆಯನ್ನು ಸತತವಾಗಿ ವಿಶ್ಲೇಷಿಸಿ ಅದರ ಆಧಾರದ ಮೇಲೆ ಮಾರ್ಕ್ಸ್‌ವಾದವನ್ನು ಬೆಳೆಸಿ, ಶ್ರೀಮಂತಗೊಳಿಸಲು ಬದ್ಧರಾಗಿದ್ದಾರೆ. ಇದೇ ಮಾರ್ಕ್ಸ್‌ವಾದದ **ಸೃಜನಾತ್ಮಕ ಬೆಳವಣಿಗೆ.** ಇದಕ್ಕೆ ವಿರುದ್ಧವಾಗಿರುವುದು ಮಾರ್ಕ್ಸ್‌ವಾದದ ಕೆಲವು ತತ್ವಗಳಿಗೆ **ಮೂಢನಂಬಿಕೆಯಿಂದ ಅಂಟಿಕೊಂಡಿರುವುದು.** ಬೇರೆ ಮಾತಲ್ಲಿ, ಮಾರ್ಕ್ಸ್‌ವಾದವನ್ನು ಕಾರ್ಯಾಚರಣೆಗೆ ಮಾರ್ಗದರ್ಶಿ ಎಂದು ನೋಡಬೇಕೆ ಹೊರತು, ಗೊಡ್ಡು ಸಿದ್ಧಾಂತವಾಗಿ ಅಲ್ಲ.

ವಾಸ್ತವವಾಗಿ ಎಂಗೆಲ್ಸ್ ಜೀವಂತವಾಗಿರುವಾಗಲೇ ಬಂಡವಾಳಶಾಹಿಯ ಚಾರಿತ್ರ್ಯದಲ್ಲಿ ಒಂದು ಮೂಲಭೂತ ಬದಲಾವಣೆ ನಡೆದಿತ್ತು. ಹೀಗೆ ಕಂಡುಬರುತ್ತಿದ್ದ ಹೊಸ ಲಕ್ಷಣಗಳನ್ನು ಸೈದ್ಧಾಂತಿಕವಾಗಿ ಸಾಮಾನ್ಯೀಕರಿಸುವುದು ಸಾಕಷ್ಟು ವಿಷಯ ಸಂಗ್ರಹವಿಲ್ಲದ ಕಾರಣದಿಂದ ಎಂಗೆಲ್ಸ್‌ಗೆ ಆಗಲಿಲ್ಲ. ಆದರೂ ಆತ ಜೀವಂತವಾಗಿದ್ದಾಗ ಪ್ರಕಟಣೆಗೆ ಸಿದ್ಧವಾಗುತ್ತಿದ್ದ "ಬಂಡವಾಳ"ದ ಕೊನೆಯ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ "ಮ್ಯಾನಿಫೆಸ್ಟೋ" ಹಾಗೂ "ಬಂಡವಾಳ"ದಲ್ಲಿ ಅಧ್ಯಯನ ಮಾಡಿದಂತೆ ಬಂಡವಾಳಶಾಹಿಯ ನಿಯತಕಾಲಿಕ ಬಿಕ್ಕಟ್ಟಿನ ಸ್ಥಾನದಲ್ಲಿ ಅದು **ಖಾಯಂ ಎನ್ನಬಹುದಾದ ಬಿಕ್ಕಟ್ಟನ್ನು** ಎದುರಿಸಲಾರಂಭಿಸಿಲ್ಲವೇ ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾನೆ.

ಎಂಗೆಲ್ಸ್ ಮುನ್ನುಡಿ ಬರೆದ ಕೆಲವೇ ವರ್ಷಗಳೊಳಗೆ ಹೊಸ ಲಕ್ಷಣಗಳನ್ನು ಹೊಂದಿದ ಬಂಡವಾಳಶಾಹಿಯ ಹೊಸ

ಘಟ್ಟದ ಬಾಹ್ಯರೇಖೆಗಳು ಸ್ಪಷ್ಟಗೊಳ್ಳತೊಡಗಿದವು. ಆದರೆ ಈ ಹೊಸ ಲಕ್ಷಣಗಳನ್ನು ಎರಡು ವಿಭಿನ್ನ ರೀತಿಗಳಲ್ಲಿ ವಿಶ್ಲೇಷಿಸಲಾಯಿತು. ಕಾಟ್ಸ್ಕಿ ಅದನ್ನು ಕುರುಡಾಗಿ, ಸೂತ್ರಾಂಧನಾಗಿ ವರ್ಗ–ಸಹಕಾರದ ರೀತಿಯಲ್ಲಿ ವಿಶ್ಲೇಷಿಸಿದರೆ ಲೆನಿನ್ ಅದನ್ನು ರಚನಾತ್ಮಕವಾಗಿ, ಕ್ರಾಂತಿಕಾರಿಯಾಗಿ ವಿಶ್ಲೇಷಿಸಿದರು.

ಬಂಡವಾಳಶಾಹಿ ಹೊಸತೊಂದು "ಸೂಪರ್ ಸಾಮ್ರಾಜ್ಯಶಾಹಿ"ಯಾಗಿ ಬೆಳೆಯುತ್ತಿರುವುದು, ತನ್ನಲ್ಲಿನ ವೈರುಧ್ಯಗಳನ್ನು ನಿವಾರಿಸಿ ಹೊಸ ಜಾಗತಿಕ ವ್ಯವಸ್ಥೆಯನ್ನು ಸೃಷ್ಟಿಸುವುದು—ಇದೇ ಕಾಟ್ಸ್ಕಿ ವಿವರಿಸಿದ ದೃಷ್ಟಿಕೋಣ.

ಲೆನಿನ್ ಹತ್ತೊಂಭತ್ತನೇ ಶತಮಾನದ ಅಂತಿಮ ವರ್ಷಗಳಲ್ಲಿ ಹಾಗೂ ಇಪ್ಪತ್ತನೇ ಶತಮಾನದ ಮೊದಲ ವರ್ಷಗಳಲ್ಲಿ ವಿಕಾಸಗೊಳ್ಳುತ್ತಿದ್ದ ಬಂಡವಾಳಶಾಹಿ ಸಮಾಜವನ್ನು ವಿಶ್ಲೇಷಿಸಿ, ಇದು ಬಂಡವಾಳಶಾಹಿಯ ಬೆಳವಣಿಗೆಯ ಒಂದು ಘಟ್ಟ-ಇದು ಅನಿವಾರ್ಯವಾಗಿ ಯುದ್ಧ ಹಾಗೂ ಕ್ರಾಂತಿಗಳಿಗೆ—ಸಾಮ್ರಾಜ್ಯಶಾಹಿ ಯುದ್ಧಗಳಿಗೆ, ಕಾರ್ಮಿಕ ವರ್ಗದ ನೇತೃತ್ವದ ಕ್ರಾಂತಿಕಾರಿ ಯುದ್ಧಗಳಿಗೆ ವಸಾಹತುಶಾಹಿಯನ್ನು ಕೊನೆಗೊಳಿಸುವ ರಾಷ್ಟ್ರೀಯ ಕ್ರಾಂತಿಕಾರಿ ಯುದ್ಧಗಳಿಗೆ ಕಾರಣವಾಗುತ್ತದೆ ಎಂದ.

ಎರಡು ವ್ಯಾಖ್ಯಾನಗಳು

ಜಗತ್ತಿನ ಸಮಸ್ಯೆಗಳನ್ನು ಕುರಿತು ಈ ಎರಡು ನಿಲುವುಗಳು, ಮಾರ್ಕ್ಸ್‌ವಾದದ ತಿರುಳಿನ ಎರಡು ವ್ಯಾಖ್ಯಾನಗಳು 'ಎರಡನೇ ಅಂತರ್‌ರಾಷ್ಟ್ರೀಯ'ದಲ್ಲಿ ತೀವ್ರ ತಿಕ್ಕಾಟ ನಡೆಸಿದವು. ಮೊದಲನೇ ಜಾಗತಿಕ ಯುದ್ಧ ನಡೆದಾಗ ಇವೆರಡರಲ್ಲಿ ಹಣಾಹಣಿಯೇ ನಡೆಯಿತು. ಅಂತರ್‌ರಾಷ್ಟ್ರೀಯದ ಬಲಪಂಥೀಯ ನಾಯಕರು "ಸರಿಯಾಗಲಿ ತಪ್ಪಾಗಲಿ ನನ್ನ ದೇಶ" ಎಂಬ ನಿಲುವು ತಳೆದು 'ತಮ್ಮ' ದೇಶಗಳ ಬೂರ್ಜ್ವಾ ಸರಕಾರಗಳ ಬೆನ್ನಿಗೆ ನಿಂತರು. ಇದು ಅಂತರ್‌ರಾಷ್ಟ್ರೀಯ ಕುಸಿಯಲು ಕಾರಣವಾಯಿತು ಎಂದ ಲೆನಿನ್ ಅಂತರ್‌ರಾಷ್ಟ್ರೀಯತೆಯ ಪುನರುಜ್ಜೀವನವಾಗಬೇಕೆಂದ. ಇದು ಅಂತರ್‌ರಾಷ್ಟ್ರೀಯದ ಪ್ರತಿಯೊಂದು ವಿಭಾಗವನ್ನೂ ತನ್ನ 'ಸ್ವಂತ' ದೇಶದಲ್ಲಿ ಬೂರ್ಜ್ವಾ ವರ್ಗವನ್ನು ಎದುರಿಸಲು ಬದ್ಧಗೊಳಿಸುತ್ತದೆ. "ಸಾಮ್ರಾಜ್ಯಶಾಹಿ ಯುದ್ಧವನ್ನು ಅಂತರ್ಯುದ್ಧವಾಗಿ ಪರಿವರ್ತಿಸಿ" ಎಂಬುದು ಲೆನಿನ್ ಕೊಟ್ಟ ಕೇಂದ್ರ ಘೋಷಣೆ.

ಫೆಬ್ರುವರಿ 1917ರ ಬೂರ್ಜ್ವಾ ಕ್ರಾಂತಿಯನ್ನು ಸಮಾಜವಾದಿ ಕ್ರಾಂತಿಯನ್ನಾಗಿ ಬೆಳೆಸುವ ಪ್ರಶ್ನೆಯನ್ನು ಕುರಿತು ರಷ್ಯದ ಬೋಲ್ಶೆವಿಕ್ ವಾಗೂ ಮೆನ್ಶೆವಿಕ್ಕರಲ್ಲಿ ಘರ್ಷಣೆ ನಡೆದಾಗ ಹೊಸ ಪರಿಸ್ಥಿತಿಯನ್ನು ಕುರಿತಂತೆ ಎರಡು ನಿಲುವುಗಳು, ಮಾರ್ಕ್ಸ್‌ವಾದದ ಎರಡು ವ್ಯಾಖ್ಯಾನಗಳು ಸ್ಪಷ್ಟವಾಗಿ, ತೀಕ್ಷ್ಣವಾಗಿ ಗೋಚರಿಸಿದವು. ಜರ್ಮನಿಯಲ್ಲೂ ಪ್ರಬಲವಾಗಿದ್ದ ಬಲಪಂಥೀಯ ನಾಯಕತ್ವ ಹಾಗೂ ರೋಸಾ ಲಕ್ಸೆಂಬರ್ಗ್ ಮತ್ತು ಕಾರ್ಲ್ ಲೈಬ್ನೆಕ್ಟ್ ನೇತೃತ್ವದ ಸಣ್ಣ ಗುಂಪಿನ ನಡುವೆಯೂ ನವೆಂಬರ್ 18ರ ಕ್ರಾಂತಿಯನ್ನು ಬೆಳೆಸುವುದರ ಬಗ್ಗೆ ಪರಸ್ಪರ ತಿಕ್ಕಾಟ ನಡೆಯಿತು. ಅದರ ಪರಿಣಾಮ ಈಗ ಜಗತ್ತಿನ ಸಮ್ಮುಖವಿದೆ.

ಮೆನ್ಶೆವಿಕರನ್ನು ಹಾಗೂ ಅವರ ಸಮಾಜವಾದಿ ಕ್ರಾಂತಿಕಾರಿ ಗೆಳೆಯರನ್ನು ಸೋಲಿಸಿದ ಬೋಲ್ಶೆವಿಕರು ಫೆಬ್ರುವರಿಯ ಬೂರ್ಜ್ವಾ ಕ್ರಾಂತಿಯನ್ನು 1917ರ ಕಾರ್ಮಿಕ ವರ್ಗದ ಕ್ರಾಂತಿಯನ್ನಾಗಿ ಪರಿವರ್ತಿಸುವಲ್ಲಿ ಸಫಲರಾದರು. ಆದರೆ ಅತ್ತ ಜರ್ಮನಿಯಲ್ಲಿ ಕಾರ್ಮಿಕ ವರ್ಗ ಕೈವಶ ಮಾಡಿಕೊಂಡಿದ್ದ ಪ್ರಭುತ್ವ ಶಕ್ತಿಯನ್ನು ಕ್ರಾಂತಿಯ ನೇತೃತ್ವದಲ್ಲಿದ್ದ ಸಾಮಾಜಿಕ–ಜನತಾಂತ್ರಿಕ ನಾಯಕತ್ವ ಬೂರ್ಜ್ವಾ ವರ್ಗಕ್ಕೆ ಹಿಂದಿರುಗಿಸಿತು.

ಜರ್ಮನಿಯಲ್ಲಿ ಕಾರ್ಮಿಕ ವರ್ಗದ ಕ್ರಾಂತಿಗೆ ಬಗೆದ ಈ ರೀತಿಯ ವಿಶ್ವಾಸಘಾತ ಬೇರೆಲ್ಲೂ ಕಾಣದ ವಿದ್ಯಮಾನವೇನೂ ಅಲ್ಲ. ಕಾರ್ಮಿಕ ವರ್ಗ ಸರಕಾರದ ನೇತೃತ್ವವನ್ನು [ಯುದ್ಧಾನಂತರದ ತಕ್ಷಣದ ವರ್ಷಗಳಲ್ಲಿ ಸಿಡಿದ ಕ್ರಾಂತಿಗಳ ಮೂಲಕವಾಗಲೀ ಅಥವಾ ತದನಂತರದ ವರ್ಷಗಳಲ್ಲಿ ಚುನಾವಣಾ ಪ್ರಕ್ರಿಯೆಯ ಮೂಲಕವಾಗಲೀ] ವಹಿಸಿದ ಇತರ ಪ್ರತಿಯೊಂದು ಬಂಡವಾಳ ಶಾಹೀ ದೇಶದಲ್ಲೂ ಬಲಪಂಥೀಯ ಸಾಮಾಜಿಕ — ಜನತಾಂತ್ರಿಕ ನಾಯಕತ್ವ ವಿಶ್ವಾಸಘಾತ ಮಾಡಿತು. ಸಾಮಾಜಿಕ – ಜನತಾಂತ್ರಿಕ ಪಕ್ಷವೊಂದರ ಬಲಪಂಥೀಯ ನಾಯಕತ್ವ ಅಧಿಕಾರ ವಹಿಸಿಕೊಂಡ ನಂತರ ಪ್ರಭುತ್ವದ ಅಂಗಗಳನ್ನು ಪುನರ್ರಚಿಸಿ ಬಂಡವಾಳಶಾಹಿಯನ್ನು ಸಮಾಜವಾದವಾಗಿ ಪರಿವರ್ತಿಸಿದ ಒಂದಾದರೂ ಉದಾಹರಣೆಯಿಲ್ಲ.

ಆದರೆ ಲೆನಿನ್ ನೇತೃತ್ವದ ರಷ್ಯನ್ ಬೋಲ್ಶೆವಿಕ್ ಪಕ್ಷ ಮಾತ್ರ ನವೆಂಬರ್ 1917 ರಲ್ಲಿ ಕಸಿದುಕೊಂಡ ಅಧಿಕಾರವನ್ನು ಕ್ರೋಢೀಕರಿಸಿ ಅಂತರ್ಯುದ್ಧ ಆರಂಭಿಸಿದ ಆಂತರಿಕ ಶತ್ರುಗಳು ಹಾಗೂ ಮಧ್ಯ ಪ್ರವೇಶಿಸಿ ಯುದ್ಧ ಸಾರಿದ ವಿದೇಶೀ ಶತ್ರುಗಳನ್ನು ಸೋಲಿಸಿ ಸಮಾಜವಾದ ಕಟ್ಟಲು ಆರಂಭಿಸಿತು. ರಷ್ಯನ್ ಸಾಮ್ರಾಜ್ಯ ಪ್ರತ್ಯೇಕಗೊಂಡುದರಿಂದ ಜಾಗತಿಕ ಬಂಡವಾಳಶಾಹಿಯಲ್ಲಿ ಕಂಡುಬಂದ ಮೊದಲ ಬಿರುಕು ಜಗತ್ತಿನ ಮೊದಲ ಕಾರ್ಮಿಕ ವರ್ಗದ ಪ್ರಭುತ್ವ ತನ್ನ ಆರ್ಥಿಕ, ರಾಜಕೀಯ ಹಾಗೂ ಸೈನಿಕ ಶಕ್ತಿಯನ್ನು ಬೆಳೆಸಲಾರಂಭಿಸಿದಾಗ ಮತ್ತಷ್ಟು ಅಗಲಗೊಂಡಿತು.

ಸಮಾಜವಾದ ಬಂಡವಾಳಶಾಹಿಗಿಂತ ಶ್ರೇಷ್ಠ, ಕ್ರಾಂತಿಕಾರಿ ಕಮ್ಯುನಿಸಂ ಸಾಮಾಜಿಕ - ಜನತಂತ್ರಕ್ಕಿಂತ ಶ್ರೇಷ್ಠ ಎಂಬುದು ಎರಡನೇ ಜಾಗತಿಕ ಯುದ್ಧದ ಅವಧಿಯಲ್ಲಿ ಸಿದ್ಧಗೊಂಡಿತು.

ದೀರ್ಘಕಾಲದಿಂದ ಸಾಮಾಜಿಕ–ಜನತಂತ್ರದ ಬಲಪಂಥೀಯ ನಾಯಕರ ನೇತೃತ್ವದಲ್ಲಿದ್ದ ಯುರೋಪಿಯನ್

ದೇಶಗಳೆಲ್ಲಾ ಹಿಟ್ಲರನ ಮಿಲಿಟರಿ ಬೂಟುಗಳಿಗೆ ಆಹುತಿಯಾದವು. ಸ್ವತಃ ಮಾರ್ಕ್ಸ್, ಎಂಗೆಲ್ಸರಿಗೆ ಜನ್ಮವಿತ್ತ ನೆಲವೂ ಹಿಟ್ಲರ್ ಕಂಪೆನಿಯ ಕಾಲಬುಡದಲ್ಲಿ ಬಿದ್ದು ಬೇರೆ ಯುರೋಪಿಯನ್ ದೇಶಗಳಲ್ಲಾದಂತೆ ಕೆಂಪು ಸೇನೆಯಿಂದ ನೇರವಾಗಿಯೋ ಅಥವಾ ಸೋವಿಯೆಟ್ ಕೆಂಪು ಸೇನೆಯ ವೀರಾವೇಶದ ರಕ್ಷಣೆ ಮತ್ತು ನಂತರದ ಪ್ರತಿದಾಳಿಯಿಂದಾಗಿ ಉಂಟಾದ ಪರಿಸ್ಥಿತಿಯಿಂದಾಗಿಯೋ ವಿಮುಕ್ತಗೊಳ್ಳಬೇಕಾಯಿತು.

ಕೆಂಪು ಸೇನೆ ಫ್ಯಾಸಿಸ್ಟ್ ಶಕ್ತಿಗಳ ಮೇಲೆ ಸಾಧಿಸಿದ ಚಾರಿತ್ರಿಕ ವಿಜಯದ ಪರಿಣಾಮವೆಂದರೆ ಸಮಾಜವಾದ ಕೇವಲ ಒಂದೇ ದೇಶ (ಸೋವಿಯೆಟ್ ಸಂಘ)ಕ್ಕೆ ಸೀಮಿತಗೊಳ್ಳದೆ ಯುರೋಪು ಹಾಗೂ ಏಷ್ಯಾದ ಹೊಸ ಹೊಸ ದೇಶಗಳಿಗೆ ವ್ಯಾಪಿಸಿತು. ಸಮಾಜವಾದದ ಮೊದಲ ನೆಲದಲ್ಲಿ ನಡೆಸಿದ ಯಶಸ್ವೀ ಸಮಾಜವಾದೀ ರಚನೆಯ ಅನುಭವದಿಂದ ಕಲಿತು, ಅದನ್ನು ಅರಗಿಸಿಕೊಂಡು ಈ ಎಲ್ಲಾ ದೇಶಗಳಲ್ಲಿ ಅನ್ವಯಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಹಲವು ದೇಶಗಳಲ್ಲಿ ಬೇರೆ ಬೇರೆ ಪ್ರಮಾಣದ ತಪ್ಪುಗಳಾಗಿ ಅವನ್ನು ಸರಿಪಡಿಸಬೇಕಾಯಿತು ಎಂಬುದು ಬೇರೆ ಮಾತು.

ಎರಡು ವ್ಯವಸ್ಥೆಗಳು

ಇಂದು ಬಂಡವಾಳಶಾಹಿ ಜಗತ್ತೊಂದಿದೆ, ಸಮಾಜವಾದಿ ಜಗತ್ತೊಂದಿದೆ. ಸತ್ಯವನ್ನು ವಸ್ತುನಿಷ್ಠವಾಗಿ ನೋಡಲು ಸಿದ್ಧವಿರುವವರಿಗೆ ಈ ಎರಡರ ನಡುವಣ ವ್ಯತ್ಯಾಸ ಸುಸ್ಪಷ್ಟ. ಬಂಡವಾಳಶಾಹಿ ಜಗತ್ತು ಎಷ್ಟೊಂದು ಬಿಕ್ಕಟ್ಟಿನಿಂದ ತತ್ತರಿಸುತ್ತಿದೆಯೆಂದರೆ ಅಲ್ಲಿನ ಗುತ್ತೇದಾರಿ ನಾಯಕರಿಗೆ ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಶಾಂತಿಯುತ ಉತ್ಪಾದನೆಯಿಂದ ಶಸ್ತ್ರಾಸ್ತ್ರಗಳ ಉತ್ಪಾದನೆಯೆಡೆಗೆ ತಿರುಗಿಸದೆ ಗತ್ಯಂತರವೇ ಇಲ್ಲ. ತದ್ವಿರುದ್ಧವಾಗಿ ಸಮಾಜವಾದಿಗಳು ಬಂಡವಾಳಶಾಹಿ ದೇಶಗಳಲ್ಲಿ ಕಂಡುಬರುವಂತಹ ಬಿಕ್ಕಟ್ಟಿನಿಂದ ಮುಕ್ತವಾಗಿದ್ದು ತಮ್ಮ ಬೆಳೆಯುತ್ತಿರುವ ಉತ್ಪಾದನಾ ಶಕ್ತಿಗಳನ್ನು ಜನತೆಯ ಬಳಕೆಗೆ ಬೇಕಾಗುವ ಸಾಮಗ್ರಿಗಳನ್ನು ಉತ್ಪಾದಿಸುವಲ್ಲಿ ತೊಡಗಿಸಲು ಆಸಕ್ತವಾಗಿವೆ.

ಹೀಗೆ ಬಂಡವಾಳಶಾಹಿ ಜಗತ್ತು—ಅಲ್ಲ, ಆ ದೇಶಗಳ ನಾಯಕರು-ಪರಮಾಣು ಯುದ್ಧವೂ ಸೇರಿದಂತೆ, ವಿವಿಧ ಯುದ್ಧಗಳನ್ನು ಆರಂಭಿಸುವುದರಲ್ಲಿ ಆಸಕ್ತರಾಗಿದ್ದಾರೆ; ಅದಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ; ಅದಕ್ಕನುಗುಣವಾಗಿ ಆಕ್ರಮಣಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ತದ್ವಿರುದ್ಧವಾಗಿ ಸಮಾಜವಾದೀ ಜಗತ್ತು ಶಾಂತಿ ಹಾಗೂ ನಿಶ್ಶಸ್ತ್ರೀಕರಣದ ಧೋರಣೆಯಲ್ಲಿ ಆಸಕ್ತವಾಗಿದೆ. ಆದ್ದರಿಂದಲೇ ಬಂಡವಾಳಶಾಹೀ ಜಗತ್ತಿನಲ್ಲೂ ಸೇರಿದಂತೆ ಪ್ರಪಂಚದ ಎಲ್ಲಾ ದೇಶಗಳ ಶಾಂತಿಸಾಧಕರ ಮುಂಚೂಣಿಯಲ್ಲಿ ನಿಲ್ಲಲು ಅದಕ್ಕೆ ಸಾಧ್ಯವಾಗಿದೆ.

ಇದು ಮಾರ್ಕ್ಸ್, ಎಂಗೆಲ್ಸರ ಮೂಲಭೂತ ಧೋರಣೆಗಳ ನಿರಾಕರಣೆಯಾಗಿರದೆ, ಅವುಗಳ ಸಮರ್ಥನೆಯಾಗಿದೆ ಎಂಬುದನ್ನು ಮನಗಾಣಬಹುದು. ಬಂಡವಾಳಶಾಹಿಯ ಬೆಳವಣಿಗೆ ಅನಿವಾರ್ಯವಾಗಿಯೇ ಸಮಾಜವಾದ ಅದರ ಸ್ಥಾನ ಪಡೆಯುವಂತೆ ಮಾಡುತ್ತದೆ. ಅಂತರ್ರಾಷ್ಟ್ರೀಯ ಬಂಡವಾಳಶಾಹಿ ಹಾಗೂ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ನಡುವಿನ ತೀವ್ರ ಹೋರಾಟವೇ ಬಂಡವಾಳಶಾಹಿಯಿಂದ ಸಮಾಜವಾದದೆಡೆಗೆ ಪರಿವರ್ತನೆಯ ಹಿಂದಿರುವ ಚಾಲಕಶಕ್ತಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ವರ್ಗಹೋರಾಟವನ್ನು ಯಶಸ್ವಿಯಾಗಿ ನಡೆಸಲು ಕಾರ್ಮಿಕ ವರ್ಗದ ಸರ್ವಾಧಿಕಾರ ಹಾಗೂ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆ ಅಗತ್ಯ ಎಂಬುದೇ ಮಾರ್ಕ್ಸ್ ಹಾಗೂ ಎಂಗೆಲ್ಸರ ಬೋಧನೆಗಳು.

ಇಂದಿನ ಜಾಗತಿಕ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರ ಹಾಗೂ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯೆಂದರೆ ಸಮಾಜವಾದಿ ಜಗತ್ತಿನ ಅಥವಾ ಸಮಾಜವಾದೀ ವ್ಯವಸ್ಥೆಯನ್ನಪ್ಪಿದ ದೇಶಗಳ ಒಗ್ಗಟ್ಟು ಮತ್ತು ಈ ದೇಶಗಳು ಹಾಗೂ ವಸಾಹತುಶಾಹಿ, ಗುತ್ತೇದಾರಿ ಬಂಡವಾಳಶಾಹಿಯನ್ನು ಕೊನೆಗೊಳಿಸಬಯಸುವ ದೇಶಗಳ ನಡುವಿನ ಒಗ್ಗಟ್ಟು. ಇದಕ್ಕೆ ಸಾಮ್ರಾಜ್ಯಶಾಹಿ, ವಸಾಹತುಶಾಹಿ ಹಾಗೂ ಗುತ್ತೇದಾರಿ ಬಂಡವಾಳಶಾಹಿಯ ವಿರುದ್ಧ ಹೋರಾಟದ ಸಂಯುಕ್ತ ತಂತ್ರಗಳನ್ನು ಕುರಿತು ಸೋದರ ಪಕ್ಷಗಳು ಹಾಗೂ ಆಂದೋಲನಗಳ ನಡುವೆ ಸತತ ವಿಚಾರ ವಿನಿಮಯ ಅಗತ್ಯ ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಕಾರ್ಮಿಕ ವರ್ಗದ ಸರ್ವಾಧಿಕಾರ ಹಾಗೂ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಮೂಲಭೂತ ಅಂಶಗಳನ್ನು ಎತ್ತಿ ಹಿಡಿಯುವಾಗ ಕಮ್ಯುನಿಸ್ಟರು ಹಾಗೂ ಇತರ ಕ್ರಾಂತಿಕಾರಿಗಳು ಕಳೆದ ಹಲವು ವರ್ಷಗಳಿಂದ ತಮ್ಮ ಪ್ರಜ್ಞೆಯ ಭಾಗವಾಗಿ ಬಿಟ್ಟಿರುವ ಕೆಲವು ಸಂಗತಿಗಳನ್ನು ತ್ಯಜಿಸಬೇಕಾಗುತ್ತದೆ. ಹಾಗೂ ತಮ್ಮ ಇದುವರೆಗಿನ ತಿಳುವಳಿಕೆಗೆ ಸರಿಹೊಂದುವುದಿಲ್ಲ ಎಂದನ್ನಿಸಬಹುದಾದ ಇನ್ನು ಕೆಲವು ಸಂಗತಿಗಳನ್ನು ಕಲಿಯಬೇಕಾಗುತ್ತದೆ.

ಸೋವಿಯೆತ್ ಸಂಘ ಕಮ್ಯುನಿಸ್ಟ್ ಪಕ್ಷ, ಚೀನಾ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಸೋದರ ಪಕ್ಷಗಳು ನಡೆಸಿರುವ ಸ್ವಯಂ ಟೀಕೆಯ ಪ್ರಕ್ರಿಯೆ ಕಾರ್ಮಿಕ ವರ್ಗದ ಸರ್ವಾಧಿಕಾರ· ಕಾರ್ಮಿಕ ವರ್ಗದ ಪ್ರಜಾಪ್ರಭುತ್ವದ ನಿರಾಕರಣೆಯಾಗಿ ವಿಕೃತಗೊಳ್ಳದಂತೆ ಜಾಗರೂಕರಾಗಿರಬೇಕಾದ ಅಗತ್ಯವನ್ನು ಸೂಚಿಸು

ತ್ತದೆ. ಇದೇ ರೀತಿ ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯತೆಯೂ ವಿಕೃತಗೊಂಡು ಒಂದು ದೇಶದ ಹಾಗೂ ಅಲ್ಲಿನ ಆಳುವ ಪಕ್ಷ ಇತರರ ಮೇಲೆ ಪ್ರಾಬಲ್ಯ ಮೆರೆಸುವಂತೆಯೂ ಆಯಿತು. ಈ ವಿಕೃತಿಗಳನ್ನು ನಿವಾರಿಸದೆ ಕ್ರಾಂತಿಕಾರಿ ಚಳುವಳಿ ಇಂದಿನ ಸಂದರ್ಭದಲ್ಲಿ ಮುನ್ನಡೆಯಲಾರದು.

ಆದರೆ ಇದರಿಂದ ಕಾರ್ಮಿಕ ವರ್ಗದ ಸರ್ವಾಧಿಕಾರ ಹಾಗೂ ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯತೆಯನ್ನೇ ಕೈ ಬಿಡುವಂತೆ ಆಗಬಾರದು. ಯಾಕೆಂದರೆ ಹಾಗೆಲ್ಲಾದರೂ ಕೈಬಿಟ್ಟರೆ ಅದು ಕಾರ್ಮಿಕ ವರ್ಗವನ್ನು ನಿರಾಯುಧವಾಗಿಸಿ ಜಾಗತಿಕ ಮಟ್ಟದಲ್ಲಿ ಅದರ ವರ್ಗ ಶತ್ರುಗಳಿಗೆ ಸಮಾಧಾನ ಒದಗಿಸಿದಂತೆಯೇ ಸರಿ.

●

ಶ್ರಮವೇ ಎಲ್ಲಾ ಸಂಪತ್ತಿನ, ಎಲ್ಲಾ ಮೌಲ್ಯಗಳ ಮೂಲ ಎಂದು ರಾಜಕೀಯ ಅರ್ಥಶಾಸ್ತ್ರ ಪ್ರತಿಪಾದಿಸಿದಂದಿನಿಂದ ಒಂದು ಪ್ರಶ್ನೆ ಕೇಳುವುದು ಅನಿವಾರ್ಯವಾಯಿತು. ಕೂಲಿ ಕಾರ್ಮಿಕ ತನ್ನ ಶ್ರಮ ಸೃಷ್ಟಿಸಿದ ಮೌಲ್ಯದ ಸಂಪೂರ್ಣ ಮೊತ್ತವನ್ನು ಪಡೆಯದೆ ಅದರ ಒಂದು ಭಾಗವನ್ನು ಬಂಡವಾಳ ಶಾಹಿಗೆ ಸಮರ್ಪಿಸಬೇಕಾಗಿ ಬರುವ ವಾಸ್ತವ ಪರಿಸ್ಥಿತಿಯೊಂದಿಗೆ ಈ ಪ್ರತಿಪಾದನೆ ಹೇಗೆ ಸರಿಹೊಂದುತ್ತದೆ ? ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಹಾಗೂ ಸಮಾಜ ವಾದಿಗಳು ಈ ಪ್ರಶ್ನೆಗೆ ವೈಜ್ಞಾನಿಕವಾಗಿ ಒಪ್ಪಿಗೆಯಾಗಬಹುದಾದ ಉತ್ತರ ನೀಡಲು ಶತಪ್ರಯತ್ನಪಟ್ಟರು. ಆದರೆ ಮಾರ್ಕ್ಸ್ ಈ ಪ್ರಶ್ನೆಗೆ ಪರಿಹಾರ ದೊಂದಿಗೆ ಮುಂದೆ ಬರುವವರೆಗೆ ಈ ಎಲ್ಲಾ ಪ್ರಯತ್ನಗಳು ವ್ಯರ್ಥವಾದವು.

—ಎಂಗೆಲ್ಸ್

ಜಗತ್ತನ್ನು ಬದಲಿಸುವ ತತ್ವಶಾಸ್ತ್ರ

ಕೆ. ವಿ.

ಭೌತಿಕ ಶಕ್ತಿಯನ್ನು ಕಿತ್ತೆಸೆಯಬೇಕಾದರೆ ಭೌತಿಕ ಶಕ್ತಿಯೇ ಬೇಕು. ಆದರೆ ಸಿದ್ಧಾಂತವೊಂದು ಜನಸಮೂಹಗಳ ಮನಸ್ಸನ್ನು ನಾಟಿದಾಗ ಅಂತಹ ಸಿದ್ಧಾಂತವೂ ಒಂದು ಭೌತಿಕ ಶಕ್ತಿಯಾಗಿಬಿಡುತ್ತದೆ.

ತತ್ವಶಾಸ್ತ್ರ ಕಾರ್ಮಿಕ ವರ್ಗದಲ್ಲಿ ತನ್ನ ಭೌತಿಕ ಅಸ್ತ್ರಗಳನ್ನು ಕಂಡುಕೊಂಡಂತೆ, ಕಾರ್ಮಿಕ ವರ್ಗವು ತತ್ವಶಾಸ್ತ್ರದಲ್ಲಿ ತನ್ನ ಆಧ್ಯಾತ್ಮಿಕ ಅಸ್ತ್ರಗಳನ್ನು ಕಂಡುಕೊಳ್ಳುತ್ತದೆ.

ನಮ್ಮ ಸುತ್ತಮುತ್ತಲಿನ ಪ್ರಪಂಚದಿಂದ ನಮ್ಮ ಬುದ್ಧಿ ಸೃಷ್ಟಿಯಾಯಿತೋ ಅಥವಾ ನಮ್ಮ ಬುದ್ಧಿಯಿಂದ ಪ್ರಪಂಚ ಸೃಷ್ಟಿಯಾಯಿತೋ, ಅಥವಾ ನಮ್ಮ ದೇಶದ ತತ್ವಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರಕೃತಿ ಪ್ರಧಾನವೋ, ಪುರುಷ ಪ್ರಧಾನವೋ — ಇದು ತತ್ವಶಾಸ್ತ್ರಜ್ಞರನ್ನು ಅನಾದಿಯಿಂದಲೂ ಕಾಡಿರುವ ಪ್ರಶ್ನೆ. ಈ ಜಗತ್ತು ದೇವರ ಸೃಷ್ಟಿಯೇ ಅಥವಾ ಆರಂಭದಿಂದಲೂ ಅದು ಹೀಗೇ ಇತ್ತೇ ಎಂಬುದು ಈ ಪ್ರಶ್ನೆಯ ಇನ್ನೊಂದು ರೂಪ. ಈ ಜಗತ್ತಿನ ಬಗ್ಗೆ ನಮ್ಮ ಚಿಂತನೆಗೂ, ಈ ಜಗತ್ತಿಗೂ ಇರುವ ಸಂಬಂಧವೇನು ? ನಮ್ಮ ಬುದ್ಧಿಗೆ ಜಗತ್ತನ್ನು ಅಥವಾ ವಾಸ್ತವತೆಯನ್ನು ತಿಳಿಯುವ ಶಕ್ತಿಯಿದೆಯೇ ? ನಮ್ಮ ಚಿಂತನೆ ಹಾಗೂ ಬುದ್ಧಿಗೆ ಜಗತ್ತನ್ನು ಅದರ ವಾಸ್ತವರೂಪದಲ್ಲಿ ಗ್ರಹಿಸಿಕೊಳ್ಳಲು ಸಾಧ್ಯವೇ ? ಇವೆಲ್ಲಾ ಅದೇ ಮೂಲಭೂತ ಪ್ರಶ್ನೆಗೆ ಸಂಬಂಧಪಟ್ಟ ಇನ್ನೂ ಕೆಲವು ಪ್ರಶ್ನೆಗಳು.

ಈ ಪ್ರಶ್ನೆಗಳಿಗೆ ವಿವಿಧ ತತ್ವಶಾಸ್ತ್ರಜ್ಞರು ನೀಡಿರುವ ಉತ್ತರಗಳ ಆಧಾರದ ಮೇಲೆ ಈ ಎಲ್ಲಾ ತತ್ವಶಾಸ್ತ್ರಜ್ಞರನ್ನು ಎರಡು ಮುಖ್ಯ ಪಂಗಡಗಳಾಗಿ ವಿಂಗಡಿಸಬಹುದು. **ಚಿಂತನೆ, ಬುದ್ಧಿ ಪ್ರಧಾನನೆಂದು ವಾದಿಸುವವರು ಭಾವನಾವಾದಿಗಳು.** ಇವರು ತಮ್ಮ ಚಿಂತನೆಯ ಒಂದಿಲ್ಲೊಂದು ಹಂತದಲ್ಲಿ ಈ ಜಗತ್ತಿಗೊಬ್ಬ ಸೃಷ್ಟಿಕರ್ತನಿದ್ದಾನೆ ಎನ್ನುತ್ತಾರೆ. ಇದಕ್ಕೆ ವಿರುದ್ಧವಾಗಿ **ಪ್ರಕೃತಿಯೇ ಪ್ರಧಾನವೆನ್ನುವವರು ಭೌತವಾದಿಗಳು.** ಬಹಳ ಗಹನವೆಂದೆನಿಸುವ ತತ್ವಶಾಸ್ತ್ರದ ಈ ಪ್ರಶ್ನೆಗಳಿಗೂ, ವಿವಿಧ ವಾದಗಳಿಗೂ, ಜನಸಾಮಾನ್ಯರ ದಿನನಿತ್ಯದ ಬದುಕಿನ ಹೋರಾಟಗಳಿಗೂ ಏನಾದರೂ ಸಂಬಂಧವಿದೆಯೇ ?

ಈ ಪ್ರಶ್ನೆಗೆ ಉತ್ತರವಾಗಿ ಒಂದು ಉದಾಹರಣೆಯನ್ನು ನೀಡಬಹುದು. ಈ ಜಗತ್ತು ಕೇವಲ ಭ್ರಮೆ, ಬ್ರಹ್ಮ ಏಕಮಾತ್ರ ಸತ್ಯ ಎಂದು ಪ್ರಕೃತಿಯ ಪ್ರಾಧಾನ್ಯತೆಯನ್ನು ಅಲ್ಲಗಳೆದು, ನಮ್ಮ ಯೋಚನೆಯಂತೆ ಜಗತ್ತು ಇರುತ್ತದೆ ಎಂದ ಶಂಕರಾಚಾರ್ಯರು ಭಾರತದ ಭಾವನಾವಾದೀ ತತ್ವಜ್ಞಾನಿಗಳಲ್ಲಿ ಪ್ರಮುಖರು. ಇವರ ಅಭಿಪ್ರಾಯದಲ್ಲಿ ತತ್ವಶಾಸ್ತ್ರೀಯ ಜ್ಞಾನವೇ ನಿಜವಾದ ಸ್ವಾತಂತ್ರ್ಯದ ಹಾಗೂ ಮುಕ್ತಿಯ ಮೂಲ. ಆದರೆ ಶೂದ್ರನಿಗೆ ಈ ತತ್ವಶಾಸ್ತ್ರದ ಅಧಿಕಾರವಿಲ್ಲ. ಅಂದರೆ ಆತನಿಗೆ ಸ್ವಾತಂತ್ರ್ಯ, ಮುಕ್ತಿ ಎಂಬುದೇ ಇಲ್ಲ. ದ್ವಿಜರ ಸೇವೆಯಷ್ಟೆ ಆತನಿಗೆ. ಹೀಗೇಕೆ ? ಯಾಕೆಂದರೆ ಆತನಿಗೆ ವೇದಾಧಿಕಾರವಿಲ್ಲ. ವೇದಾಧಿಕಾರ ಏಕೆ ಇಲ್ಲ. ಏಕೆಂದರೆ ಆತನಿಗೆ ಉಪನಯನ ಸಂಸ್ಕಾರವಿಲ್ಲ. ಅದೇಕೆ ಇಲ್ಲ ಎಂಬ ಮುಂದಿನ ಪ್ರಶ್ನೆ ಶಂಕರಚಾರ್ಯರಿಗೆ ಅಪ್ರಸ್ತುತ. **ನಾವು ಕಾಣುವ ಭೌತಿಕ ಜಗತ್ತಿನ ಬಗ್ಗೆ ತಾತ್ವಿಕ ತಿರಸ್ಕಾರ ಹಾಗೂ ಇಲ್ಲಿ ಬೆವರಿಳಿಸಿ ದುಡಿಯುತ್ತಿರುವವರ ಬಗ್ಗೆ ಸಾಮಾಜಿಕ ತಿರಸ್ಕಾರ ಹೇಗೆ ಒಂದಕ್ಕೊಂದು ಸಂಬಂಧಪಟ್ಟಿದೆಯೆಂಬುದನ್ನು ಈ ಉದಾಹರಣೆಯಲ್ಲಿ ಕಾಣಬಹುದು.**

ಭಾವನಾವಾದ ಮತ್ತು ಶೋಷಿತರು :

ಭಾವನಾವಾದಿಗಳು, ತಾವು ಸಮಾಜವನ್ನು ಮೀರಿನಿಂತವರು, ನಿಷ್ಪಕ್ಷಪಾತಿ ಸತ್ಯಶೋಧಕರು ಎಂದು ಹೇಳಿಕೊಂಡು ಬಂದಿದ್ದರೂ ವಾಸ್ತವದಲ್ಲಿ ಇದುವರೆಗೆ ಯಾವ ತತ್ವಜ್ಞಾನಿಯೂ ನಿಷ್ಪಕ್ಷಪಾತಿಯಾಗಿರಲಿಲ್ಲ. ಅದು ಸಾಧ್ಯವೂ ಇಲ್ಲ. ಭಾವನಾವಾದಿಗಳು ಕುರುಡು ನಂಬಿಕೆಯ ವಿಧೇಯ ಸೇವಕರಷ್ಟೇ ಎಂದಿದ್ದಾರೆ ಲೆನಿನ್. ಶೋಷಣೆಯ ಆಧಾರದ ಮೇಲೆ ನಿಂತ ಸಮಾಜ ವ್ಯವಸ್ಥೆ ತನ್ನನ್ನು ಭದ್ರ

ವಾಗಿಸಿಕೊಳ್ಳಲು ಹಲವು ಅಸ್ತ್ರಗಳನ್ನು ಪಯೋಗಿಸುತ್ತದೆ. ಅವುಗಳಲ್ಲಿ ಈ ಸಮಾಜ ವ್ಯವಸ್ಥೆಯ ಬಗ್ಗೆ ಬಲವಾದ ನಂಬಿಕೆ ಬಹು ಪ್ರಮುಖವಾದುದು. ತಮಗೆ ಕಾಣದ ಯಾವುದೋ ಶಕ್ತಿ ತಮ್ಮ ಪರಿಸ್ಥಿತಿಗೆ ಕಾರಣ ಎಂಬ ಭಾವನೆ ಶೋಷಿತರಲ್ಲಿ ಬರುವಂತಾದರೆ ತಾವಿರುವ ವ್ಯವಸ್ಥೆಯ ಬಗ್ಗೆ ಅವರಿಗೆ ಅಪನಂಬಿಕೆ ಬರುವ ಸಾಧ್ಯತೆಯಿರುವುದಿಲ್ಲ. ಆದ್ದರಿಂದ ಈ ಜಗತ್ತು ಮನುಷ್ಯ ಮಾತ್ರರ ಕಲ್ಪನೆಗೂ ನಿಲುಕುವಂತಹ ದಲ್ಲ ಎಂದು ಹೇಳುವ ಭಾವನಾವಾದೀ ತತ್ವಶಾಸ್ತ್ರ ಈ ಭಾವನೆ ಹುಟ್ಟಿಸುವಲ್ಲಿ ಪ್ರಬಲ ಅಸ್ತ್ರವಾಗಿ ಉಪಯೋಗಕ್ಕೆ ಬಂದಿದ್ದರೆ ಅದರಲ್ಲಿ ಆಶ್ಚರ್ಯವೇನಿದೆ ?

ತತ್ವಶಾಸ್ತ್ರದ ವಿದ್ಯಾರ್ಥಿ ಕಾರ್ಲ್‌ಮಾರ್ಕ್ಸ್ ಕೂಡಾ ಆರಂಭದಲ್ಲಿ ಭಾವನಾವಾದಿಯೇ ಆಗಿದ್ದರು. ಆದರೆ ತತ್ವ ಶಾಸ್ತ್ರ ನಾವು ಕಾಣುವ ವಿದ್ಯಮಾನಗಳ ಬಗ್ಗೆ ನಿರ್ದಿಷ್ಟ ನಿಲುವು ತಾಳಬೇಕು ಎಂದು ಅವರಿಗನ್ನಿಸಿತ್ತು. ಇದೇ ಅವರು ತತ್ವಶಾಸ್ತ್ರ ಹಾಗೂ ವಾಸ್ತವತೆಯ ನಡುವಿನ ಸಂಬಂಧದ ಬಗ್ಗೆ ಗಾಢವಾಗಿ ಯೋಚಿಸುವಂತೆ ಮಾಡಿತು.

ಕಾರ್ಲ್‌ಮಾರ್ಕ್ಸ್ ಜನಸಾಮಾನ್ಯರ ಹಿತಾಸಕ್ತಿಗಳ ಬಗ್ಗೆ ಹೆಚ್ಚೆಚ್ಚು ಆಸಕ್ತಿ ತಳೆದಂತೆಲ್ಲಾ ಸ್ವಾತಂತ್ರ್ಯದ ಆದರ್ಶವನ್ನು ಕೇವಲ ಮನಸ್ಸಿನಲ್ಲಿ ಕಲ್ಪಿಸಿಕೊಂಡರೆ ಉಪಯೋಗವಿಲ್ಲ, ಅದನ್ನು ವಾಸ್ತವವಾಗಿ ಸ್ಥಾಪಿಸಬೇಕು ಎಂದು ಅವರಿಗನ್ನಿಸಿತು. ಜನಸಾಮಾನ್ಯರ ಪರವಾಗಿ ಹೆಚ್ಚಚ್ಚು ಕ್ರಿಯಾಶಾಲಿಯಾದಂತೆಲ್ಲಾ ಅವರು ಸಾಮಾಜಿಕ ಸಂಬಂಧಗಳ ಬಗ್ಗೆ ತೀವ್ರವಾಗಿ ಯೋಚಿಸಲಾರಂಭಿಸಿದರು. ಸಮಾಜದ ವಿವಿಧ ವಿಭಾಗಗಳ ಜನರು ಬೇರೆ ಬೇರೆ ರೀತಿಯಲ್ಲಿ ವರ್ತಿಸಲು ಅವರ ಯೋಚನಾ ವೈಖರಿ ಕಾರಣವಲ್ಲ. ಬದಲಾಗಿ ಅದು ಸಮಾಜದಲ್ಲಿ ಅವರು ಹೊಂದಿರುವ ಸ್ಥಾನಮಾನದ ಮೇಲೆ ಹೊಂದಿಕೊಂಡಿದೆ ಎಂಬುದನ್ನು ಅವರು ಕಂಡರು. ಆದ್ದರಿಂದ ಇವನ್ನೆಲ್ಲಾ ಅರ್ಥ ಮಾಡಿಕೊಳ್ಳಬೇಕಾದರೆ ನಾವು ಬದುಕುವ ಸಮಾಜದಲ್ಲಿನ ಮಾನವ ಸಂಬಂಧಗಳ ಬಗ್ಗೆ ಅಧ್ಯಯನ ಮಾಡಬೇಕು. ಆದರೆ ಭಾವನಾವಾದ ಇದನ್ನು ಮಾಡಲಾರದು. ಸ್ವಾಭಾವಿಕವಾಗಿಯೇ ಮಾರ್ಕ್ಸ್ ಭೌತವಾದಿಯಾದರು.

ಯಾಂತ್ರಿಕ ಭೌತವಾದ

ತಮಗೆ ತಿಳಿದೋ ತಿಳಿಯದೆಯೋ ಶೋಷಣೆಯ ವ್ಯವಸ್ಥೆಗೆ ಬೆಂಬಲವಾಗಿ ನಿಲ್ಲುವ ಭಾವನಾವಾದದ ವಿರುದ್ಧ ಪ್ರತಿಭಟನೆ ಭೌತವಾದದ ಸ್ವರೂಪ ಪಡೆದಿರುವುದನ್ನು ನಾವು ಎಲ್ಲಾ ಸಮಾಜಗಳಲ್ಲಿ ಕಾಣಬಹುದು. ಪ್ರಾಚೀನ ಭಾರತದ ಲೋಕಾಯತರು, ಬೌದ್ಧರಿಂದ ಹಿಡಿದು 18ನೇ ಶತಮಾನದ ಫ್ರೆಂಚ್ ಭೌತವಾದಿಗಳವರೆಗೆ ಹಲವರು ಶೋಷಕ ವ್ಯವಸ್ಥೆಗೆ ತಮ್ಮ ಪ್ರತಿಭಟನೆಯನ್ನು ಭೌತವಾದದ ಮೂಲಕ ವ್ಯಕ್ತಪಡಿಸಿದರು. ಆದರೆ ಅಮಾನವೀಯ ಪರಿಸ್ಥಿತಿಗಳ ವಿರುದ್ಧ, ಶೋಷಣೆಯ ವಿರುದ್ಧ 19ನೇ ಶತಮಾನದಲ್ಲಿ ಹೋರಾಟದಲ್ಲಿ ನಿರತರಾಗಿದ್ದ ಮಾರ್ಕ್ಸ್‌ರವರಿಗೆ ಈ ಭೌತವಾದದಲ್ಲಿ ನ್ಯೂನತೆಗಳಿವೆಯೆನಿಸಿತು.

ಕೇವಲ ಪ್ರತಿಭಟನೆ ಮಾತ್ರದಿಂದ ಅನ್ಯಾಯ, ಶೋಷಣೆಯನ್ನು ನಿವಾರಿಸಲು ಅಥವಾ ಅದರ ಮೂಲವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಈ ಮೂಲವನ್ನು ತಿಳಿಯದೆ ಶೋಷಣೆಯ ವಿರುದ್ಧ ಹೋರಾಟ ದುರ್ಬಲವಾಗುತ್ತದೆ. ಜನಸಾಮಾನ್ಯರನ್ನು ಅನ್ಯಾಯದ ವಿರುದ್ಧ ಕ್ರಿಯೆಯಲ್ಲಿ ತೊಡಗುವಂತೆ ಪ್ರೇರಿಸಿ ಅವರ ಚಟುವಟಿಕೆಗಳಿಗೆ ಸರಿಯಾದ ದೃಢವಾದ ಕಾರಣಗಳನ್ನು ಕೊಡಲಾಗದಿದ್ದರೆ ಅದು ಅವರನ್ನು ವಂಚಿಸಿದಂತೆಯೇ. ಯಾಕೆಂದರೆ 'ಅಜ್ಞಾನ ಯಾರಿಗೂ ಎಂದಿಗೂ ಸಹಾಯಕವಾಗಿಲ್ಲ'. ಕೆಲವರು ಪ್ರವಾದಿಗಳು, ಉಳಿದವರೆಲ್ಲಾ ಕುರಿಮಂದೆಗಳು ಎಂಬುದು ತಪ್ಪು ಭಾವನೆ. ಶೋಷಣೆಯ 'ಭಾವನೆ'ಯನ್ನು 'ಸಮತಾ ಸಮಾಜ'ದ ಭಾವನೆಯಿಂದ ನಾಶಗೊಳಿಸಬಹುದು. ಆದರೆ ವಾಸ್ತವದಲ್ಲಿ ಶೋಷಣೆಯನ್ನು ನಿರ್ಮೂಲಗೊಳಿಸಲು ಈ 'ಭಾವನೆ' ಸಾಕಾಗುವುದಿಲ್ಲ. ಅದಕ್ಕೆ ಶೋಷಣೆಯ ಮೂಲವನ್ನು ತಿಳಿಯುವುದು ಅವಶ್ಯಕ.

ಆದ್ದರಿಂದ ಮಾರ್ಕ್ಸ್ ಭಾವನಾವಾದಿಗಳನ್ನು ಕ್ರಿಯೆಯೆಂದರೆ ಕೇವಲ ಸೈದ್ಧಾಂತಿಕ, ಮಾನಸಿಕ ಚಟುವಟಿಕೆಯೆಂದು ಭಾವಿಸಿರುವವರು ಎಂದು ಟೀಕಿಸಿದರೆ, ಭೌತವಾದ ಕೇವಲ ಕಲ್ಪನೆಯ ಮಟ್ಟದಲ್ಲೇ ಉಳಿದಿದೆಯೆಂದು ಟೀಕಿಸಿದರು.

ನಿಸರ್ಗಕ್ಕೆ ಸಂಬಂಧಿಸಿದಂತೆ ಭೌತವಾದೀ ದೃಷ್ಟಿಯೆಂದರೆ ನಿಸರ್ಗ ಹೇಗಿದೆಯೋ ಹಾಗೆಯೇ ಅದನ್ನು ಅರಿಯುವುದು. ಆದರೆ ಈ ರೀತಿಯ ತಿಳುವಳಿಕೆ ಅಷ್ಟು ಸುಲಭವಾದದ್ದಲ್ಲ. ಯಾಕೆಂದರೆ ನಿಸರ್ಗದ ವಿದ್ಯಮಾನಗಳು ಮೊದಲ ನೋಟಕ್ಕೆ ಕಾಣುವಷ್ಟು ಸರಳವಾಗಿಲ್ಲ. ಈ ಕ್ಲಿಷ್ಟವಾದ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಲು ನಿಸರ್ಗದ ಅಧ್ಯಯನ ಮಾಡುವ ವಿಜ್ಞಾನದ ಸಹಾಯ ಅಗತ್ಯ. ಈ ಕೊರತೆಯೇ ಲೋಕಾಯತರ ಬೌದ್ಧರ ಅಥವಾ 18ನೇ ಶತಮಾನದ ಫ್ರೆಂಚ್ ಭೌತವಾದಿಗಳ ತತ್ವಜ್ಞಾನವನ್ನು ಅಸಮರ್ಪಕವಾಗಿಸಿದ್ದು ಮತ್ತು ಆ ಮೂಲಕ ಅವರ ಪ್ರತಿಭಟನೆಯನ್ನು ಅಪೂರ್ಣಗೊಳಿಸಿದ್ದು.

18 ನೇ ಶತಮಾನದಲ್ಲಿ ಸಾವಯುವ ರಸಾಯನ ಶಾಸ್ತ್ರ, ಪ್ರಾಣಿಶಾಸ್ತ್ರ ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇತ್ತು. ಆಗ ಸರಿಯಾಗಿ ವಿಕಸನಗೊಂಡಿದ್ದ ವಿಜ್ಞಾನವೆಂದರೆ ಯಂತ್ರ ವಿಜ್ಞಾನ ಮಾತ್ರ. ಆದ್ದರಿಂದ **ನಿಸರ್ಗದಲ್ಲಿ ಕಂಡುಬರುವ ಚಲನೆಗಳು ಸರಳ ಯಾಂತ್ರಿಕ ಚಲನೆಯ ವಿವಿಧ ರೂಪ**

ಗಳು ಮಾತ್ರ ಎಂದು ಆಗಿನ ಭೌತವಾದಿಗಳ ನಂಬಿಕೆಯಾಗಿತ್ತು. ಅಲ್ಲದೆ ವಿಜ್ಞಾನ ಆಗಿನ್ನೂ ಬೆಳವಣಿಗೆಯ ಹಂತದಲ್ಲಿದ್ದುದರಿಂದ ನಿಸರ್ಗವನ್ನು ಆಳವಾಗಿ ಅರಿಯಲು ಸಹಾಯಕವಾಗಲು ಅದರ ವಿದ್ಯಮಾನಗಳನ್ನು ವರ್ಗೀಕರಿಸಿ ಅವನ್ನೆಲ್ಲಾ ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅಗತ್ಯವಿತ್ತು. **ಆದರೆ ವಿಜ್ಞಾನದ ಇದೇ ನಿಲುವು ನಿಸರ್ಗವನ್ನು ಸಮಗ್ರವಾಗಿ ತಿಳಿಯಬೇಕಾಗಿರುಕ ಭೌತವಾದೀ ತತ್ವಶಾಸ್ತ್ರದಲ್ಲೂ ಮುಂದುವರಿದಾಗ ಸಂಕುಚಿತ, ಏಕಪಕ್ಷೀಯ ದೃಷ್ಟಿ ಅನಿವಾರ್ಯವಾಗಿತ್ತು.** ಆದ್ದರಿಂದಲೇ 18ನೇ ಶತಮಾನದ ಭೌತವಾದಿಗಳು (ಇವರನ್ನು ಯಾಂತ್ರಿಕ ಭೌತವಾದಿಗಳು ಎನ್ನಬಹುದು) ನಿಸರ್ಗವೆಂದರೆ ಸಿದ್ಧ ವಸ್ತುಗಳ ಕೂಟ ಎಂದಷ್ಟೇ ತಿಳಿದರೇ ಹೊರತು ಅದೊಂದು ಸಮಗ್ರ ಪ್ರಕ್ರಿಯೆ, ಚಾರಿತ್ರಿಕವಾಗಿ ಬೆಳೆದು ಬಂದ ಪ್ರಕ್ರಿಯೆ ಎಂದು ತಿಳಿಯಲು ಅಸಮರ್ಥರಾಗಿದ್ದರು. ಪ್ರಕೃತಿ ಸದಾ ಚಲನೆಯಲ್ಲಿದೆ ಎಂಬ ಅಂಶ ಅವರಿಗೆ ತಿಳಿದಿತ್ತು. ಆದರೆ ಈ ಚಲನೆ ಸದಾ ಒಂದೇ ವರ್ತುಲದೊಳಗೆ ಏನೊಂದೂ ಬದಲಾವಣೆಯಿಲ್ಲದೆ ನಡೆಯುತ್ತಿರುತ್ತದೆ ಎಂದು ಅವರು ಭಾವಿಸಿದ್ದರು. ಈ ಜಗತ್ತಿನ ಮೂಲ ಭೌತವಾಗಿದೆಯೆಂದು ಅವರಿಗೆ ತಿಳಿದಿದ್ದರೂ ಈ ಭೌತವಸ್ತುಗಳಿಗೂ, ಭೌತಿಕೇತರಗಳಾದ ಮನಸ್ಸು, ಪ್ರಜ್ಞೆ ಇತ್ಯಾದಿಗಳಿಗೂ ಸಂಬಂಧವೇನು, ಸಮಾಜದ ವಿವಿಧ ವ್ಯಕ್ತಿಗಳು ವಿವಿಧ ರೀತಿಯಲ್ಲಿ ವರ್ತಿಸಲು ಕಾರಣವೇನು ಎಂದು ತಿಳಿಯುವುದು ಅವರಿಗಾಗಲಿಲ್ಲ. ಆದ್ದರಿಂದಲೇ ಇವರು ಸಮಾಜದಲ್ಲಿ ಶೋಷಣೆಯನ್ನು ಗುರುತಿಸಿದರೇ ಹೊರತು ಅದನ್ನು ಸಮಗ್ರವಾಗಿ ಅರಿಯಲು ವಿಫಲರಾದರು. ಫಲವಾಗಿ ಅವರಲ್ಲಿ ಕೆಲವರು ಬದಲಾವಣೆಯ ಪ್ರೇರಕ ಶಕ್ತಿಗಳನ್ನು ಗುರುತಿಸಲಾರದೆ ಕಲ್ಪನಾ ಲೋಕದಲ್ಲೇ ಉಳಿದುಬಿಟ್ಟರೆ ಇನ್ನು ಕೆಲವು ವ್ಯಕ್ತಿನಿಷ್ಠ ಸಿದ್ಧಾಂತಿಗಳಾಗಿ, ಅರಾಜಕತಾವಾದಿಗಳಾಗಿ ದುಡಿಯುವ ವರ್ಗಗಳು ಅಂಧಕಾರದಲ್ಲಿರುವ, ಏನೂ ಮಾಡಲಾಗದ ಜನ ಎಂಬ ತಿರಸ್ಕಾರ ತಾಳಿದರು.

ದ್ವಂದ್ವಮಾನ ತರ್ಕ

ಸಾಮಾಜಿಕ ಪರಿಸರ ಮಾನವ ಸಂಬಂಧಗಳ ಮೇಲೆ ಗಾಢ ಪರಿಣಾಮ ಬೀರುತ್ತದೆಯೆಂದು ಅನುಭವದಿಂದ ಕಂಡ ಮಾರ್ಕ್ಸ್‌ಗೆ ಯಾಂತ್ರಿಕ ಭೌತವಾದಿಗಳ ಈ ನಿಲುವು ಸರಿ ಕಾಣಲಿಲ್ಲ. **ಭೌತಿಕ ಜೀವನದ ಆಧಾರಭೂತ ವಸ್ತುಗಳು ಉತ್ಪಾದನೆಯಾಗುವ ಪರಿಸ್ಥಿತಿಯಲ್ಲಿ ಬದಲಾವಣೆಯಾಗದೆ ಸಾಮಾಜಿಕ ಸಂಬಂಧಗಳಲ್ಲಿ ಸುಧಾರಣೆ ಬಯಸುವುದು ನಿರರ್ಥಕ** ಎಂಬ ತೀರ್ಮಾನಕ್ಕೆ ಬಂದ ಅವರಿಗೆ ವಾಸ್ತವಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅನ್ಯಾಯದ, ಅಮಾನವೀಯ ವಾಸ್ತವತೆಯನ್ನು ಬದಲಿಸುವ ಹೋರಾಟದಲ್ಲಿ ರಣಕಹಳೆಯಾಗಬಹುದಾದ ತತ್ವದ ಅವಶ್ಯಕತೆ ಇದೆಯೆನ್ನಿಸಿತು. ಅವರ ಈ ಹುಡುಕಾಟದಲ್ಲಿ ಸಹಾಯಕ್ಕೆ ಬಂದದ್ದು ಜರ್ಮನಿಯ ಅತ್ಯುನ್ನತ ಭಾವನಾವಾದೀ ತತ್ವಜ್ಞಾನಿ ಹೆಗೆಲ್‌ರ ದ್ವಂದ್ವಮಾನ ತರ್ಕ.

ವಿಜ್ಞಾನದ ಭಂಡಾರ ಬೆಳೆಯುತ್ತಿದ್ದಂತೆ ಭಾವನಾವಾದೀ ತತ್ವಶಾಸ್ತ್ರದಲ್ಲೂ ಹೆಚ್ಚೆಚ್ಚು ಭೌತವಾದೀ ಅಂಶಗಳು ಸೇರಿಕೊಳ್ಳಲಾರಂಭಿಸಿದವು. ಆದರೆ ಯಾಂತ್ರಿಕ ಭೌತವಾದದ ಏಕಪಕ್ಷೀಯತೆಯಿಂದಾಗಿ ಭಾವನಾವಾದದ ಕೈಮೇಲಾಯಿತು. ಹೆಗೆಲ್‌ರ ತತ್ವಶಾಸ್ತ್ರ ಇದೇ ಪ್ರಕ್ರಿಯೆಯ ಅತ್ಯುನ್ನತ ಸಾಧನೆಯೆನ್ನಬಹುದು. ಹೆಗೆಲ್‌ರ ದ್ವಂದ್ವಮಾನ ತರ್ಕ ಏಕಪಕ್ಷೀಯತೆಯಿಂದ ಮುಕ್ತವಾದ ಅತ್ಯಂತ ಪೂರ್ಣವಾದ ಹಾಗೂ ಅತ್ಯಂತ ಗಾಢ ಸ್ವರೂಪದ ಬೆಳವಣಿಗೆಯ ಸಿದ್ಧಾಂತ. ಜಗತ್ತು ಸತತವಾಗಿ ಕೆಳಹಂತದಿಂದ ಮೇಲಿನ ಹಂತಕ್ಕೆ ಬೆಳವಣಿಗೆ ಹೊಂದುತ್ತಿರುವ ಪ್ರಕ್ರಿಯೆಗಳ ಸಮುಚ್ಚಯ. ಈ ಪ್ರಕ್ರಿಯೆಗಳ ಆಂತರಿಕ ವೈರುಧ್ಯಗಳ ನಡುವೆ ಘರ್ಷಣೆ ಹಾಗೂ ಅವುಗಳ ನಿವಾರಣೆಯ ಮೂಲಕ ಬೆಳವಣಿಗೆ ಹೊಸ ಹಂತವನ್ನು ತಲುಪುತ್ತದೆ ಎಂಬುದು ಈ ಸಿದ್ಧಾಂತದ ಕ್ರಾಂತಿಕಾರೀ ತಿರುಳು. **ಆದರೆ ಕ್ರಾಂತಿಕಾರಿ ತಿರುಳಿನ ಹೊದಿಕೆ ಮಾತ್ರ ಭಾವನಮಯವಾಗಿತ್ತು. ಆದ್ದರಿಂದಲೇ ತತ್ವಜ್ಞಾನದಲ್ಲಿ ಕ್ರಾಂತಿಕಾರಿಯಾಗಿದ್ದ ಹೆಗೆಲ್ ವಾಸ್ತವಿಕತೆಗೆ ಬಂದಾಗ ತನ್ನ ಕಾಲದ ಪ್ರಷ್ಯಾದ ದೊರೆಗಳ ದುಷ್ಟ ಆಡಳಿತವನ್ನು ಬೆಂಬಲಿಸಿದರು.** ಇದು ಅವರ ತತ್ವಶಾಸ್ತ್ರದ ದ್ವಂದ್ವಮಾನ ತಿರುಳು ಹಾಗೂ ಭಾವನಾವಾದಿ ಹೊದಿಕೆಯ ನಡುವಿನ ವೈರುದ್ಯದ ಫಲವೇ! ಮಾರ್ಕ್ಸ್ ಈ ಭಾವನಾವಾದೀ ಹೊದಿಕೆಯನ್ನು ಕಿತ್ತು ದ್ವಂದ್ವಮಾನ ತರ್ಕವನ್ನು ಭೌತವಾದಕ್ಕೆ ಅನ್ವಯಿಸಿದಾಗ ರೂಪಗೊಂಡ ಭೌತವಾದ ಕೇವಲ ಹೊಸ ಭೌತವಾದವಾಗಿರಲಿಲ್ಲ ; ಸಂಪೂರ್ಣ ಮಾರ್ಪಾಟು ಹೊಂದಿದ ಏಕಪಕ್ಷೀಯತೆಯಿಂದ ಮುಕ್ತವಾದ ಭೌತವಾದವಾಗಿತ್ತು.

ದ್ವಂದ್ವಮಾನ ಭೌತವಾದ

ಪ್ರಪಂಚದ ವಿದ್ಯಮಾನಗಳ ಬಗ್ಗೆ ವ್ಯಾಖ್ಯಾನಿಸುವುದು ಮಾತ್ರವಲ್ಲ, ಅದನ್ನು ಬದಲಿಸುವುದು ತತ್ವಶಾಸ್ತ್ರದ ಕೆಲಸವಾಗಬೇಕು ಎಂದು ಬಯಸಿದ ಕಾರ್ಲ್‌ಮಾರ್ಕ್ಸ್ ತತ್ವಶಾಸ್ತ್ರಕ್ಕೆ ನೀಡಿದ ಕೊಡುಗೆ ದ್ವಂದ್ವಮಾನ ಭೌತವಾದ. ಮಾರ್ಕ್ಸ್‌ರ ತತ್ವಶಾಸ್ತ್ರಕ್ಕೆ ಈ ಹೆಸರು ಬರಲು ಕಾರಣ ಅದು ಜಗತ್ತಿನ ವಿದ್ಯಮಾನಗಳ ಬಗ್ಗೆ **ಭೌತವಾದೀ ವ್ಯಾಖ್ಯಾನ** ನೀಡುತ್ತದೆ. ಹಾಗೂ ಈ ವ್ಯಾಖ್ಯಾನ ನೀಡಲು **ದ್ವಂದ್ವಮಾನ ಅನ್ವೇಷಣಾ ವಿಧಾನ**ವನ್ನು ಉಪಯೋಗಿಸುತ್ತದೆ.

ಮಾರ್ಕ್ಸ್‌ವಾದೀ ಭೌತವಾದವನ್ನು ಸ್ಥೂಲವಾಗಿ ಹೀಗೆ ಹೇಳಬಹುದು ! **ಪ್ರಪಂಚದ ಅಸ್ತಿತ್ವ ನಮ್ಮ ಭಾವನೆ,**

ಚಿಂತನೆಗಳನ್ನು ಹೊಂದಿಕೊಂಡಿಲ್ಲ. ನಮಗೆ ಅದರ ಬಗ್ಗೆ ತಿಳಿವಿರಲಿ, ಇಲ್ಲದಿರಲಿ ಅದಂತೂ ನಮ್ಮಿಂದ ಸ್ವತಂತ್ರವಾದ ಅಸ್ತಿತ್ವಹೊಂದಿದೆ (ಉದಾಹರಣೆಗೆ ಗುರುತ್ವಾಕರ್ಷಣ ಶಕ್ತಿ ಮನುಷ್ಯನಿಗೆ ಅದರ ಪರಿಚಯವಾಗುವ ಮೊದಲೂ ಇತ್ತು, ಆಮೇಲೂ ಇದೆ).

ಪ್ರಪಂಚದ ಮೂಲ ಹಾಗೂ ಸ್ವಭಾವ ಭೌತಿಕವಾದದ್ದೇ ಹೊರತು ಮಾನಸಿಕ ಅಲ್ಲ. ನಮ್ಮ ಮನಸ್ಸು, ಚಿಂತನೆ, ಪ್ರಜ್ಞೆ ಇವೆಲ್ಲಾ ಇದೇ ಭೌತಜಗತ್ತಿನ ಉತ್ಪಾದನೆಗಳು.

ಈ ಜಗತ್ತಿನಲ್ಲಿ ನಮಗೆ ತಿಳಿದಿರುವ ಅಂಶಗಳಿರುವಂತೆ ತಿಳಿಯದೇ ಉಳಿದಿರುವ ಅಂಶಗಳೂ ಬಹಳ ಇವೆ. ಆದರೆ ಅವನ್ನೆಲ್ಲಾ ವಿಜ್ಞಾನದ ಸಹಾಯದಿಂದ ತಿಳಿಯಲು ಸಾಧ್ಯವಿದೆ.

ಈ ಜಗತ್ತಿನ ವಿದ್ಯಮಾನಗಳಲ್ಲಿ ಅನಂತ ವೈವಿಧ್ಯತೆಯಿದೆ. **ಇವೆಲ್ಲಾ ಪರಸ್ಪರ ಸಂಬಂಧ ಹೊಂದಿವೆ ಹಾಗೂ ಪರಸ್ಪರ ಒಂದನ್ನೊಂದು ಅವಲಂಬಿವೆ.** ಈ ಪರಸ್ಪರ ಕ್ರಿಯೆಗೆ ಉದಾಹರಣೆ—ಒಂದು ಜೀವರಾಶಿ ತನ್ನ ಪರಿಸರದ ಫಲವಾಗಿ ರೂಪುಗೊಳ್ಳುತ್ತದೆ. ಅದೇ ರೀತಿ ಅದು ತನ್ನ ಈ ಪರಿಸರದ ಮೇಲೆ ಪ್ರತಿಕ್ರಿಯಿಸಿ ಅದನ್ನು ಬದಲಿಸುವ ಸಾಮರ್ಥ್ಯವನ್ನೂ ಪಡೆದಿರುತ್ತದೆ.

ಮಾರ್ಕ್ಸ್‌ವಾದೀ ದ್ವಂದ್ವಾತ್ಮಕತೆಯನ್ನು ಈ ರೀತಿ ಸ್ಥೂಲವಾಗಿ ವಿವರಿಸಬಹುದು.

ಪ್ರಕೃತಿ ಪರಸ್ಪರ ಸಂಬಂಧಿತವಾದ ಒಂದು ಸಮಗ್ರ ಸಮುಚ್ಚಯ. ಇದರಲ್ಲಿ ಯಾವುದೇ ಆಗಲಿ ಪ್ರತ್ಯೇಕವಾಗಿ ಅಸ್ತಿತ್ವದಲ್ಲಿರುವುದಿಲ್ಲ. ಭೌತಿಕ ಪ್ರಕ್ರಿಯೆಗಳಾಗಲೀ, ಇದರಿಂದ ವಿಕಸನಗೊಂಡ ಭೌತಿಕೇತರ ವಿಚಾರ, ಕಲ್ಪನೆ, ಚಿಂತನೆಗಳಾಗಲಿ, ಮಾನವ ನಿರ್ಮಿಸಿಕೊಂಡ ಸಾಮಾಜಿಕ ಸಂಸ್ಥೆಗಳಾಗಲಿ ಪರಸ್ಪರ ಪ್ರತ್ಯೇಕವಾಗಿ ಇರಲಾರವು. ಆದ್ದರಿಂದ ಇವನ್ನು **ಪರಿಸರದಿಂದ ಪ್ರತ್ಯೇಕಿಸಿ ಪರಿಶೀಲಿಸಿದರೆ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.**

ಈ ಸಮಗ್ರ ಸಮುಚ್ಚಯವಾದ ಪ್ರಕೃತಿಯಲ್ಲಿ ಸದಾ ಯಾವುದಾದರೊಂದು ಹುಟ್ಟುತ್ತಿರುತ್ತದೆ. ಬೆಳೆಯುತ್ತಿರುತ್ತದೆ, ವಿಘಟನೆ ಹೊಂದುತ್ತಿರುತ್ತದೆ ಹಾಗೂ ಸಾಯುತ್ತಿರುತ್ತದೆ. ಪ್ರತಿಯೊಂದೂ ಸದಾ ಚಲನೆಯಲ್ಲಿರುತ್ತದೆ, ಪರಿವರ್ತನೆ ಹೊಂದುತ್ತಿರುತ್ತದೆ.

ಈ ಪರಿವರ್ತನೆಗಳಿಗೆ ಪ್ರೇರಕ ಶಕ್ತಿ ಪ್ರತಿಯೊಂದು ಪ್ರಕ್ರಿಯೆಯೊಳಗೇ ಅಡಕವಾಗಿದೆ. ಕ್ರಿಯಾತ್ಮಕವೂ, ಪರಸ್ಪರ ನಿಷೇಧಾತ್ಮಕವೂ ಆಗಿರುವ ಎರಡು ವಿರುದ್ಧ ಶಕ್ತಿಗಳು ಇವೆ. **ಈ ಆಂತರಿಕ ವೈರುಧ್ಯಗಳ ಐಕ್ಯತೆ ಹಾಗೂ ತಿಕ್ಕಾಟವೇ ಪ್ರಪಂಚದ ಅಸ್ತಿತ್ವದ ಹಾಗೂ ಪ್ರಗತಿಯ ಪ್ರೇರಕಾಂಶ.**

ಈ ಅಂತರಿಕ ವೈರುಧ್ಯಗಳ ಐಕ್ಯ ಹಾಗೂ ತಿಕ್ಕಾಟದ ಫಲವಾಗಿ ಎರಡು ರೀತಿಯ ಬದಲಾವಣೆಗಳು ಸಂಭವಿಸುತ್ತವೆ. ಆರಂಭದಲ್ಲಿ ಬದಲಾವಣೆ ಮಂದಗತಿಯಲ್ಲಿದ್ದು **ಪರಿಮಾಣದಲ್ಲಿ** (ಅಂದರೆ ಗಾತ್ರ, ಆಕಾರ ಇತ್ಯಾದಿಯಲ್ಲಿ) **ಬದಲಾವಣೆ** ಯಾಗುತ್ತಿರುತ್ತದೆ. ಆದರೆ ಒಂದು ನಿರ್ದಿಷ್ಟ ಹಂತ ತಲುಪಿದಾಗ ಬದಲಾವಣೆಯ ವೇಗ ತೀವ್ರಗೊಂಡು ರಭಸದಿಂದ ಮಿಂಚಿನಂತೆ **ಗುಣಾತ್ಮಕ** ಬದಲಾವಣೆ ಸಂಭವಿಸುತ್ತದೆ. ಈ ಘಟ್ಟವನ್ನು ತತ್ವಜ್ಞಾನಿಗಳು "ನೆಗೆತ" ಎನ್ನುತ್ತಾರೆ. (ಸಮಾಜ ವಿಜ್ಞಾನದಲ್ಲಿ ಇದೇ 'ಕ್ರಾಂತಿ'ಯ ಘಟ್ಟ). 'ನೆಗೆತ'ದ ನಂತರ ಹೊಸ ಹಂತದಲ್ಲಿ ಮತ್ತೆ ಬದಲಾವಣೆ ಆರಂಭವಾಗುತ್ತದೆ.

ದ್ವಂದ್ವಮಾನ ತರ್ಕದ ಈ ಅಂಶಗಳನ್ನು ಗಮನಿಸುವಾಗ ಇವು ಮಾರ್ಕ್ಸ್‌ರವರು ತಮ್ಮ ಅಸಾಧಾರಣ ಮೇಧಾಶಕ್ತಿಯಿಂದ ಸೃಜಿಸಿದ ನಿಯಮಗಳೆಂಬ ಭಾವನೆ ಬರಬಹುದು. ಇದು ತಪ್ಪು. **ಇವು ಪ್ರಕೃತಿಯಲ್ಲೇ** ಅಡಕವಾಗಿರುವ ನಿಯಮಗಳು. **ವಾಸ್ತವವಾಗಿ ಪ್ರಕೃತಿಯ ಪ್ರಕ್ರಿಯೆಗಳು ಯಾಂತ್ರಿಕವಾಗಿಲ್ಲ, ದ್ವಂದ್ವಾತ್ಮಕವಾಗಿವೆ.** ನೈಸರ್ಗಿಕ ವಿಜ್ಞಾನದ ಇತ್ತೀಚಿನ ಶೋಧನೆಗಳು, ರೇಡಿಯಂ, ಎಲೆಕ್ಟ್ರಾನ್‌ಗಳು, ಮೂಲ ವಸ್ತುಗಳ ರೂಪ ಪರಿವರ್ತನೆ ಇದನ್ನು ಅತ್ಯದ್ಭುತವಾಗಿ ಸಮರ್ಥಿಸಿವೆ. ಮಾರ್ಕ್ಸ್‌ರ ಸಹಯೋಗಿ ಎಂಗೆಲ್ಸ್‌ರೇ ಹೇಳುವಂತೆ ಅವರ **ಸಮಕಾಲೀನ ವಿಜ್ಞಾನದ ಮೂರು ಮಹಾನ್ ಬೆಳವಣಿಗೆಗಳೇ ಮಾರ್ಕ್ಸ್, ಎಂಗೆಲ್ಸ್‌ರಿಗೆ ಈ ನಿಯಮಗಳನ್ನು ಕಂಡುಹಿಡಿಯಲು ಪ್ರೇರಕಾಂಶ.** ಎಲ್ಲಾ ಸಸ್ಯ, ಪ್ರಾಣಿಗಳ ಮೂಲ ಘಟಕ 'ಜೀವಕಣ'ದ ಸಂಶೋಧನ. ಯಾಂತ್ರಿಕ ಶಕ್ತಿ, ಉಷ್ಣ, ಶಾಖ, ವಿದ್ಯುತ್, ಕಾಂತತ್ವ, ರಾಸಾಯನಿಕ ಶಕ್ತಿ ಇತ್ಯಾದಿ. ಎಲ್ಲಾ ಶಕ್ತಿಗಳೂ ಪ್ರಾಪಂಚಿಕ ಚಲನೆಯ ವಿವಿಧ ರೂಪಗಳು ಎಂಬ ಸಂಶೋಧನೆ ಹಾಗೂ ಜೀವರಾಶಿಗಳು ಹೇಗೆ ವಿಕಸನಗೊಂಡವು ಎಂದು ತೋರಿಸಿಕೊಟ್ಟ ಡಾರ್ವಿನರ ವಿಕಾಸವಾದ ಇವೇ ಆ ಮೂರು ಮುಖ್ಯ ಸಂಶೋಧನೆಗಳು.

ದ್ವಂದ್ವಮಾನ ವಿಧಾನದ ಬಗ್ಗೆ ಇನ್ನೊಂದು ತಪ್ಪು ಕಲ್ಪನೆಯಿದೆ. ಯಾವುದೇ ಸಮಸ್ಯೆಯನ್ನು ತಂತಾನೇ ಪರಿಹರಿಸುವ ಯಕ್ಷಿಣಿ ಮಂತ್ರ ಈ ವಿಧಾನವೆಂದು ಕೆಲವರ ಅಭಿಪ್ರಾಯ. **ದ್ವಂದ್ವಾತ್ಮಕತೆ ಸಮಸ್ಯೆಯನ್ನು ಪರಿಹರಿಸುವುದಿಲ್ಲ; ಸಮಸ್ಯೆ ಪರಿಹರಿಸುವಲ್ಲಿ ನಮಗೆ ಸಹಾಯಕವಾಗುತ್ತದೆ.** ಈ ವಿಧಾನದ ಜ್ಞಾನವಿಲ್ಲದೆಯೂ ನಾವು ಸಮಸ್ಯೆಯನ್ನು ಪರಿಹರಿಸಬಹುದು. ಆದರೆ ಈ ನಿಯಮಗಳು ತಿಳಿದಿದ್ದರೆ ನಮ್ಮೆದುರಿರುವ ಮೂರ್ತ

ಪರಿಸ್ಥಿತಿಯ ಎಲ್ಲಾ ಕ್ಲಿಷ್ಟತೆಯನ್ನು, ಆಂತರಿಕ ಸಂಬಂಧ ಹಾಗೂ ವೈರುಧ್ಯಗಳನ್ನು ಗುರುತಿಸಿ ಹೆಚ್ಚು ನಿರ್ಧಾರಕವಾಗಿ ಕ್ರಿಯೆಯಲ್ಲಿ ತೊಡಗಬಹುದು. ಆದರೆ ಒಂದು ಮೂರ್ತ ಪರಿಸ್ಥಿತಿಯ ಸಂಪೂರ್ಣ ವಿವರ ಸಂಗ್ರಹಿಸದೆ ಸುಲಭ ಮಾರ್ಗದಲ್ಲಿ ಕೇವಲ ಸೂತ್ರಬದ್ಧವಾಗಿ ಸಮಸ್ಯೆ ಪರಿಹರಿಸುತ್ತೇನೆನ್ನುವುದು ಮೂರ್ಖತನವಷ್ಟೆ.

ದ್ವಂದ್ವಮಾನ ಭೌತವಾದಕ್ಕೂ ಉಳಿದ ತತ್ವಶಾಸ್ತ್ರಗಳಿಗೂ ಇರುವ ಪ್ರಮುಖ ಭಿನ್ನತೆಯೆಂದರೆ ಕಾರ್ಯಾಚರಣೆಗೆ ಅದು ಕೊಡುವ ಒತ್ತು. ಕಾರ್ಯಾಚರಣೆಯ ಅನುಭವವೇ ನಮ್ಮ ತಿಳಿವಿನ ಆಧಾರ. **ಕೇವಲ ಸೈದ್ಧಾಂತಿಕ ವಿಮರ್ಶೆಯಿಂದ ವಾಸ್ತವತೆಯನ್ನು ಬದಲಿಸಲು ಸಾಧ್ಯವಿಲ್ಲ. ಅದಕ್ಕೆ ವಿಮರ್ಶಾತ್ಮಕ ಕ್ರಾಂತಿಕಾರೀ ಚಟುವಟಿಕೆಯಲ್ಲಿ ತೊಡಗುವುದು ಅನಿವಾರ್ಯ. ಕ್ರಾಂತಿಕಾರಿ ಚಟುವಟಿಕೆಯ ಪ್ರಕ್ರಿಯೆಯಲ್ಲಿ ಮಾತ್ರ ಮನುಷ್ಯ ತನ್ನ ಸುತ್ತಮುತ್ತಲಿನ ವಾಸ್ತವತೆಯನ್ನು ಮತ್ತು ತನ್ನನ್ನೇ ಬದಲಿಸಿಕೊಳ್ಳಲು ಸಾಧ್ಯ.**

ಚಾರಿತ್ರಿಕ ಭೌತವಾದ :

ದ್ವಂದ್ವಮಾನ ಭೌತವಾದವನ್ನು ವಿವಿಧ ಸಮಾಜಗಳ ವಿಕಾಸದ ಅಧ್ಯಯನಕ್ಕೆ ಅನ್ವಯಿಸಿದರೆ ಅದೇ ಚಾರಿತ್ರಿಕ ಭೌತವಾದ. ನಿಸರ್ಗದ ಪ್ರಕ್ರಿಯೆಗಳಂತೆ ಇತಿಹಾಸವೂ ಮೂರ್ತ ನಿಯಮಗಳಿಗೆ ಬದ್ಧವಾಗಿದೆ ಮತ್ತು ಈ ನಿಯಮಗಳನ್ನು ತಿಳಿಯಲು ಸಾಧ್ಯ. ಆದರೆ ಅದಕ್ಕೆ ಒಂದು ಮೂರ್ತ ಪರಿಸ್ಥಿತಿಗೆ ಸಂಬಂಧಪಟ್ಟ **ಎಲ್ಲಾ ವಿವರಗಳನ್ನು ಸಂಗ್ರಹಿಸಬೇಕು. ಹಾಗೂ ಇತಿಹಾಸದ ನಿಯಮಗಳನ್ನು ಯಾವುದೇ ವ್ಯಕ್ತಿನಿಷ್ಠ ಪೂರ್ವಾಗ್ರಹವಿಲ್ಲದೆ, ಯಾವುದೇ ರೀತಿಯ ಯಾಂತ್ರಿಕತೆಯಿಲ್ಲದೆ ಅನ್ವಯಿಸಬೇಕು.** ಆಗ ಮಾತ್ರ ಇತಿಹಾಸ ವೈಜ್ಞಾನಿಕವಾಗುತ್ತದೆ ಎನ್ನುತ್ತದೆ ಚಾರಿತ್ರಿಕ ಭೌತವಾದ. ಇತಿಹಾಸವೆಂಬುದು ವಿಶಿಷ್ಟವಾದ, ಮುಂದಾಗಿ ನಿರೀಕ್ಷಿಸಲಾಗದ, ಕೆಲವು ವ್ಯಕ್ತಿಗಳ ಇಚ್ಛೆಗಳ ತಿಕ್ಕಾಟದಿಂದ ಜರುಗುವ ಘಟನಾಕ್ರಮ ಎನ್ನುವ ಎಲ್ಲಾ ರೀತಿಯ ಸಂಕುಚಿತವಾದೀ ದೃಷ್ಟಿಕೋನವನ್ನು ಚಾರಿತ್ರಿಕ ಭೌತವಾದ ತಿರಸ್ಕರಿಸುತ್ತದೆ. ಇವೆಲ್ಲಾ ವಸ್ತುಸ್ಥಿತಿಯ ಮೇಲ್ಪದರವನ್ನಷ್ಟೇ ಕೆರೆಯುವ ಟೊಳ್ಳು ದೃಷ್ಟಿ. ಇದರರ್ಥ ಮನುಷ್ಯರ ಇಚ್ಛಾಶಕ್ತಿಯನ್ನಾಗಲೀ, ಚರಿತ್ರೆಯಲ್ಲಿ ಇವುಗಳ ತಿಕ್ಕಾಟದ ಪಾತ್ರವನ್ನಾಗಲೀ ಮಾರ್ಕ್ಸ್‌ವಾದ ಕಡೆಗಣಿಸುತ್ತದೆ ಎಂದರ್ಥವಲ್ಲ. ಆದರೆ ಈ ತಿಕ್ಕಾಟಗಳನ್ನು ಪ್ರೀತಿಯಿಂದ ತಿಳುವಳಿಕೆ ನೀಡುವುದರಿಂದಲೇ ಪರಿಹರಿಸಬಹುದು ಎಂಬ ಕಾಲ್ಪನಿಕ ಸಮಾಜವಾದಿಗಳ ಅಥವಾ ನಮ್ಮ ದೇಶದ ಗಾಂಧೀವಾದಿಗಳ ನಂಬಿಕೆಯನ್ನು ಮಾರ್ಕ್ಸ್‌ವಾದ ಒಪ್ಪುವುದಿಲ್ಲ. ಬದಲಿಗೆ ಈ ತಿಕ್ಕಾಟಗಳನ್ನು ನಿರ್ಧರಿಸುವ ಅಂಶ ಯಾವುದು ಎಂದು ಪರಿಶೀಲಿಸುತ್ತದೆ. ಸಾಮಾಜಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಅದರ ಪ್ರೇರಕ ಶಕ್ತಿಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತದೆ.

ಸಮಾಜದ ಉತ್ಪಾದಕಾ ಶಕ್ತಿಗಳು ಹಾಗೂ ಜೀವನದ ಭೌತಿಕ ಅಗತ್ಯಗಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ಮನುಷ್ಯ–ಮನುಷ್ಯರ ನಡುವೆ ಉದ್ಭವಿಸುವ ಸಂಬಂಧಗಳು—ಅಂತಿಮವಾಗಿ ಇವೇ ಆ ಪ್ರೇರಕ ಶಕ್ತಿಗಳು. ಈ ಪ್ರಕ್ರಿಯೆಯಲ್ಲಿ ವೈರುಧ್ಯಗಳು ಹುಟ್ಟಿಕೊಳ್ಳುತ್ತವೆ. ಈ ವೈರುಧ್ಯಗಳು **ಪ್ರಪ್ರಥಮವಾಗಿ** ಆರ್ಥಿಕ ಸ್ವರೂಪದ್ದಾಗಿರುತ್ತವೆ. ಮತ್ತು ಇವೇ ಇತಿಹಾಸದ ದಿಕ್ಕನ್ನು ತಿಳಿಸುವ ಕೀಲಿ. ಆದ್ದರಿಂದ ಚಾರಿತ್ರಿಕ ಭೌತವಾದದ ಪ್ರಕಾರ ಮನುಷ್ಯರ ತಕ್ಷಣದ ಪ್ರಯತ್ನಗಳು ಮಾತ್ರವಲ್ಲ, ಸಮಾಜದ ರಾಜಕೀಯ ಹಾಗೂ ಕಾನೂನಿನ ಅಂಗಗಳು, ಸಾಮಾಜಿಕ ಜೀವನದ ನೈತಿಕ, ತಾತ್ವಿಕ, ಧಾರ್ಮಿಕ ಇತ್ಯಾದಿ ಎಲ್ಲಾ ಅಂಶಗಳನ್ನು **ಮೂಲಭೂತವಾಗಿ** ವರ್ಗಗಳ ನಡುವಿನ ಘರ್ಷಣೆಯ ಅಭಿವ್ಯಕ್ತಿ ಎನ್ನಬಹುದು. ಈ ಘರ್ಷಣೆಯ ಮೂಲವಿರುವುದು ಉತ್ಪಾದನಾ ವಿಧಾನದಲ್ಲಿ ತಲೆದೋರುವ ವೈರುಧ್ಯಗಳಲ್ಲಿ.

ವರ್ಗ ಹೋರಾಟದ ಕಲ್ಪನೆಯನ್ನು ಮೊದಲು ಕಂಡು ಹಿಡಿದವರು ಕಾರ್ಲ್‌ಮಾರ್ಕ್ಸ್ ಅಲ್ಲ. ಆದರೆ ಅದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ **ಈ ಹೋರಾಟಗಳ ಮೂಲ ಮಾನವನ ಶ್ರಮ ಚಟುವಟಿಕೆಗಳೇ ಎಂದು ಮೊತ್ತಮೊದಲು ಸಾಧಿಸಿ ತೋರಿಸಿದವರು ಮಾರ್ಕ್ಸ್.** ಉತ್ಪಾದನೆಯಲ್ಲಿ ತೊಡಗಿರುವ ಕಾರ್ಮಿಕ ಕೇವಲ ಭೌತಿಕ ಮೌಲ್ಯಗಳನ್ನು ಮಾತ್ರವಲ್ಲ, ಆಧ್ಯಾತ್ಮಿಕ ಮೌಲ್ಯಗಳನ್ನೂ ಸೃಷ್ಟಿಸುತ್ತಾನೆ. ಮನುಷ್ಯನ ಈ ಉತ್ಪಾದನಾ ಚಟುವಟಿಕೆಯೇ ವರ್ಗಗಳಿಲ್ಲದ ಆದಿ ಸಮಾಜ ವರ್ಗಗಳಾಗಿ ವಿಭಜಿತಗೊಂಡ ಸಮಾಜಗಳಾಗಿ ಪರಿವರ್ತನೆಗೊಳ್ಳುವುದಕ್ಕೆ ಚಾರಿತ್ರಿಕ ಕಾರಣ. ಈ ಬಂಡವಾಳ ಶಾಹಿ ತನ್ನ ಹಿತಾಸಕ್ತಿಗಳಿಗಾಗಿ ಅಭಿವೃದ್ಧಿಗೊಳಿಸುವ ಉತ್ಪಾದನಾ ಶಕ್ತಿಗಳು ಅನಿವಾರ್ಯವಾಗಿಯೇ ಅದಕ್ಕೆ ಮುಳುವಾಗಿ ಮಾನವರನ್ನು ವರ್ಗವಿಹೀನ ಸಮಾಜದೆಡೆಗೆ ಒಯ್ಯುತ್ತವೆ. ಇದನ್ನು ರಾಜಕೀಯವಾಗಿ ಸಾಧಿಸುವ ಕ್ರಾಂತಿಕಾರೀವರ್ಗ ಕಾರ್ಮಿಕ ವರ್ಗ. ಯಾಕೆಂದರೆ ಕಾರ್ಮಿಕ ವರ್ಗದ ರಾಜಕೀಯ ಉದ್ಧಾರದಲ್ಲೇ ಇಡೀ ಸಮಾಜದ ಉದ್ಧಾರ ಅಡಕವಾಗಿದೆ. ಅಂದರೆ ಇದರ ಅರ್ಥ ಬಂಡವಾಳ ಶಾಹಿ ಸಮಾಜದಲ್ಲಿ ಕಾರ್ಮಿಕರು ಮಾತ್ರ ದಮನಕ್ಕೊಳಗಾದವರು ಎಂದೇನಲ್ಲ. ಆದರೆ ಉತ್ಪಾದನೆಗೂ ಕಾರ್ಮಿಕರಿಗೂ ಇರುವ ಸಂಬಂಧದಲ್ಲೇ ಸಂಪೂರ್ಣ ಮಾನವತೆಯ ದಾಸ್ಯ ಅಡಗಿದೆ. ಎಲ್ಲಾ ರೀತಿಯ ಮಾನವ ದಾಸ್ಯ ಈ ಸಂಬಂಧದ ಪರಿಷ್ಕೃತ ರೂಪವೋ ಅಥವಾ ಅದರ ಪರಿಣಾಮವೋ ಆಗಿರುತ್ತದೆ. ಆದ್ದರಿಂದಲೇ ದಾಸ್ಯವಿಹೀನ, ವರ್ಗವಿಹೀನ ಸಮಾಜ

ದೆಡೆಗಿನ ಪರಿವರ್ತನೆಯ ಅವಧಿಯಲ್ಲಿ ರಾಜ್ಯದ ಸ್ವರೂಪ ಕಾರ್ಮಿಕರ ಸರ್ವಾಧಿಕಾರವಾಗಿರುತ್ತದೆ.

ಮಾನವ ಚರಿತ್ರೆಯ ಮುಂದಿನ ಹಂತದಲ್ಲಿ ರೂಪ ಗೊಳ್ಳುವ ಸಮಾಜ ಉನ್ನತ ಮಾನವೀಯ ಮೌಲ್ಯಗಳನ್ನು ಸಾಧಿಸಿ ಮಾನವನ ಭೌತಿಕ ಹಾಗೂ ಆಧ್ಯಾತ್ಮಿಕ ಅವಶ್ಯಕತೆ ಗಳನ್ನು ಪೂರೈಸಿ ಆತನ ವ್ಯಕ್ತಿತ್ವ ಅರಳಲು, ವೈಯಕ್ತಿಕ ಹಾಗೂ ಸಾಮಾಜಿಕ ಹಿತಾಸಕ್ತಿಗಳು ಸಮರಸಗೊಳ್ಳಲು ಅನುವು ಮಾಡಿಕೊಡುತ್ತದೆ. **ಇದು ಕೇವಲ ಕನಸಲ್ಲ, ಕಲ್ಪನೆಯಲ್ಲ, ಆಧಾರ ಹೀನ ನಿರೀಕ್ಷೆಯಲ್ಲ ಎಂಬುದನ್ನು ವೈಜ್ಞಾನಿಕವಾಗಿ ತೋರಿಸಿಕೊಟ್ಟಿದೆ ಮಾರ್ಕ್ಸ್‌ರವರು ಆರಂಭಿಸಿದ ಚಾರಿತ್ರಿಕ ಭೌತವಾದ.**

ಚಾರಿತ್ರಿಕ ಭೌತವಾದ ವಾಸ್ತವದಲ್ಲಿ ಆರ್ಥಿಕ ನಿಯತಿ ವಾದ ಎಂದು ಕೆಲವರು ಟೀಕಿಸುತ್ತಾರೆ. ಮಾನವನ ಜೀವನದ ಇತರ ಎಲ್ಲಾ ಅಂಶಗಳನ್ನು ಕಡೆಗಣಿಸಿ ಕೇವಲ ಆತನ ಊಟ – ಬಟ್ಟೆಯ ಪ್ರಶ್ನೆಗೆ ಮಾತ್ರ ತನ್ನನ್ನು ಸೀಮಿತಗೊಳಿಸಿ ಇತಿಹಾಸ ವನ್ನು ಗಣಿತದ ಸೂತ್ರದಂತೆ ಮಾಡಿದೆ ಎಂದು ಅವರ ಅಭಿ ಪ್ರಾಯ. ಈ ಅಭಿಪ್ರಾಯವನ್ನೇ ಮಾರ್ಕ್ಸ್, ಎಂಗೆಲ್ಸ್‌ರ ಕಾಲದಿಂದ ಹಿಡಿದು ಈಗಿನವರೆಗೂ ಬೇರೆ ಬೇರೆ ರೂಪದಲ್ಲಿ ಮಂಡಿಸಿ ಮಾರ್ಕ್ಸ್‌ವಾದ ಹಳೆಯದಾಗಿದೆ. ಜಗತ್ತನ್ನು ಬದಲಿಸುವ ತತ್ವಶಾಸ್ತ್ರವಾಗಿ ಅದು ಉಳಿದಿಲ್ಲ ಎಂದು ಅಭಿಪ್ರಾಯ ಪಡುವವರು ಇನ್ನು ಕೆಲವರಿದ್ದಾರೆ. ಇವರೆಲ್ಲಾ ತಮ್ಮ ವರ್ಗದ ಹಿತಾಸಕ್ತಿಗಳಿಗನುಗುಣವಾಗಿ ಚಾರಿತ್ರಿಕ ಭೌತ ವಾದವನ್ನು ಅಪಾರ್ಥಗೊಳಿಸಬೇಕೆಂದು ನಿರ್ಧರಿಸಿರುವ ಮೊಂಡುವಾದಿಗಳೋ ಅಥವಾ ದ್ವಂದ್ವಮಾನ ವಿಧಾನದ ಪ್ರಾಥಮಿಕ ಜ್ಞಾನವು ಇಲ್ಲದವರೋ ಆಗಿರುತ್ತಾರೆ ಎಂದರೆ ಅತಿಶಯೋಕ್ತಿಯೇನಲ್ಲ.

ಚಾರಿತ್ರಿಕ ಭೌತವಾದ ತನ್ನ ಚಾರಿತ್ರಿಕ ವಿಶ್ಲೇಷಣೆಯಲ್ಲಿ **ಪ್ರಧಾನ ಅಂಶ** ಯಾವುದು ಮತ್ತು ಅದರಿಂದ **ಉದ್ಭವ ವಾಗುವ ಅಂಶ ಯಾವುದು** ಎಂಬುದನ್ನು ಗುರುತಿಸಿಕೊಳ್ಳು ತ್ತದೆ. ಸ್ವಾಭಾವಿಕವಾಗಿಯೇ ಪ್ರಧಾನ ಅಂಶದ ಮೇಲೆ ಹೆಚ್ಚು ಒತ್ತುಕೊಡುತ್ತದೆ. ಸಾಮಾಜಿಕ ಜೀವನವನ್ನು ವಾಸ್ತವ ವಾಗಿ ನಿರ್ಧರಿಸುವ ಅಂಶ-ಮೇಲ್ನೋಟಕ್ಕೆ ಕಂಡುಬರುವ ಅಂಶ ಇವೆರಡೂ ಸದಾ ಒಂದೇ ಆಗಿರುತ್ತವೆ ಎಂಬುದು ಯಾಂತ್ರಿಕ ವಾಗಿ ಯೋಚಿಸುವುದರಿಂದಾಗುವ ತಪ್ಪು. ಭಾರತದಲ್ಲಿ ಜಾತಿ, ಧರ್ಮಗಳ ಬಿಗಿ ಹಿಡಿತವನ್ನು ಕಂಡು ಆರ್ಥಿಕ ನಿಯತಿವಾದ ವಾಗಿರುವ ಸದಾ ವರ್ಗ-ವರ್ಗವೆಂದೇ ಹೇಳುವ ಮಾರ್ಕ್ಸ್‌ವಾದ ಇದನ್ನು ಅರ್ಥಮಾಡಿಕೊಳ್ಳಲು ವಿಫಲವಾಗಿದೆ ಎನ್ನುವ ಜನ ಈ ತಪ್ಪನ್ನು ತಿಳಿಯಲು ಪ್ರಯತ್ನಿಸಬೇಕು

ಮಾರ್ಕ್ಸ್‌ವಾದ ಸಿದ್ಧ ಸೂತ್ರಗಳ ಒಣ ಸಿದ್ಧಾಂತವಲ್ಲ; ಅದು ಜಗತ್ತನ್ನು ತಿಳಿಯಲು ಹಾಗೂ ಅದನ್ನು ಬದಲಿಸುವ ಉದ್ದೇಶಹೊಂದಿದ ಒಂದು ಕಾರ್ಯಾಚರಣೆಯ ವಿಧಾನ. ಸಮಗ್ರ ಅಧ್ಯಯನಕ್ಕೆ ಬೇಕಾದ ಮಾಹಿತಿಗಳನ್ನೆಲ್ಲಾ ಕಲೆ ಹಾಕುವ ಸಾಮರ್ಥ್ಯವಿಲ್ಲದವರಿಗೆ ವ್ಯವಧಾನವಿಲ್ಲದ ಆಲಸಿ ಗಳಿಗೆ ಮತ್ತು ಆರಾಮ ಕುರ್ಚಿ ಬುದ್ಧಿಜೀವಿಗಳಿಗಷ್ಟೇ ಅದು ಒಣ ಸಿದ್ಧಾಂತವಾಗಿ ಕಾಣಬಹುದು.

> ನಮಗಾಗಿ ಯೋಚಿಸುವ ತತ್ವಜ್ಞಾನಿಗಳು, ಹೋರಾಡುವ ಶ್ರಮಜೀವಿ ಗಳು ನಮ್ಮೊಂದಿಗಿದ್ದರೆ ಪ್ರಪಂಚದ ಯಾವುದಾದರೂ ಶಕ್ತಿ ನಮ್ಮ ಪ್ರಗತಿ ಯನ್ನು ತಡೆಯುವುದು ಸಾಧ್ಯವೇ ?
>
> **— ಫ್ರೆಡರಿಕ್ ಎಂಗೆಲ್ಸ್**

ಕಾರ್ಲ್ ಮಾರ್ಕ್ಸ್‌ನ ಇತಿಹಾಸ ಕಲ್ಪನೆ

ಚಾರಿತ್ರಿಕವಾಗಿ ಬೆಳೆದು ಬಂದ ಶ್ರಮಜೀವಿವರ್ಗ ಮತ್ತು ಬಂಡವಾಳಶಾಹೀ ವರ್ಗಗಳ ನಡುವಿನ ಘರ್ಷಣೆಯೇ ವೈಜ್ಞಾನಿಕ ಸಮಾಜವಾದದ ಅನಿವಾರ್ಯ ಜನನಕ್ಕೆ ಕಾರಣ.

—ಕಾರ್ಲ್‌ಮಾರ್ಕ್ಸ್

'ಇತಿಹಾಸ ಮನುಷ್ಯನನ್ನು ನಿರ್ಮಿಸುತ್ತದೆಯೋ ಅಥವಾ ಮನುಷ್ಯ ಇತಿಹಾಸವನ್ನು ನಿರ್ಮಿಸುತ್ತಾನೋ?' ಉಳಿದ್ಯಾವ ವಿಚಾರಸರಣಿಗಳೂ ಈ ಪ್ರಶ್ನೆಗೆ ಸಮರ್ಪಕ ಉತ್ತರ ನೀಡಲಾರವಾದರೂ, ಈ ಎರಡೂ ಮಾತುಗಳೂ ಸತ್ಯ ಎಂದು ಮಾರ್ಕ್ಸ್ ಕೊಡುವ ಉತ್ತರವು ಆತನ ಒಟ್ಟು ವಿಚಾರವ್ಯೂಹಕ್ಕೆ ತಾತ್ವಿಕ ಬುನಾದಿಯಾಗಿದೆ. ಇತಿಹಾಸವು ಬಾಹ್ಯ ವಾಸ್ತವತೆ (outer reality) ಹಾಗೂ ಮನುಷ್ಯನ ವ್ಯಕ್ತಿನಿಷ್ಠ ಕ್ರಿಯೆ (subjective action) ಇವುಗಳ ನಡುವಿನ ದ್ವಂದ್ವಾತ್ಮಕ ಸಂಬಂಧದೊಳಗಿಂದ ಮುನ್ನಡೆಯುವ ಪ್ರಕ್ರಿಯೆ. ಈ ಹಿಂದಿನ ಸಕಲ ಚಾರಿತ್ರಿಕ ಘಟನಾವಳಿಗಳು ಅವು ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವರೂಪದ್ದಿರಬಹುದು ಹಾಗೂ ಜಾಗತಿಕ ಮಟ್ಟದ್ದಿರಬಹುದು, ಅಥವಾ ಇಲ್ಲದೇ ಇರಬಹುದು. ಇಂದಿನದನ್ನು ನಿರ್ಧರಿಸುತ್ತವೆ. ಆಯಾ ಕಾಲದ ಮನುಷ್ಯನ ವಿಚಾರ ಭಾವನೆಗಳೂ ಹಾಗೂ ನೀತಿ ನಡಾವಳಿಗಳೂ ಕೂಡ ಆತನ ವಿಶಿಷ್ಟ ಸಾಮಾಜಿಕ-ಚಾರಿತ್ರಿಕ ಹಿನ್ನೆಲೆಯಲ್ಲಿ ತಯಾರುಗೊಳ್ಳುತ್ತವೆ. ಇತಿಹಾಸ ಮನುಷ್ಯನನ್ನು ನಿರ್ಮಿಸುತ್ತದೆ ಎಂಬುದರ ಅರ್ಥ ಇದು. ಆದರೆ ಈ ಇತಿಹಾಸವು ಮನುಷ್ಯನ ಬೇಡಿಕೆಗಳು, ಇಚ್ಛಾಶಕ್ತಿ, ಸಾಮೂಹಿಕ ಕೃತಿಸಾಮರ್ಥ್ಯ ಇವುಗಳಿಂದ ಹೊರತಾದ, ಸ್ವತಂತ್ರವಾದ, ತನ್ನದೇ ಆದ ಗತಿಶಕ್ತಿಯನ್ನೇನೂ ಹೊಂದಿಲ್ಲ. ಇತಿಹಾಸವನ್ನು ಮಾನವನೇ ಸೃಷ್ಟಿಸುತ್ತಾನೆಂದೂ ಹಾಗೂ ಮಾನವ ನಿರ್ಮಿತ ಈ ಘಟ್ಟದ ವಿಶಿಷ್ಟ ಪರಿಸ್ಥಿತಿಗಳಲ್ಲಿ ವಿಶಿಷ್ಟ ಸಾಮಾಜಿಕ ನಿಯಮಗಳಿಗನುಸಾರವಾಗಿ ಬೆಳವಣಿಗೆ ಹೊಂದುತ್ತಿದೆಯೆಂದೂ ಮೊಟ್ಟಮೊದಲ ಬಾರಿಗೆ ವೈಜ್ಞಾನಿಕವಾಗಿ ಗ್ರಹಿಸಿದವನು ಮಾರ್ಕ್ಸ್. ತನ್ನ 'ಫ್ಯೂರಬಾಹನ ಕುರಿತು ಪ್ರಬಂಧ'ಗಳಲ್ಲಿ ಮಾರ್ಕ್ಸ್ ಹೇಳುತ್ತಾನೆ. "ಮನುಷ್ಯನನ್ನು ಆತನ ಪರಿಸರ ಸೃಷ್ಟಿಸುತ್ತದೆ ಹಾಗೂ ಬದಲಾದ ಪರಿಸರವು ಬದಲಾದ ಮನುಷ್ಯನನ್ನು ಸೃಷ್ಟಿಸುತ್ತದೆ. ಆದರೆ ಇಲ್ಲಿ ಅರಿತುಕೊಳ್ಳಬೇಕಾದ ಮಹತ್ವದ ಸಂಗತಿಯೆಂದರೆ ಪರಿಸರವನ್ನು ಬದಲಾಯಿಸುವವರು ಮನುಷ್ಯರೇ........ ಪರಿಸರಗಳಲ್ಲಿ ಪರಿವರ್ತನೆ ಹಾಗೂ ಮನುಷ್ಯರ ಕಾರ್ಯಾಚರಣೆ ಅಥವಾ ಸ್ವ-ಪರಿವರ್ತನೆ ಇವುಗಳು ಏಕಗೊಳ್ಳುವುದೆಂದರೇನೇ **ಕ್ರಾಂತಿಕಾರೀ ಕಾರ್ಯಾಚರಣೆ** ಎಂದು ತರ್ಕಬದ್ಧ ಯೋಚನೆಯಿಂದ ಅರಿತುಕೊಳ್ಳಬಹುದು."

ಇತಿಹಾಸವೆಂದರೆ ಮನುಷ್ಯನಿಂದ ಬೇರೆಯಾದದ್ದೇನೂ ಅಲ್ಲವೆಂಬುದನ್ನು ಮಾರ್ಕ್ಸ್ ತನ್ನ 'ಪವಿತ್ರ ಕುಟುಂಬ' ಗ್ರಂಥದಲ್ಲಿ ಮತ್ತೆ ಹೇಳುತ್ತಾನೆ. "**ಇತಿಹಾಸ** ಏನನ್ನೂ **ಮಾಡುವುದಿಲ್ಲ,** ಅದು 'ಅಗಾಧ ಐಶ್ವರ್ಯವನ್ನೇನೂ **ಹೊಂದಿಲ್ಲ,** ಅದು 'ಯುದ್ಧಗಳನ್ನೇನೂ ಹೂಡುವುದಿಲ್ಲ' ಇದೆಲ್ಲವನ್ನೂ ಮಾಡುವವನು – ಹಣ ಸಂಪಾದಿಸುವವನು, ಹೋರಾಡುವವನು ಮನುಷ್ಯ. ನೈಜ ಜೀವಂತ ಮನುಷ್ಯ; 'ಇತಿಹಾಸ' ವೆಂದರೆ ಮನುಷ್ಯನನ್ನು ತನ್ನದೇ ಆದ ವಿಶಿಷ್ಟ ಗುರಿಸಾಧನೆಗಾಗಿ ಉಪಯೋಗಿಸುವಂಥ ಬೇರೆಯೇ ಆದ ಒಂದು ಜೀವಶಕ್ತಿಯಲ್ಲ; ಇತಿಹಾಸವೆಂದರೆ ಮನುಷ್ಯರು ತಮ್ಮ ಉದ್ದೇಶಪ್ರಾಪ್ತಿಗಾಗಿ ನಡೆಸಿರುವ ಚಟುವಟಿಕೆಗಳೇ ಹೊರತು **ಮತ್ತೇನೂ ಅಲ್ಲ.**"

ಮನುಷ್ಯನು ತನ್ನ ಚಟುವಟಿಕೆಗಳಿಂದ ಜಗತ್ತನ್ನು ಬದಲಿಸುತ್ತಿದ್ದಂತೆಯೇ ತನ್ನನ್ನೂ ಬದಲಿಸಿಕೊಳ್ಳುತ್ತಿರುತ್ತಾನೆ. ಆದರೆ ಇದರರ್ಥ ಯಾವುದೇ ಚಾರಿತ್ರಿಕ ಹಂತದಲ್ಲಾಗಲಿ, ಯಾವುದೇ ಸಾಮಾಜಿಕ ಪರಿಸ್ಥಿತಿಯಲ್ಲಾಗಲಿ ಬಾಹ್ಯ ಜಗತ್ತನ್ನು ತನ್ನ ಇಚ್ಛೆಯಂತೆ ಬದಲಿಸು

ವಷ್ಟು, ಮನುಷ್ಯನು ಸರ್ವಶಕ್ತಿಶಾಲಿಯೇ ? ನಿಶ್ಚಿತ ವಾಗಿಯೂ ಅಲ್ಲ. ಹಾಗಿದ್ದರೆ ನ್ಯಾಯ, ಸಮಾನತೆ, ಸುಖ ಸಂಪತ್ತುಗಳು ನೆಲೆಯೂರಿದ ಸಮಾಜವನ್ನು ಮನುಷ್ಯನು ಅದೆಂದೋ ನಿರ್ಮಿಸಿ ಬಿಡಬಹುದಿತ್ತು. ಅಂತೆಯೇ ಪ್ರಖರ ವಾಸ್ತವವಾದಿಯಾಗಿದ್ದ ಮಾರ್ಕ್ಸ್ ಫ್ರೆಂಚ್ ರಾಜ್ಯ ಕ್ರಾಂತಿ ಯನ್ನು ವಿಶ್ಲೇಷಿಸುತ್ತ 'ಲೂಯಿ ಬೋನಾಪಾರ್ಟೆಯ ಹದಿನೆಂಟನೆ ಬ್ರೂಮೇರ' ಪ್ರಬಂಧದಲ್ಲಿ ಬರೆಯುತ್ತಾರೆ: "ಮನುಷ್ಯರು ತಮ್ಮ ಇತಿಹಾಸವನ್ನು ತಾವೇ ಸೃಷ್ಟಿಸುತ್ತಾರೆ, ಆದರೆ ಅವರು ಅದನ್ನು ತಮ್ಮ ಮನಸ್ಸಿಗೆ ತೋಚಿದ ಹಾಗೆ ನಿರ್ಮಿಸುವುದಿಲ್ಲ; ತಾವಾಗಿಯೇ ಆಯ್ದುಕೊಂಡ ಪರಿಸ್ಥಿತಿ ಗಳಲ್ಲಿ ಅದನ್ನು ನಿರ್ಮಿಸುವುದಿಲ್ಲ; ಹೊರತು ತಾವು ನೇರವಾಗಿ ಎದುರಿಸಬೇಕಾಗಿ ಬಂದ, ಭೂತಕಾಲದಿಂದ ತಮ್ಮೆದುರಿಗೆ ತಂದಿಡಲಾದ ಪರಿಸ್ಥಿತಿಗಳಲ್ಲಿ ನಿರ್ಮಿಸುತ್ತಾರೆ."

ಉತ್ಪಾದನಾ ವ್ಯವಸ್ಥೆ ಮೂಲಭೂತ

ಇತಿಹಾಸ-ಮನುಷ್ಯ ನಡುವಿನ ಸಂಬಂಧದ ಈ ವಿವೇಚನೆ 'ಕೋಳಿ ಮೊದಲೋ, ಮೊಟ್ಟೆ ಮೊದಲೋ' ಎಂಬ ಪ್ರಶ್ನೆಗೆ ಎಡೆಮಾಡಿಕೊಡಬೇಕಿಲ್ಲ. ಮಾರ್ಕ್ಸ್‌ನ ಐತಿಹಾಸಿಕ ಭೌತವಾದವು ಇಂತಹ ಪ್ರಶ್ನೆಯನ್ನು ಬಹಳ ಸುಲಭವಾಗಿ ತಳ್ಳಿ ಹಾಕಿ ಬಿಡುತ್ತದೆ. ಮಾನವ ಇತಿಹಾಸದ ಪ್ರಾರಂಭ ಮನುಷ್ಯ ಹಾಗೂ ನಿಸರ್ಗ ಇವುಗಳ ನಡುವೆ ಹುಟ್ಟಿಕೊಂಡ ಶ್ರಮಪ್ರಕ್ರಿಯೆಯಿಂದ ಎಂದು ಮಾರ್ಕ್ಸ್ ಗುರುತಿಸಿದನು. ತನ್ನ ಭೌತಿಕ ಅವಶ್ಯಕತೆ ಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮನುಷ್ಯನು ತನ್ನ ಶ್ರಮ ಶಕ್ತಿಯ ಆಧಾರದಿಂದ ನೈಸರ್ಗಿಕ ಶಕ್ತಿಗಳೊಂದಿಗೆ ಸಂಬಂಧ ವೇರ್ಪಡಿಸಿಕೊಂಡನು. ಆರಂಭದಲ್ಲಿಯೇ ಈ ಶ್ರಮಪ್ರಕ್ರಿಯೆ ಸಾಮೂಹಿಕ ಸ್ವರೂಪ ತಾಳಿತು. ಸಾಮೂಹಿಕ ಶ್ರಮದ ಸಹಾಯದಿಂದಲೇ ಮನುಷ್ಯನು ನಿಸರ್ಗದಲ್ಲಿಯ ವಸ್ತು ಹಾಗೂ ಪ್ರಕ್ರಿಯೆಗಳನ್ನು ತನ್ನ ಭೌತಿಕ ಉತ್ಪಾದನೆಯ ಕ್ರಮದಲ್ಲಿಯೇ ನಿಸರ್ಗದ ಜ್ಞಾನ ಮನುಷ್ಯನಿಗೆ ಆಗುತ್ತಾ ಬಂದು, ಈ ಜ್ಞಾನ ವನ್ನು ಬಳಸಿಕೊಂಡು ಮನುಷ್ಯನು ಉತ್ಪಾದನಾ ಸಾಧನಗಳನ್ನು ತಯಾರಿಸಿಕೊಂಡನು. ಕಾಲಕ್ರಮೇಣ ಭೌತಿಕ ಉತ್ಪಾದನೆಯ ಚೌಕಟ್ಟಿನೊಳಗೇ ಮನುಷ್ಯನ ಬೇಡಿಕೆಗಳು ಹೆಚ್ಚಾದದ್ದು, ಮನುಷ್ಯ–ಮನುಷ್ಯರ ನಡುವೆ ಹೊಸ ಹೊಸ ಸಂಬಂಧಗಳು ಹುಟ್ಟಿಕೊಂಡದ್ದು, ನಿಸರ್ಗದ ಕುರಿತಾದ ಅವನ ಜ್ಞಾನ ಹೆಚ್ಚ ತೊಡಗಿದ್ದು, ಈ ಜ್ಞಾನ ಹೆಚ್ಚಿದಂತೆಲ್ಲಾ ಆತನ ಉತ್ಪಾದನಾ ಸಾಧನಗಳು ಹಾಗೂ ವಿಧಾನಗಳು ಸುಧಾರಿತಗೊಂಡದ್ದು ಹಾಗೂ ಈ ರೀತಿ ಉತ್ಪಾದಕ ಶಕ್ತಿಗಳು ಹೆಚ್ಚಿದಂತೆಲ್ಲಾ ಇಡೀ ಸಮಾಜ ವಿಕಸಿತಗೊಂಡದ್ದು ನಮಗೆ ಕಂಡುಬರುತ್ತದೆ. ವಿಜ್ಞಾನ ತಂತ್ರಜ್ಞಾನಗಳ ಉಗಮ ಹಾಗೂ ವಿಕಾಸ, ವಿವಿಧ ಬಗೆಯ ಸಾಮಾಜಿಕ ಸಂಬಂಧಗಳು ಹಾಗೂ ಸಂಘಸಂಸ್ಥೆಗಳ ಉಗಮ ಹಾಗೂ ವಿಕಾಸ ಇವುಗಳು ಮನುಷ್ಯ ಸಮಾಜದ ಭೌತಿಕ ಉತ್ಪಾದನಾ ವ್ಯವಸ್ಥೆಯ ಉಗಮ ಹಾಗೂ ವಿಕಾಸಗಳೊಂದಿಗೆ ಅನ್ಯೋನ್ಯ, ದ್ವಂದ್ವಾತ್ಮಕ ಸಂಬಂಧ ಹೊಂದಿರುವುದನ್ನು ಮಾರ್ಕ್ಸ್ ಗುರುತಿಸಿದನು. ಆದರೆ ಈ ದ್ವಂದ್ವಾತ್ಮಕ ಸಂಬಂಧ ದಲ್ಲಿ ಉತ್ಪಾದನಾ ವ್ಯವಸ್ಥೆಯಲ್ಲಿಯ (ನಾವು ಸ್ಥೂಲವಾಗಿ ಇದನ್ನು ಆರ್ಥಿಕ ವ್ಯವಸ್ಥೆ ಎನ್ನಬಹುದು) ಬದಲಾವಣೆ ಗಳದ್ದೇ ಪ್ರಮುಖ ಹಾಗೂ ಆಧಾರ ಭೂತ ಪಾತ್ರ ಎಂಬು ದನ್ನೂ ಮಾರ್ಕ್ಸ್ ಗುರುತಿಸಿದನು.

ಚರಿತ್ರೆಯಲ್ಲಿ ಉತ್ಪಾದನಾ ವ್ಯವಸ್ಥೆ ಹಾಗೂ ಅದನ್ನಾ ಧರಿಸಿದ ಸಮಾಜ ವ್ಯವಸ್ಥೆಯ ಉಗಮ ಹಾಗೂ ವಿಕಾಸಗಳ ಅಭ್ಯಾಸದ ಮೂಲಕ ಮಾರ್ಕ್ಸ್ ಒಂದು ಅಸಾಧಾರಣ ಮಹತ್ವದ ಸಂಗತಿಯನ್ನು ಶೋಧಿಸಿದನು. ಅದೆಂದರೆ "ಇದು ವರೆಗಿನ ನಾಗರಿಕ ಸಮಾಜದ ಇತಿಹಾಸ ವರ್ಗ ಸಂಘರ್ಷದ ಇತಿಹಾಸವಾಗಿದೆ." ಮನುಷ್ಯ ಸಮಾಜ ತನ್ನ ಭೌತಿಕ ಜೀವನದ ಉತ್ಪಾದನೆ ಹಾಗೂ ಪುನರುತ್ಪಾದನೆಯ ಕ್ರಮದಲ್ಲೇ ಪರಸ್ಪರ ವಿರೋಧಿ ಹಿತಾಸಕ್ತಿಗಳುಳ್ಳ ವರ್ಗಗಳಾಗಿ ವಿಭಜನೆ ಗೊಂಡಿತೆಂಬುದನ್ನು ಅವನು ಕಂಡು ಹಿಡಿದನು. ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಆಯಾ ಘಟ್ಟಗಳಲ್ಲಿ ಆಯಾ ವಿಶಿಷ್ಟ ವರ್ಗಗಳು ಹುಟ್ಟಿಕೊಂಡು ವೈರುಧ್ಯಮಯ ಸಂಬಂಧದಲ್ಲಿ ನಿಂತುಕೊಂಡವು. ಈ ವೈರುಧ್ಯ ಆರ್ಥಿಕವಷ್ಟೇ ಅಲ್ಲ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ವೈಚಾರಿಕ ಕ್ಷೇತ್ರಗಳಲ್ಲೂ ಕೆಲಸ ಮಾಡತೊಡಗಿತು. ಆದರೆ ಇತಿಹಾಸದ ಮೂಲಭೂತ ಚಾಲಕ ಶಕ್ತಿಯಾದ ಉತ್ಪಾದನಾ ಶಕ್ತಿಗಳಿಗೂ, ಆದನ್ನಾಧರಿಸಿದ ಸಾಮಾಜಿಕ ಸಂಬಂಧಗಳಿಗೂ ಘರ್ಷಣೆಯಾಗ ತೊಡಗಿದಾಗ, ಈ ಸಾಮಾಜಿಕ ಸಂಬಂಧಗಳು ಉತ್ಪಾದನಾ, ಶಕ್ತಿಗಳ ಇನ್ನೂ ಉನ್ನತ ಮಟ್ಟದ ಬೆಳವಣಿಗೆಗೆ ಅಡಿಯಾದಾಗ, ಸಮಾಜ ವ್ಯವಸ್ಥೆಯಲ್ಲಿಯ ಮೊದಲಿನ ವರ್ಗ ಸಂಬಂಧ ನಾಶಗೊಳಿಸಲ್ಪಟ್ಟು ಹೊಸ ಸಂಬಂಧಗಳು ಜನ್ಮ ತಾಳುತ್ತವೆ. ಈ ವಿಚಾರವನ್ನೇ ಮಾರ್ಕ್ಸ್ ತನ್ನ ಬಹುಪ್ರಸಿದ್ಧ 'ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಮುನ್ನುಡಿ'ಯಲ್ಲೂ ಹಾಗೂ ಇತರ ಲೇಖನಗಳಲ್ಲೂ ವಿದ್ವತ್ಪೂರ್ಣವಾಗಿ ವಿವೇಚಿಸಿ ದ್ದಾನೆ. ಈ ಮೂಲಭೂತ ಅನ್ವೇಷಣಾ ಪದ್ಧತಿಯನ್ನೇ ಆಧರಿಸಿ ಗುಲಾಮ ಹಾಗೂ ಊಳಿಗಮಾನ್ಯ ಸಮಾಜ ವ್ಯವಸ್ಥೆ ಗಳನ್ನೂ ಹಾಗೂ ಪ್ರಮುಖವಾಗಿ ಆಧುನಿಕ ಕಾಲದ ಬಂಡ ವಾಳಶಾಹಿ ಸಮಾಜ ವ್ಯವಸ್ಥೆಯನ್ನೂ ಅವನು ವಿಶ್ಲೇಷಿಸಿದನು. ಇತಿಹಾಸದ ಮುನ್ನಡೆಗೆ ವರ್ಗಸಂಘರ್ಷವೇ ಚಾಲಕ ಶಕ್ತಿ ಎಂಬುದನ್ನು ಅವನು ತೋರಿಸಿಕೊಟ್ಟನು.

ಮಾರ್ಕ್ಸ್‌ನ ಕೊಡುಗೆ

ವರ್ಗ ವೈರುಧ್ಯದ ಕಲ್ಪನೆಯೇ ಮಾರ್ಕ್ಸ್‌ನಿಂದ ಹುಟ್ಟಿ ಕೊಂಡಿತೆಂದಲ್ಲ. ಮಾರ್ಕ್ಸ್ ತನ್ನ ಗೆಳೆಯ ಜೋಸೇಫ್ ವೈಡಮೇಯರನಿಗೆ 5 ಮಾರ್ಚ್ 1882ರಂದು ಬರೆದ ಪತ್ರದಲ್ಲಿ

ಹೇಳುತ್ತಾನೆ: "ಆಧುನಿಕ ಯುಗದಲ್ಲಿ ವರ್ಗಗಳ ಅಸ್ತಿತ್ವವನ್ನು ಶೋಧಿಸಿದ ಮಾನ್ಯತೆ ನನಗೇನೂ ಸಲ್ಲಬೇಕಾಗಿಲ್ಲ. ನನಗಿಂತ ಬಹಳ ಮೊದಲೇ ಬೂರ್ಜ್ವಾ ಇತಿಹಾಸಕಾರರು ವರ್ಗ ಹೋರಾಟದ ಐತಿಹಾಸಿಕ ಬೆಳವಣಿಗೆಯನ್ನು ಹಾಗೂ ಬೂರ್ಜ್ವಾ ಅರ್ಥಶಾಸ್ತ್ರಜ್ಞರು ವರ್ಗಗಳ ಆರ್ಥಿಕ ಅಂತರ್ರಚನೆಯನ್ನು ಕುರಿತು ವರ್ಣಿಸಿದ್ದಾರೆ. ಹೊಸದಾಗಿ ನಾನು ಸಿದ್ಧ ಮಾಡಿ ತೋರಿಸಿದ್ದಿಷ್ಟೇ : 1) **ವರ್ಗಗಳ ಅಸ್ತಿತ್ವವು ಆಯಾ ಐತಿಹಾಸಿಕ ಹಂತಗಳಲ್ಲಿಯ ಉತ್ಪಾದನಾ ವ್ಯವಸ್ಥೆಯ ಬೆಳವಣಿಗೆಯೊಂದಿಗೆ** ಹೊಂದಿಕೊಂಡಿದೆ. 2) ಈ ವರ್ಗಸಂಘರ್ಷವು ಅತ್ಯಗತ್ಯವಾಗಿ **ಕಾರ್ಮಿಕವರ್ಗದ ಸರ್ವಾಧಿಕಾರತ್ವದಲ್ಲಿ** ಪರಿಣತಿಗೊಳ್ಳುತ್ತದೆ. 3) ಈ ಸರ್ವಾಧಿಕಾರವೂ ಕೂಡ **ಎಲ್ಲ** ವರ್ಗಗಳ ಅಳಿವಿಗೂ ಹಾಗೂ **ವರ್ಗ ವಿಹೀನ ಸಮಾಜಕ್ಕೂ** ಸಂಕ್ರಮಣಾವಸ್ಥೆಯಾಗಿ ಮಾತ್ರ ಇರುತ್ತದೆ." ಇಲ್ಲಿ ಸ್ಪಷ್ಟಗೊಳ್ಳುವ ಸಂಗತಿಯೆಂದರೆ ಮೊದಲನೆಯದಾಗಿ, ಕಾರ್ಮಿಕವರ್ಗದ ನೇತೃತ್ವದಲ್ಲಿ ಮಾತ್ರ ಸಮಾಜವಾದಿ ಕ್ರಾಂತಿ ಸಾಧ್ಯ; ಎರಡನೆಯದಾಗಿ, ಕ್ರಾಂತಿಯ ನಂತರದ ಕಾಲದಲ್ಲಿ ಕಾರ್ಮಿಕವರ್ಗದ ಸರ್ವಾಧಿಕಾರತ್ವ ಅತ್ಯಗತ್ಯ, ಹಾಗೂ ಮೂರನೆಯದಾಗಿ, ಕಾರ್ಮಿಕ–ಬಂಡವಾಳಶಾಹಿ ವರ್ಗಗಳ ನಡುವಿನ ವರ್ಗ ಸಂಘರ್ಷವು ಇತಿಹಾಸದಲ್ಲಿಯ ಕೊನೆಯ ವರ್ಗವೈರುಧ್ಯವಾಗಿದ್ದು, ಬಂಡವಾಳಶಾಹಿಯನ್ನು ನಾಶಗೊಳಿಸುವುದರೊಂದಿಗೆ ಇಡೀ ಜಗತ್ತನ್ನೇ ಕಾರ್ಮಿಕ ವರ್ಗವು ಆವರಿಸಿಕೊಂಡು, ತನ್ನ ಪ್ರತ್ಯೇಕ ವರ್ಗ ಅಸ್ತಿತ್ವವನ್ನೂ ಕಳೆದುಕೊಂಡು ವರ್ಗವಿಹೀನ ಸಮಾಜದ ಸ್ಥಾಪನೆಯತ್ತ ಸಾಗುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯನ್ನು ಆಳವಾಗಿ ವಿಶ್ಲೇಷಿಸಿದ ಮಾರ್ಕ್ಸ್ ಬಂಡವಾಳಶಾಹಿ ವರ್ಗವು ಇತಿಹಾಸದಲ್ಲಿ ತಾನು ಕಾಲಿಡುವುದರ ಜೊತೆಗೆಯೇ ತನ್ನ ಗೋರಿಯನ್ನು ತೋಡುವ ಕಾರ್ಮಿಕ ವರ್ಗವನ್ನು ಹುಟ್ಟಿಸಿ ಬೆಳೆಸುತ್ತದೆ ಎಂಬ ಸತ್ಯ ತಲುಪುತ್ತಾನೆ. ಆದರೆ ಈ ರೀತಿ ಬಂಡವಾಳಶಾಹೀ ವರ್ಗದ ವಿನಾಶವು ಐತಿಹಾಸಿಕ ನಿಯಮಗಳಿಂದ ನಿರ್ಧರಿತಗೊಳ್ಳುವ ಅನಿವಾರ್ಯತೆ ಎಂದು ಹೇಳುವಾಗಲೇ ಮಾರ್ಕ್ಸ್ ಇದು ತನ್ನಿಂದ ತಾನೇ ಸಂಭವಿಸಲಾರದೆಂಬುದನ್ನೂ ಸ್ಪಷ್ಟಪಡಿಸುತ್ತಾನೆ. ಕ್ರಾಂತಿಯನ್ನು ಕಾರ್ಮಿಕವರ್ಗವು ಸಂಘಟಿತಗೊಂಡು, ಪ್ರಜ್ಞಾಪೂರ್ವಕವಾಗಿ ನೆರವೇರಿಸಬೇಕಾಗಿರುವ ಅವಶ್ಯಕತೆಯನ್ನು ಮಾರ್ಕ್ಸ್ ಒತ್ತಿ ಹೇಳುತ್ತಾನೆ. ಈ ಕುರಿತಾದ ಅನೇಕ ಅಮೌಲ್ಯ ಮಾರ್ಗದರ್ಶಕ ತತ್ವಗಳು ಅವನ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ. ಕಾರ್ಮಿಕ ವರ್ಗವನ್ನು ತುಚ್ಛವಾಗಿ ಕಾಣುವ 'ಕಾರ್ಮಿಕರಿಗೆ ಅಂಥ ಕ್ರಾಂತಿಕಾರಿ ಜ್ಞಾನ, ಪ್ರಜ್ಞೆ ಉಂಟೇ ?' ಎಂದು ಹುಬ್ಬೇರಿಸಿ ಕೇಳುವ ಸಿದ್ಧಾಂತಿಗಳನ್ನು ಮಾರ್ಕ್ಸ್ ತರಾಟೆಗೆ ತೆಗೆದುಕೊಳ್ಳುತ್ತಾನೆ. 1845ರಲ್ಲೇ ಬರೆದ 'ಪವಿತ್ರ ಕುಟುಂಬ'ದಲ್ಲಿ ತರುಣ ಮಾರ್ಕ್ಸ್ ಹೇಳುತ್ತಾನೆ : "ಸಮಾಜವಾದಿ ಲೇಖಕರು ಕಾರ್ಮಿಕವರ್ಗಕ್ಕೇ ಈ ಕ್ರಾಂತಿಕಾರಿ ಐತಿಹಾಸಿಕ ಪಾತ್ರ ಸೇರಿದ್ದು ಎಂದು ಹೇಳುವಾಗ, ಕಾರ್ಮಿಕರು **ದೇವತೆ**ಗಳೆಂದೇನೂ ಅವರು ತಿಳಿದಿರುವುದಿಲ್ಲ. ಮಾನವೀಯತೆಯೆಲ್ಲವೂ ಕಾರ್ಮಿಕ ವರ್ಗದಲ್ಲಿ ಹತ್ತಿಕ್ಕಲ್ಪಟ್ಟಿರುವುದರಿಂದ ; ಕಾರ್ಮಿಕರ ಜೀವನ ಪರಿಸ್ಥಿತಿ ಕೂಡಿಕೊಂಡಿರುವುದರಿಂದ ; ಮಾನವ ಇಂದು ಕಾರ್ಮಿಕನಲ್ಲಿ ಕಳೆದುಕೊಂಡದ್ದರಿಂದ, ಆದರೆ ಅದೇ ವೇಳೆಗೆ ಆ ಹಾನಿಯು ವೈಚಾರಿಕ ಪ್ರಜ್ಞೆ ಹೊಂದಿರುವುದಲ್ಲದೇ ಅತ್ಯಂತ ತುರ್ತಾದ, ಮರೆಮಾಚಿಸಲಾಗದ ಅವಶ್ಯಕತೆಯಿಂದಾಗಿ ಈ ಅಮಾನುಷತೆಯ ವಿರುದ್ಧ ಬಂಡೇಳಲು ಉದ್ಯುಕ್ತನಾಗಿರುವುದರಿಂದ ; ಇದೆಲ್ಲದುದರಿಂದ ಕಾರ್ಮಿಕವರ್ಗ ತನ್ನನ್ನು ತಾನೇ ಮುಕ್ತಗೊಳಿಸಬಲ್ಲದು ಹಾಗೂ ಮುಕ್ತಗೊಳಿಸಲೇಬೇಕು ಎನ್ನುವುದು ಸಿದ್ಧವಾಗುತ್ತದೆ. ಆದರೆ ತನ್ನ ಅವಸ್ಥೆಗೆ ಕಾರಣವಾದ ತನ್ನ ಜೀವನದ ಪರಿಸ್ಥಿತಿಗಳನ್ನು ನಾಶಗೊಳಿಸದೇ ಅದು ತನ್ನನ್ನು ತಾನೇ ಮುಕ್ತಗೊಳಿಸಲಾರದು. ಇಂದಿನ ಒಟ್ಟು ಸಮಾಜದ **ಎಲ್ಲ** ಅಮಾನವೀಯ ಪರಿಸ್ಥಿತಿಗಳನ್ನು ನಾಶಗೊಳಿಸದೇ ಅದು ತನ್ನ ಜೀವನದ ಪರಿಸ್ಥಿತಿಗಳನ್ನು ನಾಶಗೊಳಿಸಲಾರದು. ಕಷ್ಟಮಯವಾದ ಆದರೆ ಉಕ್ಕಿನಂತೆ ಗಟ್ಟಿಗೊಳಿಸುವ **ದುಡಿಮೆ**ಯ ಶಾಲೆಯಿಂದ ಅದು ಹಾದು ಹೋಗುವದು ವ್ಯರ್ಥಕ್ಕಾಗಿಯಲ್ಲ. ಈ ಅಥವಾ ಆ ಕಾರ್ಮಿಕನಾಗಲೀ, ಅಥವಾ ಒಟ್ಟು ಕಾರ್ಮಿಕವರ್ಗವಾಗಲೀ ಈ ಗಳಿಗೆಗೆ ತನ್ನ ಧ್ಯೇಯ ಏನು ಎಂದು ಪರಿಗಣಿಸಿರುತ್ತದೆ ಎಂಬುದು ಮುಖ್ಯ ಪ್ರಶ್ನೆಯಲ್ಲ. **ಕಾರ್ಮಿಕ ವರ್ಗ ಇರುವುದು ಏನು** ಹಾಗೂ **ಹಾಗಿರುವ** ಕಾರಣದಿಂದಾಗಿ ಅದು ಏನನ್ನು ಮಾಡಲು ಉದ್ಯುಕ್ತಗೊಳ್ಳುವದು ಎಂಬುದು ಮುಖ್ಯ ಪ್ರಶ್ನೆ. ಅದರ ಧ್ಯೇಯ ಹಾಗೂ ಐತಿಹಾಸಿಕ ಕಾರ್ಯಗಳು ಅದರ ಜೀವನ ಪರಿಸ್ಥಿತಿಯಲ್ಲಿ ಹಾಗೂ ಇಂದಿನ ಒಟ್ಟು ಬೂರ್ಜ್ವಾ ವ್ಯವಸ್ಥೆಯಲ್ಲಿ ಹಿಂತೆಗೆದುಕೊಳ್ಳಲಾಗದ ರೀತಿಯಲ್ಲಿ ಮತ್ತು ಸುಸ್ಪಷ್ಟವಾಗಿ ಪ್ರಕಟಗೊಂಡಿವೆ" ಹೀಗೆ ಕಾರ್ಮಿಕವರ್ಗದ ಐತಿಹಾಸಿಕ ಪಾತ್ರವನ್ನು ಘೋಷಿಸುವುದರ ಜೊತೆಗೆಯೇ ಮಾರ್ಕ್ಸ್ ಕಾರ್ಮಿಕರಿಗೆ ಕರೆ ಕೊಡುತ್ತಾನೆ: "ನೀವು ಹದಿನೈದು, ಇಪ್ಪತ್ತು, ಐವತ್ತು ವರ್ಷಗಳವರೆಗೆ ಯಾದವೀಕಲಹ ಹಾಗೂ ರಾಷ್ಟ್ರೀಯ ಹೋರಾಟಗಳ ಮೂಲಕ ಹಾದು ಹೋಗಬೇಕು. ಇದು ನಿಮ್ಮ ತುರ್ತು ಜೀವನದ ಪರಿಸ್ಥಿತಿಗಳ ಬದಲಾವಣೆಗಾಗಿಯಷ್ಟೇ ಅಲ್ಲ, ರಾಜಕೀಯ ಅಧಿಕಾರಕ್ಕಾಗಿ ನಿಮ್ಮನ್ನು ನೀವೇ ಸಮರ್ಥರನ್ನಾಗಿ ಮಾಡಿಕೊಳ್ಳಲು ಕೂಡ." ಅಂತೆಯೇ ಸಮಾಜವಾದಿ ಕ್ರಾಂತಿಯನ್ನು ಮಾರ್ಕ್ಸ್ ಇತಿಹಾಸದಲ್ಲಿಯ ಪ್ರಥಮ ಪ್ರಜ್ಞಾಪೂರ್ವಕ ಕ್ರಾಂತಿಯೆಂದು ಕರೆಯುತ್ತಾನೆ. ಈ ಹಿಂದಿನ ಅನೇಕ ಕ್ರಾಂತಿಗಳಲ್ಲಿ, ಕ್ರಾಂತಿಯಲ್ಲಿ ಪಾಲ್ಗೊಂಡವರ ಪ್ರಜ್ಞೆ ಹಾಗೂ ವಾಸ್ತವತೆಯ ಮಧ್ಯೆ, ಧ್ಯೇಯ ಹಾಗೂ ಪರಿಣಾಮಗಳ ಮಧ್ಯೆ ಬಿರುಕು ಇತ್ತೆಂಬುದು ಸ್ಪಷ್ಟವಾಗಿದೆ. ಆದರೆ ಮಾನವನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಇತಿಹಾಸದ

ವಸ್ತುನಿಷ್ಠ ನಿಯಮಗಳು ಹಾಗೂ ಕ್ರಾಂತಿಕಾರಿ ವರ್ಗದ ಇಚ್ಛಿತ ಧ್ಯೇಯ ಇವುಗಳು ಸಮ್ಮಿಳಿತಗೊಳ್ಳುವುದು ಸಮಾಜವಾದಿ ಕ್ರಾಂತಿಯಲ್ಲೇ.

ಮಾರ್ಕ್ಸ್‌ನ 'ಇತಿಹಾಸ – ಪೂರ್ವ ಇತಿಹಾಸ'ದ ಕಲ್ಪನೆ

ನಾಗರಿಕ ಸಮಾಜದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಮನುಷ್ಯ ಸಾಧಿಸಿದ್ದು – ಅವನು ಸೃಷ್ಟಿಸಿದ **ಭೌತಿಕ** – ಸಾಂಸ್ಕೃತಿಕ ಸಂಪತ್ತು, ಜ್ಞಾನ–ವಿಜ್ಞಾನಗಳ ಭಾಂಡಾರ–ಇವೆಲ್ಲ ಯಾವನನ್ನೂ ಅದ್ಭುತದ ಅನುಭವದತ್ತ ಒಯ್ಯುವಂಥವು. ಆದರೆ ಇದೇ ಕಾಲಾವಧಿಯಲ್ಲಿ ಮನುಷ್ಯ ಸಮಾಜ ತನ್ನ ಮುಖಕ್ಕೆ ತಾನೇ ಕಪ್ಪು ಮಸಿ ಬಳಿದುಕೊಂಡದ್ದೇನು ಕಮ್ಮಿಯಿದೆಯೇ ? ಬಡತನ, ಹಸಿವು, ಅಜ್ಞಾನ, ತಪ್ಪಿಸಬಹುದಾಗಿದ್ದ ನೋವು, ತನ್ನ ಮೇಲೇ ತಾನೇ ಪ್ರದರ್ಶಿಸಿದ ಅಮಾನವೀಯತೆ, ಹಿಂಸೆ, ಇವೆಲ್ಲ ಏನು ? ಈಗಂತೂ ಬಂಡವಾಳಶಾಹಿ ವ್ಯವಸ್ಥೆಯ ಅತ್ಯುಚ್ಚ ಹಂತವಾದ ಸಾಮ್ರಾಜ್ಯವಾದವು ತನ್ನ ಗೋರಿಯನ್ನಷ್ಟೇ ಅಲ್ಲ, ಇಡೀ ಮಾನವ ಜನಾಂಗದ ಗೋರಿ ತೋಡಲು (ಜಾಗತಿಕ ಕಾರ್ಮಿಕ ವರ್ಗ ಜಾಗತಿಕ ಬಂಡವಾಳಶಾಹಿಯ ಗೋರಿ ತೋಡುವುದಕ್ಕೆ ಮುಂಚಿತವಾಗಿ !) ಸನ್ನದ್ಧವಾಗುತ್ತಿದೆಯಲ್ಲ, ಇದೆಲ್ಲ ಹೇಗೆ ? ಮಾನವ ಸಮಾಜದ ಮಹಾನ್ ಸಾಧನೆ ಕಣ್ಣು ಕುಕ್ಕಿಸುವಾಗಲೇ ಈ ಪ್ರಶ್ನೆ ಕೂಡ ನಮ್ಮನ್ನು ಕಾಡಿಸದೇ ಇರದು. ಇಂತಹ ವೈರುಧ್ಯಪೂರ್ಣ ಬೆಳವಣಿಗೆಗೆ ಮೂಲಭೂತವಾಗಿ ಮಾನವ ಸಮಾಜದಲ್ಲಿಯ ವರ್ಗಶೋಷಣೆಯೇ ಕಾರಣ ಎಂದು ಮಾರ್ಕ್ಸ್ ತೋರಿಸಿಕೊಟ್ಟನು. ಶೋಷಕ ಬಂಡವಾಳಶಾಹಿ ವರ್ಗವನ್ನು ಜಗತ್ತಿನಿಂದ ಅಳಿಸಿಹಾಕುವುದರ ಮೂಲಕ ತಾನು ಕೂಡ ಅಳಿದುಹೋಗಿ ಕಾರ್ಮಿಕ ವರ್ಗವು ಶೋಷಣ ರಹಿತ, ವರ್ಗರಹಿತ ಸಮಾಜ–ಕಮ್ಯುನಿಸ್ಟ್ ಸಮಾಜವನ್ನು ನಿರ್ಮಿಸುತ್ತದೆಂಬ ಮಹಾನ್ ಕಲ್ಪನೆಯನ್ನು ಮಾರ್ಕ್ಸ್ ಕೊಟ್ಟನು. ಇದನ್ನೇ ಮಾರ್ಕ್ಸ್ ತನ್ನ 'ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಮುನ್ನುಡಿ'ಯಲ್ಲಿ ಹೀಗೆ ಹೇಳುತ್ತಾನೆ: "ಈ ಸಮಾಜ ವ್ಯವಸ್ಥೆಯ (ಕಮ್ಯುನಿಸಂ) ಸ್ಥಾಪನೆಯೊಂದಿಗೆ ಮಾನವ ಜನಾಂಗದ ಪೂರ್ವ–ಇತಿಹಾಸವು (the prehistory of human society) ಕೊನೆಗೊಳ್ಳುತ್ತದೆ." ಇಲ್ಲಿನವರೆಗಿನ ಅಂದರೆ ಕಮ್ಯುನಿಸ್ಟ್ ಸಮಾಜದ ನಿರ್ಮಾಣದವರೆಗಿನ, ಕಾಲವನ್ನು ಮಾರ್ಕ್ಸ್ 'ಮಾನವ ಜನಾಂಗದ ಪೂರ್ವ ಇತಿಹಾಸವೆಂದುಕರೆದದ್ದು ಅತ್ಯಂತಅರ್ಥ ಗರ್ಭಿತವಾಗಿದೆ. ಏಕೆಂದರೆ ನಿಜವಾದ, ಅಂದರೆ ಮೇಲೆ ಉಕ್ತಿಸಿದ ಅಂತರ್ವೈರುಧ್ಯಗಳಿಂದ ಮುಕ್ತಗೊಂಡ, ಮಾನವೀಯತೆಯನ್ನೆಲ್ಲ ಮೈಗೂಡಿಸಿಕೊಂಡು ಅದನ್ನು ಹೆಚ್ಚು ಹೆಚ್ಚು ಪ್ರಜ್ವಲಿಸಿಕೊಳ್ಳುತ್ತ ಪ್ರತಿಸೂರ್ಯನಾಗುವ ಮನುಷ್ಯ ಹುಟ್ಟುವದು ಕಮ್ಯುನಿಸ್ಟ್ ಸಮಾಜದಲ್ಲಿಯೇ. ಅಂತೆಯೇ ಮಾನವನ **ನಿಜವಾದ ಇತಿಹಾಸ** ಪ್ರಾರಂಭವಾಗುವದೂ ಆಗಿನಿಂದಲೇ. "ನಾವೆಲ್ಲ ಇನ್ನೂ ಮಾನವ ಜನಾಂಗದ ಪೂರ್ವ ಇತಿಹಾಸದಲ್ಲಿ ಬಾಳುತ್ತಿದ್ದೇವೆಂಬ ಅಸ್ವಸ್ಥ ಪ್ರಜ್ಞೆ, ಬೆಳೆಸಿಕೊಳ್ಳಿ, ಹಾಗೂ ನಿಜವಾದ ಇತಿಹಾಸ ನಿರ್ಮಾಣಕ್ಕಾಗಿ ಹೋರಾಡಿರಿ" ಎಂದು ಕರೆಕೊಟ್ಟ ಮಹಾನ್ ಕ್ರಾಂತಿಕಾರಿ ಮಾರ್ಕ್ಸ್‌ನಿಗೆ ವಂದನೆಗಳು.

–ಸುಧೀಂದ್ರ ಕುಲಕರ್ಣಿ

ಸಮಾಜವಾದೀ ಕ್ರಾಂತಿ ಬರುವುದನ್ನು ಕಂಡು ಆಳುವ ವರ್ಗಗಳು ತತ್ತರಿಸಲಿ. ಕಾರ್ಮಿಕ ವರ್ಗಕ್ಕೆ ಕಳೆದುಕೊಳ್ಳಲು ಉಳಿದಿರುವುದು ದಾಸ್ಯದ ಸಂಕೋಲೆಗಳಷ್ಟೆ.
ಆದರೆ ಪಡೆಯಲು ಸಮಸ್ತ ಜಗತ್ತೇ ಇದೆ.
ಎಲ್ಲಾ ದೇಶಗಳ ಶ್ರಮ ಜೀವಿಗಳೇ ಒಂದಾಗಿ !

—ಮಾರ್ಕ್ಸ್ ಮತ್ತು ಎಂಗೆಲ್ಸ್,
'ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ'ಯಲ್ಲಿ

'ಬಂಡವಾಳ' - ಗ್ರಂಥವನ್ನು ಅಭ್ಯಾಸ ಮಾಡುವುದು ಹೇಗೆ?

★

ಪಿ. ರಾಮಚಂದ್ರರಾವ್

★

ಕಾರ್ಲ್‌ಮಾರ್ಕ್ಸ್‌ರ ಅತ್ಯಂತ ಶ್ರೇಷ್ಠ ಕೃತಿ 'ಬಂಡವಾಳ'. ಈ ಕೃತಿಯನ್ನು ರಚಿಸಲು ಅವರು ಪಟ್ಟ ಶ್ರಮ ಅತ್ಯಧಿಕ. ಮಾರ್ಕ್ಸ್‌ರ ಸಮಗ್ರ ಚಿಂತನೆಯ ಸತ್ವಸಾರ ಈ ಗ್ರಂಥದಲ್ಲಿ ಅಳವಡಿಸಲ್ಪಟ್ಟಿದೆ. ಯಾವುದೇ ಮಾರ್ಕ್ಸ್‌ವಾದಿಯ ತಿಳುವಳಿಕೆಯು 'ಬಂಡವಾಳ'ದ ಅಭ್ಯಾಸದ ಹೊರತು ಭರ್ತಿಯಾಗಲು ಅಸಾಧ್ಯ.

ಆದರೆ ಅದೇ ವೇಳೆ ಈ ಗ್ರಂಥದ ಅಭ್ಯಾಸ ಮಾತ್ರ ಉಕ್ಕಿನ ಕಡಲೆಕಾಯಿ ಕಡಿದಂತೆ. ಸರಿಯಾದ ಮಾರ್ಗದರ್ಶನವಿಲ್ಲದೆ ಈ ಗ್ರಂಥವನ್ನು ಅಭ್ಯಾಸ ಮಾಡುವುದರಿಂದ ಅದರ ಬಗ್ಗೆ ತಪ್ಪು ಮತ್ತು ತೀರಾ ಅಸ್ಪಷ್ಟ ತಿಳುವಳಿಕೆಗೆ ಎಡೆಉಂಟಾಗುಗುವುದರಲ್ಲಿ ಎರಡು ಮಾತಿಲ್ಲ.

ಆದ ಕಾರಣ ಬಂಡವಾಳ ಗ್ರಂಥ ಅಭ್ಯಾಸ ಮಾಡಲು ಹೊರಡುವ ಮೊದಲು ಅದನ್ನು ಹೇಗೆ ಅಭ್ಯಾಸ ಮಾಡುವುದು ಎಂಬುದರ ಕುರಿತು ಸ್ವಲ್ಪ ತಿಳಿದುಕೊಳ್ಳುವುದು ಸೂಕ್ತ. ಹಲವು ಮಾರ್ಕ್ಸ್‌ವಾದಿಗಳು ಈ ಕುರಿತು ಲೇಖನಗಳನ್ನು ಬರೆದಿದ್ದಾರೆ, ಉಪನ್ಯಾಸಗಳನ್ನು ಕೊಟ್ಟಿದ್ದಾರೆ.

ಈ ಲೇಖನದ ಮೂಲಕ ನಾನೂ ನನ್ನದೇ ಆದ ರೀತಿಯಲ್ಲಿ 'ಬಂಡವಾಳ'ವನ್ನು ಅಭ್ಯಸಿಸಲು ಓದುಗರಿಗೆ ತಿಳಿಯ ಹೇಳಲು ಬಯಸುತ್ತೇನೆ.

ಎಷ್ಟು ಸಂಪುಟಗಳು

'ಬಂಡವಾಳ'ವು ನಾಲ್ಕು ಸಂಪುಟಗಳಿಂದ ಕೂಡಿದೆ: ನಾಲ್ಕನೇ ಸಂಪುಟವು 3 ಭಾಗಗಳಿಂದ ಕೂಡಿದೆ. ಹೀಗೆ ಬಂಡವಾಳವು 6 ಪ್ರತ್ಯೇಕ ಪ್ರತ್ಯೇಕ ಪುಸ್ತಕಗಳಿಂದ ಕೂಡಿದೆ.

1ನೇ ಸಂಪುಟದಲ್ಲಿ ಬಂಡವಾಳಶಾಹಿ ಉತ್ಪಾದನೆಯ ಕುರಿತು 2ನೇ ಸಂಪುಟದಲ್ಲಿ ಬಂಡವಾಳಶಾಹಿ ವಿತರಣೆಯ ಕುರಿತು ವ್ಯಾಖ್ಯಾನವಿದೆ. 3ನೇ ಸಂಪುಟದಲ್ಲಿ ಬಂಡವಾಳಶಾಹಿ ಉತ್ಪಾದನೆ ಮತ್ತು ವಿತರಣೆಯ ಒಟ್ಟು ಪ್ರಕ್ರಿಯೆ ಕುರಿತು ವ್ಯಾಖ್ಯಾನವಿದೆ. 4ನೇ ಸಂಪುಟದ 3 ಭಾಗಗಳಲ್ಲಿ ಕಾರ್ಲ್ ಮಾರ್ಕ್ಸ್‌ರ ಪೂರ್ವದ 'ಅಧಿಕ ಮೌಲ್ಯ (**surplus value)**ದ ವಿವಿಧ ಸಿದ್ಧಾಂತಗಳ ಕುರಿತು ವ್ಯಾಖ್ಯಾನವಿದೆ.

ಮಾರ್ಕ್ಸ್ ವಾದವು ವಿಷಯವನ್ನು ಪ್ರತಿಪಾದಿಸುವ ರೀತಿ ಚಾರಿತ್ರಿಕವಾಗಿ ಒಂದು ವಿಷಯದ ಕುರಿತಾದ ಜ್ಞಾನವು ಹೇಗೆ ಬೆಳೆದುಬರುತ್ತದೆ ಎಂಬುದನ್ನು ತೋರಿಸ ಕೊಡುವು ದಾಗಿದೆ. ಆ ರೀತಿಯಲ್ಲಿ ಕಾರ್ಲ್ ಮಾರ್ಕ್ಸ್‌ರ ಬಂಡವಾಳ ಗ್ರಂಥವು ಮೊದಲು 'ಅಧಿಕ ಮೌಲ್ಯಗಳ' ವಿವಿಧ ಸಿದ್ಧಾಂತ ಗಳಿಂದ ಆರಂಭವಾಗಿ, ಬಂಡವಾಳಶಾಹಿ ಆರ್ಥಿಕ–ಸಾಮಾಜಿಕ ವ್ಯವಸ್ಥೆಯಲ್ಲಿ ಬಂಡವಾಳದ ಪ್ರಕ್ರಿಯೆಗಳು ಒಟ್ಟಾಗಿ ಹೇಗೆ ಕಾಣುತ್ತವೆ ಎಂದು ತಿಳಿಸಿ, ಆಮೇಲೆ ಆ ಸಮಾಜದಲ್ಲಿ ಸರಕುಗಳು ಯಾವ ನಿಯಮಗಳಿಗನುಸಾರವಾಗಿ ವಿತರಣೆ ಯಾಗುತ್ತವೆ ಎಂದು ತಿಳಿಸಿ, ಆಮೇಲೆ **ಕೊನೆಯಲ್ಲಿ** ಸರಕುಗಳ ಉತ್ಪತ್ತಿ ಹೇಗೆ ನಡೆಯುತ್ತದೆ ಎಂದು ತಿಳಿಸಲು ಹೊರಡ ಬೇಕಿತ್ತು. ಮಾರ್ಕ್ಸ್‌ರು ಮೊದಲು ಹಾಗೆಯೇ ಬರೆಯ ಬೇಕೆಂದು ಚಿಂತಿಸಿದ್ದರು. ತಾನು ವಿಜ್ಞಾನಿಯಾಗಿದ್ದುದ ರಿಂದಲೋ ಅಥವಾ ಇಷ್ಟೆಲ್ಲಾ ಬರೆದು ಮುಗಿಸಲು ಆಯುಷ್ಯ ಮಿತಿಯಲ್ಲಿ ಸಾಧ್ಯವಿಲ್ಲವೆಂಬ ಅರಿವಿನಿಂದಲೇ ಅಥವಾ ಬಂಡವಾಳ ವರ್ಗಕ್ಕೂ ಕಾರ್ಮಿಕವರ್ಗಕ್ಕೂ ನಡುವಿನ ತಿಕ್ಕಾಟದ ತೀವ್ರ ರಾಜಕೀಯ ಪ್ರಾಮುಖ್ಯತೆಯನ್ನು ಕಂಡ ಮಾರ್ಕ್ಸ್‌ರಿಗೆ 'ಬಂಡವಾಳಶಾಹಿ ಸಾಮಾಜಿಕ ಪದ್ಧತಿ' ಬೆಳೆದು ಬದಲಾಗುವ ಮೂಲ ನಿಯಮಗಳನ್ನು ತಡಮಾಡದೆ ಜಗಜ್ಜಾಹಿರ ಗೊಳಿಸುವ ಅವಶ್ಯಕತೆಬಿದ್ದುದರಿಂದಲೋ–ಮಾರ್ಕ್ಸ್‌ರು ಎಲ್ಲ ಕ್ಕಿಂತಲೂ ಆರಂಭದಲ್ಲಿ ಬಂಡವಾಳಶಾಹಿ ಉತ್ಪಾದನೆಯ ಪ್ರಕ್ರಿಯೆಯನ್ನು ವಿವರಿಸಿ ಅದು ಹೇಗೆ ಶೋಷಣೆ ನಡೆಸುತ್ತದೆ. ಎಂದೂ, ಈ ಶೋಷಣೆಯೇ 'ಅಧಿಕ ಮೌಲ್ಯ'ದ ಮೂಲ ವೆಂದು ಸಾರಿ ತಮ್ಮ ಚಾರಿತ್ರಿಕ ಶೋಧನೆಯನ್ನು ಪ್ರಕಟಪಡಿಸಿ ದರು. ಆ ಮೂಲಕ ಚಾರಿತ್ರಿಕವಾಗಿ 'ಸಾಂಪ್ರದಾಯಿಕ ಬಂಡ ವಾಳಶಾಹಿ ಅರ್ಥಶಾಸ್ತ್ರದ' ಬಿಡಿಸಲಾರದ ಒಗಟನ್ನು ಬಿಡಿಸಿ ಕೊಟ್ಟರು. ಮಾತ್ರವಲ್ಲ,ಜಗತ್ತಿನ ಕಾರ್ಮಿಕ ವರ್ಗಕ್ಕೆ ವರ್ಗ ರಹಿತ ಸಮಾಜಕ್ಕಾಗಿ ಹೋರಾಡಲು ವರ್ಗ ಸಮರ ನಡೆಸಲು ವೈಜ್ಞಾನಿಕವಾಗಿ ಮಾರ್ಗದರ್ಶನ ಮಾಡಿಕೊಟ್ಟರು.

ಆದರೆ, ಇದರಿಂದಾಗಿ ಅವರಿಗೆ ತಮ್ಮ ಕೃತಿಯನ್ನು ಸಂಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಮಾರ್ಕ್ಸ್‌ರ ಸ್ವತಃ ಸಂಪಾದಕೀಯದಲ್ಲಿ ಪ್ರಕಟವಾದ ಸಂಪುಟ 1ನೇ ಸಂಪುಟ ಮಾತ್ರ. ಉಳಿದ ಎಲ್ಲಾ ಸಂಪುಟಗಳ 'ತಯಾರಿ ನೋಟ್ಸ್' ಮಾತ್ರ ಬರೆಯಲು ಸಾಧ್ಯವಾಯಿತಷ್ಟೆ. ಅವರ ನಂತರ ಅವರ ಗೆಳೆಯ ಎಂಗೆಲ್ಸ್‌ರು ಅವರ 'ನೋಟ್ಸ್'ನ್ನು ಆಧಾರವಾಗಿಟ್ಟು ಕೊಂಡು 2ನೇ ಸಂಪುಟ ಮತ್ತು 3ನೇ ಸಂಪುಟಗಳನ್ನು ಬಹಳ ಪರಿಶ್ರಮದಿಂದ ತಯಾರಿಸಿ ಪ್ರಕಟಿಸಿದರು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ತಮ್ಮ ಜೀವನ ಪರ್ಯಂತ 'ಏಕ ರೀತಿಯಲ್ಲಿ ಚಿಂತಿ ಸುತ್ತಾ ಬಂದ ಆತ್ಮೀಯ ಗೆಳೆಯರಾಗಿದ್ದುದರಿಂದ(ಮಾರ್ಕ್ಸ್‌ರು ಯಾವ ಲೇಖನವನ್ನಾಗಲೀ ಎಂಗೆಲ್ಸ್‌ರ ಜೊತೆ ಚರ್ಚಿಸದೆ ಪ್ರಕಟಪಡಿಸುತ್ತಿರಲಿಲ್ಲ) ಮಾತ್ರ ಎರಡು ಸಂಪುಟಗಳನ್ನು ಸಂಪೂರ್ಣಗೊಳಿಸಲು ಸಾಧ್ಯವಾಯಿತು. ಎಂಗೆಲ್ಸ್‌ರ ಮರಣಾನಂತರ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಜರ್ಮನ್ ಮಾರ್ಕ್ಸ್‌ವಾದಿ ಕೌಟಸ್ಕೀಯವರು ಮಾರ್ಕ್ಸ್‌ರ ಪೂರ್ವದ ಅಧಿಕಮೌಲ್ಯದ ವಿವಿಧ ಸಿದ್ಧಾಂತಗಳ ಕುರಿತಾದ 4ನೇ ಸಂಪುಟದ ಮೂರು ಭಾಗಗಳನ್ನು ಪ್ರಕಟಿಸಿದರು.

'ಬಂಡವಾಳ' ಗ್ರಂಥಗಳಲ್ಲಿ ಕಾರ್ಲ್ ಮಾರ್ಕ್ಸ್‌ರ ಚಿಂತನಾ ವಿಧಾನವು **ಸೂತ್ರದಂತೆ** ಉದ್ದಕ್ಕೂ ಹೆಣೆಯಲ್ಪಟ್ಟಿದೆ. ಆದ ಕಾರಣ ಈ ಚಿಂತನಾ ವಿಧಾನದ ಕುರಿತು ಸಾಕಷ್ಟು ತಿಳುವಳಿಕೆ ಇಲ್ಲದ ಯಾವುದೇ ಓದುಗನಿಗೆ,ಅವನೆಷ್ಟು ಬುದ್ಧಿವಂತನಾದರೂ ಅವನೆಷ್ಟು ಪ್ರಯತ್ನಶೀಲನಾದರೂ 'ಬಂಡವಾಳ' ಗ್ರಂಥಗಳ ಅಭ್ಯಾಸವು ಕಠಿಣವಾಗುವುದರಲ್ಲಿ ಏನೂ ಸಂಶಯವಿಲ್ಲ. ಹೇಗೆ 'ಕೆಲ್‌ಕ್ಯುಲಸ್' ಎಂಬ 'ಗಣಿತ ಶಾಸ್ತ್ರದ ವಿಧಾನ'ದ ಸಹಾಯ ವಿಲ್ಲದೆ ನ್ಯೂಟನರ 'ಗುರುತ್ವಾಕರ್ಷಣಾ ತತ್ವ'ವನ್ನು ಕಂಡು ಹಿಡಿಯಲು ಮತ್ತು ಅದನ್ನು ಅರ್ಥಮಾಡಲು ಸಾಧ್ಯವಿಲ್ಲವೋ ಹಾಗೆಯೇ ಮಾರ್ಕ್ಸ್‌ರ ಬಂಡವಾಳ ಗ್ರಂಥಗಳು, ಇವರ ಅಭ್ಯಾ ಸಕ್ಕೆ 'ದ್ವಂದ್ವಾತ್ಮಕ ಚಿಂತನಾ ವಿಧಾನ'ದ ತಿಳುವಳಿಕೆ ಅತಿ ಆವಶ್ಯಕ.

ಸೂಕ್ಷ್ಮದಲ್ಲಿ ವಿವರಿಸುವುದಾದರೆ ದ್ವಂದ್ವಾತ್ಮಕ ಚಿಂತನಾ ವಿಧಾನದ ಸ್ವರೂಪವು ಹೀಗಿರುತ್ತದೆ : ಎಲ್ಲವೂ ಚಲನೆಯಲ್ಲಿರು ತ್ತವೆ. ಎಲ್ಲವೂ ಪ್ರಕ್ರಿಯೆಗಳು. ಪ್ರತಿಯೊಂದು ಪ್ರಕ್ರಿಯೆಯು ವಿರೋಧಾಂಶಗಳಿಂದಕೂಡಿರುತ್ತದೆ.ಪ್ರತಿಯೊಂದುಪ್ರಕ್ರಿಯೆಯು ಹುಟ್ಟು ಬೆಳವಣಿಗೆ ಮತ್ತು ಸಾವುಗಳನ್ನು ಹಾದು ಹೋಗುತ್ತವೆ. ಆರಂಭದಲ್ಲಿ ಯಾವುದೇ ಒಂದು ಪ್ರಶ್ನೆಯಲ್ಲಿ ವಿರೋಧಾಂಶ ಗಳು ತಾತ್ಕಾಲಿಕ ಐಕ್ಯತೆಯಲ್ಲಿರುತ್ತವೆ....ಕ್ರಮೇಣ ಈ ವಿರೋ ಧಾಂಶಗಳ ತಿಕ್ಕಾಟವು ಅಧಿಕಗೊಳ್ಳುತ್ತಾಹೋಗುತ್ತದೆ....ಇದೇ ಆ ಪ್ರಕ್ರಿಯೆಗಳ ಆ ಪ್ರಕ್ರಿಯೆಗಳ ಬೆಳವಣಿಗೆ....ತಿಕ್ಕಾಟವುತೀವ್ರ ಗೊಳ್ಳುತ್ತಾ ಕೊನೆಯ 'ಅವಸಾನ' ಘಟ್ಟವನ್ನು ಮುಟ್ಟುತ್ತದೆ. ಆಗ ವಿರೋಧಾಂಶಗಳು ಪರಸ್ಪರ ಹೊಯ್ದಾಟದ ಮೂಲಕ, ಒಂದು ಇನ್ನೊಂದನ್ನು ಒಳ ಸೇರುತ್ತಾ ಪ್ರತಿಭಟಿಸುತ್ತಾ, ಹಳೆಯ ಪ್ರಕ್ರಿಯೆಯ ಸ್ಥಾನದಲ್ಲಿ ಹೊಸ ಲಕ್ಷಣದಿಂದ ಕೂಡಿದ ಹೊಸ ಒಂದು ಪ್ರಕ್ರಿಯೆ ಉಂಟಾಗುವುದು....ಹೀಗೆ ಪ್ರಕ್ರಿಯೆ ಗಳು ನಡೆಯುತ್ತಾ ಹೋಗಿ, ಹಳೆಯದಿಂದ—ಹಳೆಯದ್ದು ನಾಶ

ವಾಗಿ, ಹೊಸತಂ , ಹುಟ್ಟುತ್ತದೆ. ಹೀಗೆ ಪರಿಸ್ಥಿತಿಯು ಹೊಸ–ಹೊಸತು, ನವನವೀನವಾಗಿ ಬೆಳೆಯುತ್ತಾ ಬದಲಾಗುತ್ತಾ ಹೋಗುತ್ತದೆ.

ಈ ಚಿಂತನಾ ವಿಧಾನವನ್ನು ಕಾರ್ಲ್ಸ್‌ಮಾರ್ಕ್ಸ್‌ರು ಅತ್ಯಂತ ಚಾಕಚಕ್ಯತೆಯಿಂದ, ಪ್ರಾವೀಣ್ಯತೆಯಿಂದ ಉಪಯೋಗಿಸುತ್ತಾ ತಮ್ಮ 'ಸಿದ್ಧಾಂತ'ಗಳನ್ನು ರೂಪಿಸಿದರು....ತಮ್ಮ ಸಾಮಾಜಿಕ ವಿಜ್ಞಾನದ ಮೂಲ ಸೂತ್ರಗಳನ್ನು ಶೋಧಿಸಿದರು....ಇವಕ್ಕೆಲ್ಲಾ 'ಬಂಡವಾಳ' ಗ್ರಂಥವು ಆಗರ.

ಗ್ರಂಥಗಳ ಸ್ಥೂಲ ಪರಿಚಯ

1ನೇ ಸಂಪುಟದಲ್ಲಿ ನೀವು ಬಂಡವಾಳಶಾಹಿ ಸಮಾಜ ವ್ಯವಸ್ಥೆಯಲ್ಲಿ 'ಸರಕುಗಳ ಉತ್ಪತ್ತಿ ಕಾರ್ಖಾನೆಗಳಲ್ಲಿ ಹೇಗೆ ಯಾರಿಂದ ಯಾವ ಉತ್ಪಾದನಾ ಸಂಬಂಧದ ಆಧಾರದಲ್ಲಿ ನಡೆಯುತ್ತದೆ' ಎಂಬ ವಿವರಣೆಯನ್ನು ಓದುತ್ತೀರಿ. ಬಂಡವಾಳಶಾಹಿ ಸಮಾಜ ವ್ಯವಸ್ಥೆಯ ಮೂಲ ಕಣ (Cell) ಸರಕು. ಅಸಂಖ್ಯಾತ ಸರಕುಗಳ ಉತ್ಪತ್ತಿಯೇ ಬಂಡವಾಳಶಾಹಿಗಳ ಜೀವನೋದ್ದೇಶ. ಸರಕುಗಳೆಂದರೆ 'ಮಾರಾಟದ ವಸ್ತುಗಳು'. ಮಾರಾಟ ವಸ್ತುಗಳು ಅಂದರೆ ಸರಕುಗಳು ಕಚ್ಚಾ ಸ್ಥಿತಿಯಲ್ಲಿರುವ ವಸ್ತುಗಳಿಂದ 'ಉತ್ಪತ್ತಿ'ಯೆಂಬ ಪ್ರಕ್ರಿಯೆಗೆ ಒಳಗಾಗಿ ಸಿದ್ಧವಸ್ತುಗಳಾಗುತ್ತವೆ. ಸಿದ್ಧವಸ್ತುಗಳು ಅನಂತರ ಫ್ಯಾಕ್ಟರಿಗಳ ಹೊರಗೆ, ಮಾರಾಟವಾಗಿ ಹೋಗುತ್ತವೆ. ಆಮೇಲೆ ಹಾಗೆ ಮಾರಾಟವಾಗಿ ಹೋದ ವಸ್ತುಗಳು ಬಂಡವಾಳಶಾಹಿ ಸಮಾಜದಲ್ಲಿ 'ವಿತರಣೆ'ಯಾಗುತ್ತಾ ಹೋಗುತ್ತವೆ.

ಆದಕಾರಣ ಮೊದಲು ಸರಕುಗಳು ತಯಾರಾಗಬೇಕು. ಸರಕುಗಳ ತಯಾರಿ ಫ್ಯಾಕ್ಟರಿಗಳಲ್ಲಿ ಸರ್ವೇಸಾಮಾನ್ಯವಾಗಿ ಬಂಡವಾಳಶಾಹಿ ಸಮಾಜದಲ್ಲಿ ನಡೆಯುತ್ತವೆ. ಈ ಸರಕುಗಳ ತಯಾರಿಯಾಗಬೇಕಾದರೆ — ಬಂಡವಾಳಗಾರರು ಮೊದಲು ತಮ್ಮ ತಮ್ಮ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾದ 'ಸ್ಥಳ'ವನ್ನು ಹುಡುಕಿ ಕ್ರಯಕ್ಕೆ (ಅಥವಾ ಬಾಡಿಗೆಗೆ ಅಥವಾ ಲೀಸಿಗೆ) ಪಡೆಯಬೇಕು. ಅಲ್ಲಿ ಯೋಗ್ಯವಾದ ಫ್ಯಾಕ್ಟರಿ ಬಿಲ್ಡಿಂಗ್‌ಗಳನ್ನು ಕಟ್ಟಿಸಬೇಕು. ಅಂತಹ ಫ್ಯಾಕ್ಟರಿ ಕಟ್ಟಡಗಳಲ್ಲಿ ಕೈಗಾರಿಕೆಗನುಸಾರವಾಗಿ 'ಯಂತ್ರೋಪಕರಣ'ಗಳನ್ನು ಪಡೆದು ಸ್ಥಾಪಿಸಬೇಕು. ಬೇಕಾದ ಕಚ್ಚಾ ಮಾಲುಗಳನ್ನು ತರಿಸಿ ದಾಸ್ತಾನು ಮಾಡಬೇಕು. ಕೂಲಿ ಮತ್ತಿತರ ಅನುಕೂಲತೆಗಳನ್ನು ಕೊಟ್ಟು ಕುಶಲ ಕಾರ್ಮಿಕರನ್ನು ನೇಮಿಸಬೇಕು. ಇವನ್ನೆಲ್ಲಾ ತನ್ನ 'ಬಂಡವಾಳ'ದಿಂದ ಒಟ್ಟುಕೂಡಿಸುವವನೇ ಬಂಡವಾಳಗಾರ. ಕೂಲಿ ಮತ್ತಿತರ ಸವಲತ್ತಿಗಾಗಿ 'ಕಂಟ್ರಾಕ್ಟ್ ಮಾಡಿ' ಕಚ್ಚಾ ಮಾಲುಗಳನ್ನು ಸಿದ್ಧವಸ್ತುಗಳಾಗಿ—ಸರಕುಗಳಾಗಿ – ತಯಾರಿ ಮಾಡುವವರೇ ಕೂಲಿಗಾರರು.

ಈಗ 'ಬಂಡವಾಳ'ಗಾರನಿಗೆ ಹಾಕಿದ ಹಣಕ್ಕಿಂತ ಅಧಿಕ ಹಣ ಸಿದ್ಧ ವಸ್ತುಗಳ ಮಾರಾಟದಿಂದ ದೊರೆಯಬೇಕಲ್ಲವೇ ? ಹಾಗೆ ಅಧಿಕ ಹಣ ದೊರೆಯದಿದ್ದರೆ ಅವನು ಬಂಡವಾಳಗಾರನಾಗಿ ತನ್ನ 'ವ್ಯವಹಾರ' ನಡೆಸಲು ಸಾಧ್ಯವೇ ? ಈ ಅಧಿಕ ಹಣವನ್ನು ಅವನು ಈ ಉತ್ಪತ್ತಿಯ ಪ್ರಕ್ರಿಯೆಯ ಮೂಲಕ–ಕೈಗಾರಿಕಾ ಪ್ರಕ್ರಿಯೆ—ಪಡೆಯುತ್ತಾನೆಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಉತ್ಪಾದನಾ ಪ್ರಕ್ರಿಯೆಯಲ್ಲಿ ಎಲ್ಲಿಂದ ಅಧಿಕ ಮೌಲ್ಯವನ್ನು ಬಂಡವಾಳಗಾರನು ಪಡೆಯುತ್ತಾನೆ ಎಂಬುದೇ ಮಾರ್ಕ್ಸ್‌ರ ಶೋಧನೆ ಹಾಗೂ ಬಂಡವಾಳ ಅರ್ಥಶಾಸ್ತ್ರದ ಒಗಟಿನ 'ಸರಳ ಬಿಡಿಸುವಿಕೆ'.

...ಕೈಗಾರಿಕಾ ಪ್ರಕ್ರಿಯೆಯಲ್ಲಿ ಅಧಿಕ ಮೌಲ್ಯವನ್ನು ಬಂಡವಾಳಗಾರನಿಗೆ ಒದಗಿಸಿಕೊಡುವವನೇ ಕೂಲಿಗಾರರು ಮಾರಾಟ ಮಾಡುವ 'ಶ್ರಮಶಕ್ತಿ'ಯಾಗಿದೆ.

ಶ್ರಮಶಕ್ತಿಯ ಹಣದ ಮೌಲ್ಯವೇ ಕೂಲಿ.

ಕಡಿಮೆ ಕೂಲಿ ಕೊಟ್ಟು ಹೆಚ್ಚು 'ಶ್ರಮ' ಕೂಲಿಗಾರನಿಂದ 'ತೆಗೆಯುವುದೇ' ಕೂಲಿಗಾರರ ಶೋಷಣೆ, ಆದರೆ ಬಂಡವಾಳಗಾರನ 'ಅಧಿಕ ಮೌಲ್ಯದ ಮೂಲ'.

ಸ್ವಾಭಾವಿಕವಾಗಿ ಬಂಡವಾಳಗಾರರು ಇದನ್ನು ಬಚ್ಚಿಡಲು . ನೋಡುವರು, ಸ್ವಾಭಾವಿಕವಾಗಿಯೇ ಕಾರ್ಮಿಕ ವರ್ಗ ಪ್ರತಿನಿಧಿ ಕಾರ್ಲ್‌ಮಾರ್ಕ್ಸ್‌ರು ಇದನ್ನು ಶೋಧಿಸಿ ಗುಟ್ಟನ್ನು ಹೊರಗೆಡಹಿಸಿದರು.

2ನೇ ಸಂಪುಟದಲ್ಲಿ ಸರಕುಗಳ ಮಾರಾಟ–ವಿತರಣೆ ಹೇಗೆ ನಡೆಯುತ್ತದೆ ಬಂಡವಾಳಶಾಹಿ ಸಮಾಜದಲ್ಲಿ ಎಂಬುದರ ಕುರಿತು ವಿವರಗಳಿವೆ. ಕೈಗಾರಿಕಾ ಉತ್ಪಾದನೆಗೆ-ಕೈಗಾರಿಕಾ ಬಂಡವಾಳಗಾರರಿಗೆ - ಕಚ್ಚಾ ಮಾಲುಗಳನ್ನು ಒದಗಿಸಬೇಕು, ಯಂತ್ರೋಪಕರಣಗಳನ್ನು ಒದಗಿಸಬೇಕು–ಯಾರು ? ವ್ಯಾಪಾರಸ್ಥರು, ಅಲ್ಲದೆ, ಕೈಗಾರಿಕಾ ಬಂಡವಾಳಗಾರರು ಉತ್ಪತ್ತಿ ಮಾಡಿದ ಸರಕುಗಳನ್ನು ಅವರಿಂದ ಕ್ರಯಕ್ಕೆ ಪಡೆದು ಮಾರಾಟ ಮಾಡಬೇಕು. ಕೈಗಾರಿಕಾ ಬಂಡವಾಳಗಾರರಿಗೂ 'ಲಾಭ' ಸಿಗುವಂತಾಗಬೇಕು ; ವ್ಯಾಪಾರಸ್ಥರು ಆ ಸರಕುಗಳನ್ನು ಮಾರಿ ತಾವೂ ಲಾಭ ಮಾಡಿಕೊಳ್ಳಬೇಕು.

ಈ ವ್ಯಾಪಾರಸ್ಥರಿಗೆ 'ಬಂಡವಾಳ' ಬೇಡವೆ? ವ್ಯಾಪಾರಿ ಬಂಡವಾಳದಿಂದ ವ್ಯಾಪಾರಸ್ಥರು ಕಚ್ಚಾ ಮಾಲುಗಳನ್ನು

ತಾವು ಸ್ವತಃ ಪಡೆದು, ದಾಸ್ತಾನುಮಾಡಿ, ಕೈಗಾರಿಕಾ ಬಂಡವಾಳಗಾರರಿಗೆ, ಕ್ರಯಕ್ಕೆ ಮಾರಾಟಮಾಡುತ್ತಾರೆ. ಕೈಗಾರಿಕಾ ಬಂಡವಾಳಗಾರರಿಗೆ ಸಿಕ್ಕ ವಸ್ತುಗಳನ್ನು ತಮ್ಮ ಬಂಡವಾಳದಿಂದ ಕ್ರಯಕೊಟ್ಟು ಪಡೆದು ದೇಶ ವಿದೇಶಗಳ ಮಾರ್ಕೆಟುಗಳಲ್ಲಿ ಮಾರಾಟಮಾಡುತ್ತಾರೆ.

ಸರಕುಗಳ ವಿತರಣಾ ಪ್ರಪಂಚವನ್ನು ಮಾರ್ಕ್ಸ್‌ರು ವಿವರಿಸುತ್ತಾರೆ. ವ್ಯಾಪಾರಸ್ಥರು ಹೇಗೆ ಲಾಭ ಪಡೆಯುತ್ತಾರೆ ಎಂಬುದನ್ನು ಅವರು ವಿವರಿಸುತ್ತಾರೆ... ಕೈಗಾರಿಕಾ ಬಂಡವಾಳಗಾರರು 'ಉತ್ಪತ್ತಿ ಮಾಡಿದ ಅಧಿಕ ಮೌಲ್ಯ'ದ ಒಂದು ಭಾಗವನ್ನು ಅವರು ತಮ್ಮ ಸಿದ್ಧವಸ್ತುಗಳ ಕ್ಷಿಪ್ರ ಮಾರಾಟಕ್ಕಾಗಿ, ತಮ್ಮ ಕೈಗಾರಿಕಾ ಬಂಡವಾಳವು ಸಂಸೂತ್ರವಾಗಿ ಎಡೆಬಿಡದೆ ಚಲಿಸುವಂತೆ ಮಾಡುವುದಕ್ಕಾಗಿ, ವ್ಯಾಪಾರಿ ಬಂಡವಾಳಗಾರರೊಡನೆ 'ಪಾಲು ಮಾಡಿಕೊಳ್ಳುತ್ತಾರೆ' ಎಂಬುದೇ ಮಾರ್ಕ್ಸ್‌ರ ಸೂಕ್ಷ್ಮ ವಿವರಣೆ.

ವ್ಯಾಪಾರಿ ಬಂಡವಾಳಗಾರರ ಬಂಡವಾಳವು ತಮ್ಮ ಸ್ವಂತದ್ದಾಗಿರಬಹುದು ಅಥವಾ ಇತರರಿಗೆ ಬಡ್ಡಿಕೊಟ್ಟು ಪಡೆದ ಹಣದ ಮೊಬಲಾಗಿರಬಹುದು.

3ನೇ ಸಂಪುಟದಲ್ಲಿ ಇಡೀ ಬಂಡವಾಳಶಾಹಿ ಸಮಾಜ ವ್ಯವಸ್ಥೆಯಲ್ಲಿ ಈ ಉತ್ಪಾದನಾ ಕ್ರಿಯೆ ಮತ್ತು ವಿತರಣಾ ಕ್ರಿಯೆ ಹೇಗೆ ಒಂದಕ್ಕೊಂದು ಹೊಂದಿಕೊಂಡು, ಒಂದರ ಮೇಲೊಂದು ಪರಿಣಾಮ ಬೀರುತ್ತಾ ನಡೆಯುತ್ತದೆ ಎಂಬುದನ್ನು ಮಾರ್ಕ್ಸ್ ವಿವರಿಸಿದರು ಮಾತ್ರವಲ್ಲ, ಎಲ್ಲಾ ಬಂಡವಾಳಗಾರರು ಬಂಡವಾಳಶಾಹಿ ಸಮಾಜದಲ್ಲಿ ಒಟ್ಟಿನಲ್ಲಿ ಪರಿಗಣಿಸಿದಾಗ ಸಮಾನವಾಗಿ 'ಅಧಿಕ ಮೌಲ್ಯ'ದ ಪಾಲುಗಾರರಾಗಿದ್ದಾರೆ ಎಂಬುದನ್ನೂ ಅವರು ವಿವರಿಸಿದರು.

ಹೀಗೆ ಈ ಮೂಲ ಸಂಪುಟಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಒಟ್ಟಾಗಿಯೂ ಪರಿಗಣಿಸಿದಾಗ, ಉತ್ಪತ್ತಿ ಮತ್ತು ವಿತರಣಾ ಪ್ರಕ್ರಿಯೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಗಣಿಸಿದಾಗ, ಬಂಡವಾಳಶಾಹಿ ಸಮಾಜದ ವ್ಯವಹಾರಗಳನ್ನು ಮೇಲ್ನೋಟದಲ್ಲಿಯೂ, ಎಲ್ಲ ಪದರುಗಳಲ್ಲೂ ನೋಡಿದಲ್ಲಿ—ಬಂಡವಾಳಶಾಹಿವರ್ಗ ಸಮಾಜದಲ್ಲಿ ಕಾರ್ಮಿಕರ ಶೋಷಣೆಯಿಂದ 'ಅಧಿಕ ಮೌಲ್ಯ'ವನ್ನು ಅಧಿಕಾಧಿಕವಾಗಿ ಬಂಡವಾಳಶಾಹಿಗಳು ಪ್ರಯತ್ನಿಸುತ್ತಾ ಪಾಲು ಮಾಡುತ್ತಾ ಪೈಪೋಟಿ ಮಾಡುತ್ತಾ ಕೊನೆಗೆ ಆರಂಭದ ಬಂಡವಾಳಶಾಹಿ ಸಮಾಜ ವ್ಯವಸ್ಥೆಯ ಪ್ರಭಾವ ಲಕ್ಷಣವೆಂದೆನಿಸಲ್ಪಟ್ಟ 'ಪೈಪೋಟಿ'ಯ ಸ್ಥಾನದಲ್ಲಿ ಪ್ರಬುದ್ಧವಾಗಿ ಬೆಳೆದ ಬಂಡವಾಳಶಾಹಿ ಸಮಾಜದ 'ಏಕಸ್ವಾಮ್ಯ' ಏರ್ಪಡುವುದೆಂಬುದನ್ನು ಕಾಣಬಹುದು.

ನೀವು ಕಾರ್ಮಿಕನ ಸ್ಥಾನದಲ್ಲಿ ಇದ್ದು ಬಂಡವಾಳಶಾಹಿ ಸಮಾಜ ಪದ್ಧತಿಯನ್ನು ಕಾಣಲು ಪ್ರಯತ್ನಿಸಿದರೆ, ಮಾರ್ಕ್ಸ್‌ರ ಬಂಡವಾಳ ಗ್ರಂಥಗಳ ವಿವರಗಳನ್ನು ಸುಲಭವಾಗಿ ಗ್ರಹಿಸಬಹುದು.

ದ್ವಂದ್ವಾತ್ಮಕ ವಿಧಾನ ಮತ್ತು ಕಾರ್ಮಿಕವರ್ಗದ ವಿಶ್ವದೃಷ್ಟಿ ಇವೆರಡರ ಸಹಾಯದಿಂದ ಕಾರ್ಲ್‌ಮಾರ್ಕ್ಸ್‌ರ ಬಂಡವಾಳ ಗ್ರಂಥವನ್ನು ಅಭ್ಯಾಸಿಸಲು ಸುಲಭ ಸಾಧ್ಯವಾಗುವುದು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲ 'ಅಧಿಕ ಮೌಲ್ಯ'ಗಳ ಮೂಲವು ಬಂಡವಾಳಶಾಹಿ ಕೈಗಾರಿಕಾ ಉತ್ಪಾದನಾ ಪ್ರಕ್ರಿಯೆಯಾಗಿದೆ ಎಂದು ತಿಳಿಯುವುದು 'ಬಂಡವಾಳದ' ಅಭ್ಯಾಸಕ್ಕೆ ಸುಲಭ ಸಾಧ್ಯವಾಗುವುದು.

★

ಮಾರ್ಕ್ಸ್‌ನ ವಿಚಾರಧಾರೆ ವಿಶ್ವವನ್ನೇ ಬದಲಾಯಿಸಿತು

ಕಾ. ಬಿ. ಟಿ. ರಣದಿವೆ

ಮಾರ್ಕ್ಸ್ ನಿಧನಹೊಂದಿ ಒಂದು ಶತಮಾನ ಕಳೆದ ನಂತರ ಮಾರ್ಕ್ಸ್ ಹಾಗೂ ಎಂಗೆಲ್ಸ್‌ರ ಪಾಠಗಳು—ನಂತರ ಲೆನಿನ್ನರಿಂದ ಶ್ರೀಮಂತಗೊಳಿಸಲ್ಪಟ್ಟು—ತಮ್ಮ ಕ್ರಾಂತಿಕಾರಿ ಜಗತ್ಪರಿವರ್ತನೆಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪ್ರದರ್ಶಿಸಿವೆ. ನಿಜವಾಗಿಯೂ, ಕಾರ್ಲ್ ಮಾರ್ಕ್ಸ್‌ರ ಬಗ್ಗೆ ಹೇಳುವುದಾದರೆ ಜಗತ್ತಿನ ಚಿತ್ರವನ್ನು ಬದಲಿಸಲು ಹಾಗೂ ಜನತೆ ತಾವು ಯಾವುದಕ್ಕಾಗಿ ಹೋರಾಡುತ್ತಿದ್ದೇವೆಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಮತ್ತ್ಯಾರ ವಿಚಾರಧಾರೆಯು ಅಷ್ಟೊಂದು ಕೆಲಸ ಮಾಡಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು.

"ಮಾರ್ಕ್ಸ್‌ನ ವಿಚಾರಧಾರೆ ಜಗದ್ವ್ಯಾಪಿ, ಏಕೆಂದರೆ ಅದು ಸತ್ಯವಾಗಿದೆ" ಎಂದು ಲೆನಿನ್ ನುಡಿದರು. ಅದರ ಸಾರ್ವತ್ರಿಕ ಹಾಗೂ ಜಗದ್ವ್ಯಾಪಿಸ್ವರೂಪವನ್ನು ಸಿದ್ಧಮಾಡಲು ಬೂರ್ಜ್ವಾ ವರ್ಗ ಹಾಗೂ ಅದರ ವಿಚಾರವಂತರ ಘನ ವಿರೋಧವನ್ನೆದುರಿಸಬೇಕಾಯಿತು. ಮಾರ್ಕ್ಸ್ ವಾದ ವಿರೋಧಿ ಈ ಪ್ರಚಾರ ಕೂಡ ಬೂರ್ಜ್ವಾಸಮಾಜ ಎದುರಿಸುತ್ತಿದ್ದ ವರ್ಗ ಹೋರಾಟದ ಒಂದು ಭಾಗವೇ ಆಗಿತ್ತು. ಅನೇಕ ಬಾರಿ ಬಂದೂಕಿನಿಂದ ಬ್ಯಾರಿಕೇಡ ಹಿಂದೆ ನೂರಾರು ಕಾರ್ಮಿಕರನ್ನು ಗುಂಡಿಕ್ಕಿ ಕೊಂದು ಆಳುವ ವರ್ಗವು ಈ ವರ್ಗ ಹೋರಾಟ ನಡೆಸಿತು. ಪ್ಯಾರಿಸ್ ಕಮ್ಯೂನಿನಲ್ಲಿಯ, 1905ರ ವಿಫಲ ರಶಿಯನ್ ಕ್ರಾಂತಿಯಲ್ಲಿಯ ಹಾಗೂ ಇತರ ಅನೇಕ ಬಂಡುಗಳಲ್ಲಿಯ ನರಮೇಧವೇ ಇದಕ್ಕೆ ಸಾಕ್ಷಿ. 19ನೇ ಶತಮಾನದ ಕೊನೆಯಲ್ಲಿ ತುಲನಾತ್ಮಕವಾಗಿ ಶಾಂತವಾದ ಕಾಲಖಂಡದಲ್ಲಿ ಬೂರ್ಜ್ವಾ ವಿಚಾರಧಾರೆಗೆ ಹೊಸ ಜೀವ ಸಿಕ್ಕಂತಾಯಿತು. ಇದಕ್ಕೆ ಬಲಿ ಬಿದ್ದವರು ಯುರೋಪಿನ ಸೋಶಿಯಲ್ ಡೆಮೋಕ್ರಟಿಕ್ ಪಾರ್ಟಿಗಳ ನಾಯಕರು. ಇವರು ಮಾರ್ಕ್ಸ್‌ನ ತತ್ವಗಳು ಕಾಲಬಾಹ್ಯವಾಗಿವೆ ಎಂದು ಸಾರಿ ಅವನನ್ನು ಒಬ್ಬ ಸಂಸದೀಯ ಉದಾರವಾದಿಯಾಗಿ ಮಾರ್ಪಡಿಸಲು ಪ್ರಯತ್ನಿಸಿದರು. ಇದು ಪ್ರಥಮ ಮಹಾಯುದ್ಧದ ಕಾಲದಲ್ಲಿ ತುಂಬ ಹಾನಿಕಾರಕ ಪರಿಣಾಮಗಳಿಗೆ ಹಾಗೂ ದ್ರೋಹಕ್ಕೆ ಎಡೆಮಾಡಿಕೊಟ್ಟಿತು.

ಇದು ಮಾರ್ಕ್ಸ್‌ವಾದವನ್ನು ರಕ್ಷಿಸಲು ತೀವ್ರ ಆಂತರಿಕ ಹೋರಾಟಗಳಿಗೂ ಎಡೆಮಾಡಿಕೊಟ್ಟಿತು. ಈ ಹೋರಾಟ ಲೆನಿನ್ನನ ನಾಯಕತ್ವದಲ್ಲಿ ನಡೆದು ಯಶಸ್ವಿ ಅಕ್ಟೋಬರ ಕ್ರಾಂತಿ ಹಾಗೂ ಕಾರ್ಮಿಕ ವರ್ಗದ ಸರ್ವಾಧಿಕಾರತ್ವದಲ್ಲಿ ಕೊನೆಗೊಂಡಿತು. ಕಾರ್ಮಿಕ ವರ್ಗದ ಸರ್ವಾಧಿಕಾರತ್ವವು ಕಮ್ಯುನಿಸಂಗೆ ತಲುಪುವ ಸಂಕ್ರಮಣ ಕಾಲದಲ್ಲಿ ಅನಿವಾರ್ಯ ಎಂದು ಮಾರ್ಕ್ಸ್ ನಂಬಿದ್ದರು.

ಮಾರ್ಕ್ಸ್‌ನ ಹಾಗೂ ನಂತರ ಲೆನಿನ್ನನ ತತ್ವಗಳಿಂದ ಶ್ರೀಮಂತಗೊಂಡ, ವಿಚಾರಧಾರೆಯ ಈ ಮಹಾನ್ ಯಶಸ್ಸು ಜಗತ್ತಿನ ಆರನೇ ಒಂದು ಭಾಗವನ್ನು ಬಂಡವಾಳಶಾಹಿಯ ವರ್ತುಳದಿಂದ ಹೊರತಂದಿತು. ಇದು ಯೂರೋಪ್ ಹಾಗೂ ಅಮೇರಿಕಗಳ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ವಲಯಗಳಲ್ಲಿ ಚಳಿಯೆಬ್ಬಿಸದಿರಲಿಲ್ಲ. ಅವರು ತಮ್ಮ ಕಣ್ಣೆದುರಿಗೇ ಶೋಷಣೆ ಹಾಗೂ ವಸಾಹತುಶಾಹಿ ವರ್ಚಸ್ಸಿನ ಜಗತ್ತು ಕುಸಿದು ಬೀಳುತ್ತಿರುವುದನ್ನು ಕಂಡರು. ಅಂತೆಯೇ ಸೈದ್ಧಾಂತಿಕ ಯುದ್ಧದ ನಂತರ ಅವರು

ಯಾದವೀ ಯುದ್ಧ ಹಾಗೂ ಹಸ್ತಕ್ಷೇಪಗಳನ್ನು ನಡೆಸಿದರಲ್ಲದೇ ಸೋವಿಯೆಟ್ ಯೂನಿಯನ್ನನ್ನು ಬಹಿಷ್ಕರಿಸುವ ಹಾಗೂ ದೂರವಿಡುವ ಧೋರಣೆ ಪ್ರಾರಂಭಿಸಿದರು.

ಆದರೆ ಅವರ ಶ್ರಮವೆಲ್ಲ ವ್ಯರ್ಥವಾಯಿತು. ಇತಿಹಾಸದ ಗಡಿಯಾರವನ್ನು ಹಿಂದೆ ತಿರುವಲು ಸಾಧ್ಯವಿರಲಿಲ್ಲ. ಸಾಮ್ರಾಜ್ಯಶಾಹಿ ಸಿದ್ಧಾಂತ ಹಾಗೂ ಹಸ್ತಕ್ಷೇಪ ಎರಡೂ ಸೋಲುಂಡವು. ಮಾರ್ಕ್ಸ್‌ವಾದ–ಲೆನಿನ್ ವಾದದ ಪತಾಕೆಯಡಿಯಲ್ಲಿ ಸೋವಿಯೆಟ್ ಯೂನಿಯನ್ ವೇಗದ ಮುನ್ನಡೆ ಸಾಧಿಸತೊಡಗಿತು. ಕೆಲ ಸಮಯ ಬಂದೂಕಿನ ಯುದ್ಧ ನಿಂತು ಕೊಂಡಿತಾದರೂ ವಿಚಾರಧಾರಾತ್ಮಕ ಯುದ್ಧವು ಹೆಚ್ಚಿನ ತೀವ್ರತೆಯಿಂದ ಮತ್ತೆ ಶುರುವಾಯಿತು.

ಈಗ ಮಾರ್ಕ್ಸ್‌ವಾದದ ನೇರವಾದ ಸಾಧನೆಗಳ ಮೇಲೆ ದಾಳಿ ನಡೆಯಿತು. ಕಾರ್ಮಿಕರ ರಾಜ್ಯವನ್ನು ವೈಯಕ್ತಿಕ ಸ್ವಾತಂತ್ರ್ಯವಿಲ್ಲದ ದಬ್ಬಾಳಿಕೆಯ ಸರ್ವಾಧಿಕಾರತ್ವ ಎಂದು ಹಳಿಯಲಾಯಿತು. ತದ್ವಿರುದ್ಧವಾಗಿ ವಿರೋಧಿ ಪಕ್ಷಗಳನ್ನು ಹಾಗೂ ಔಪಚಾರಿಕ ಹಕ್ಕುಗಳನ್ನು ಹೊಂದಿದ ಬೂರ್ಜ್ವಾ ಪ್ರಜಾಪ್ರಭುತ್ವವನ್ನು ನಿಜವಾದ ಪ್ರಜಾಪ್ರಭುತ್ವ ಎಂದು ಹೊಗಳಲಾಯಿತು.

ರಶಿಯನ್ ಕ್ರಾಂತಿಯು ಮಾರ್ಕ್ಸ್‌ನ ತತ್ವಗಳ ಉಲ್ಲಂಘನೆಯೆಂದು ಹೇಳಲಾಯಿತು. ಏಕೆಂದರೆ ಸಮಾಜವಾದಿ ಕ್ರಾಂತಿಯು ಮೊದಲು ವಿಕಸಿತ ಬಂಡವಾಳಶಾಹಿ ದೇಶದಲ್ಲೇ ಆಗಬೇಕೆಂದು ಮಾರ್ಕ್ಸ್ ಹೇಳಿದ್ದನಂತೆ. ಅಕ್ಟೋಬರ ಕ್ರಾಂತಿಯ ಸಮಾಜವಾದಿ ಸ್ವರೂಪವನ್ನು ಅಲ್ಲಗಳೆಯಲಾಯಿತು. ಮಾರುಕಟ್ಟೆಯ, ಅರ್ಥರಚನೆಯನ್ನು ದೂರಗೊಳಿಸಿ ಅದರ ಸ್ಥಾನದಲ್ಲಿ ಯೋಜನಾಬದ್ಧ ಅರ್ಥವ್ಯವಸ್ಥೆಯನ್ನು ತಂದದನ್ನು ತೆಗಳಲಾಯಿತು ಹಾಗೂ ಅದರ ಕುಸಿತ ಭವಿಷ್ಯವನ್ನೂ ಸಾರಲಾಯಿತು.

ಮೊದಲಿನ ದಿನಗಳಂತೆಯೇ, ಮಾರ್ಕ್ಸ್‌ವಾದದ ಬಗೆಗೆ ತಪ್ಪು ತಿಳುವಳಿಕೆ ಹೊಂದಿದ ಕಮ್ಯುನಿಸ್ಟ್ ಚಳುವಳಿಯ ಒಳಗಿನವರಾದ ಕೆಲವರಿಂದಲೇ, ಬೂರ್ಜ್ವಾ ವರ್ಗಗಳ ಈ ದಾಳಿಗಳಿಗೆ ಸಹಾಯ ಹಾಗೂ ಪ್ರಚೋದನೆ ದೊರೆಯಿತು. ಟ್ರಾಟ್‌ಸ್ಕಿ ಹಾಗೂ ಆತನ ಸಂಗಡಿಗರು ಸಮಾಜವಾದವನ್ನು ಒಂದು ದೇಶದಲ್ಲಿ ಮಾತ್ರ ಕಟ್ಟಲು ಸಾಧ್ಯವಿಲ್ಲೆಂದೂ, ಸೋವಿಯೆಟ್ ಯೂನಿಯನ್ನಿನಲ್ಲಿದ್ದದ್ದು ಸಮಾಜವಾದವಲ್ಲವೆಂದೂ ಸತತವಾಗಿ ಬೋಧಿಸಿದರು.

ಈ ಸಮಯದಲ್ಲಿ ಸೋವಿಯೆಟ್ ವಿರೋಧ, ಮಾರ್ಕ್ಸ್‌ವಾದ ಸೃಷ್ಟಿಯಾದ ಸಮಾಜವಾದದ ಸಾಧನೆಗಳ ತುಚ್ಛೀಕರಣ ಇವುಗಳನ್ನು ಕಾರ್ಮಿಕ ಚಳುವಳಿಯಲ್ಲಿ ಬಿತ್ತಲಾಯಿತು. ಈ ರೀತಿ ಮಾಡುವವರು ತಮ್ಮ ತುಚ್ಛೀಕರಣ ಕಾರ್ಯದೊಂದಿಗೇ ಮಾರ್ಕ್ಸ್‌ವಾದದ ಬಗ್ಗೆ ಬಾಯಿ ಮಾತಿನ ಸಹಾನುಭೂತಿಯನ್ನು ಜೋಡಿಸಿದರು, ತಾವು ರಶಿಯನ್ ಕ್ರಾಂತಿಗಿಂತ ಹೆಚ್ಚು ಎಡವಾದಿಗಳೆಂಬ ಸೋಗು ಹಾಕಿದರು. ಆದರೆ ಇಷ್ಟು ಹೊತ್ತಿಗಾಗಲೇ ಮಾರ್ಕ್ಸ್‌ವಾದದ ಮೊದಲ ವಿಜಯದ ಸುತ್ತ ಸಂಪೂರ್ಣ ಕಮ್ಯುನಿಸ್ಟ ಚಳುವಳಿಯು ಏಕತ್ರಗೊಂಡಿತ್ತು.

ಇನ್ನೂ ಹೆಚ್ಚಿನ ವಿಜಯಗಳು

ಸೋವಿಯಟ್ ಯುನಿಯನ್ನಿನ ವೃದ್ಧಿಗೊಂಡ ಆರ್ಥಿಕ ಹಾಗೂ ಮಿಲಿಟರಿ ಶಕ್ತಿಯು ಇದು–ತಯಾರಾದದ್ದು ಪಂಚವಾರ್ಷಿಕ ಯೋಜನೆಗಳ ಯಶಸ್ಸು ಹಾಗೂ ಬಂಡವಾಳಶಾಹಿ ಸಮಾಜದಲ್ಲಿಯ ಮಹಾಬಿಕ್ಕಟ್ಟು ಇವುಗಳ ನಂತರ–ಮತ್ತೊಮ್ಮೆ ಈ ಸಮಾಜವಾದಿ ದೇಶದ ಮೇಲೆ ಸಶಸ್ತ್ರ ದಾಳಿಗೆ ಎಡೆಮಾಡಿಕೊಟ್ಟಿತು. ಸೋವಿಯೆಟ್ ಯುನಿಯನ್ನಿನ ವಿರುದ್ಧ ಹಿಟ್ಲರನ ಯುದ್ಧವು ಅವನೇ ಸಾರಿದಂತೆ ಕಮ್ಯುನಿಸಂ ವಿರುದ್ಧ ಯುದ್ಧವಾಗಿತ್ತು ಹಾಗೂ ಸಹಸ್ರಾವಧಿ ಟ್ಯಾಂಕುಗಳು, ವಿಮಾನಗಳು, ದಶಸಹಸ್ರಾವಧಿ ಬಂದೂಕುಗಳು ಹಾಗೂ ಲಕ್ಷಾವಧಿ ಸೈನಿಕರ ಬಲದಿಂದ ಕೈಕೊಳ್ಳಲ್ಪಟ್ಟಿತ್ತು. ಆ ಸಮಾಜವಾದಿ ದೇಶವು ತನ್ನ ಲಕ್ಷಾವಧಿ ಜನತೆಯನ್ನು ಯುದ್ಧದಲ್ಲಿ ಕಳೆದುಕೊಳ್ಳಬೇಕಾಯಿತು. ಹಾಗೂ ಅವರ್ಣನೀಯವಾದಷ್ಟು ವಿನಾಶವನ್ನು ಸಹಿಸಬೇಕಾಯಿತು. ಆದರೆ ಇತಿಹಾಸದ ಗಡಿಯಾರವನ್ನು ಹಿಂದಕ್ಕೆ ತಿರುಗಿಸಲು ಹೊರಟವರು ಮಣ್ಣು ಮುಕ್ಕಿದರು. ಮಾರ್ಕ್ಸ್‌ವಾದ–ಲೆನಿನವಾದದ ಪತಾಕೆಯನ್ನು ಪೂರ್ವಯುರೋಪಿನ ಹೊಸನಾಡುಗಳಲ್ಲಿ ಹಾರಿಸಲಾಯಿತು.

ಮಾರ್ಕ್ಸ್‌ವಾದ–ಲೆನಿನ್‌ವಾದದ ಕ್ರಾಂತಿಕಾರಿ ಶಕ್ತಿ ಇನ್ನೂ ಹೆಚ್ಚಿನ ಗತಿಯಿಂದ ಕೆಲಸ ಮಾಡತೊಡಗಿತು. ಇದರ ಪರಿಣಾಮವೇ ಮಹಾನ್ ಚೀನೀ ಕ್ರಾಂತಿ ಹಾಗೂ ಚೀನದ ಜನತಾ ಗಣರಾಜ್ಯದಉದಯ. ಈ ಹೊಸ ಸಮಾಜವಾದ ದೇಶದಉದಯವು ಜಗತ್ತಿನ ಮೂರನೇ ಒಂದು ಭಾಗವು ಸಮಾಜವಾದಿ ವರ್ತುಳದಲ್ಲಿ ಸೇರಿಕೊಂಡದ್ದನ್ನು ಜಾಹೀರುಪಡಿಸಿತು. ತನ್ನ ಉಗಮ ಕಾಲದಿಂದಲೂ ಚೀನದ ಕಮ್ಯುನಿಸ್ಟ್ ಪಕ್ಷವು ಮಾರ್ಕ್ಸ್‌ವಾದ–ಲೆನಿನ್‌ವಾದಕ್ಕೆ ನಿಷ್ಠಾವಂತನಾಗಿತ್ತು. ಪ್ರಜಾಪ್ರಭುತ್ವವಾದಿ ಕ್ರಾಂತಿಯಲ್ಲಿ ಕಾರ್ಮಿಕವರ್ಗದ ಅಗ್ರಸ್ಥಾನ, ಕಮ್ಯುನಿಸ್ಟ್ ಪಕ್ಷದ ಮುಂಚೂಣಿಯ ಪಾತ್ರ ಹಾಗೂ ಕಾರ್ಮಿಕ ವರ್ಗದ ಸರ್ವಾಧಿಕಾರತ್ವ ಈ ಲೆನಿನ್‌ವಾದಿ ತತ್ವಗಳಿಗೆ ಚೀನೀ ಕಮ್ಯುನಿಸ್ಟ್ ಪಕ್ಷವು ಕಟಿಬದ್ಧವಾಗಿತ್ತು.

ಮಹಾನ್ ಚೀನೀ ಕ್ರಾಂತಿಯ ನಂತರ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷದ ನಾಯಕತ್ವದಲ್ಲೇ ಕೊರಿಯಾದ ಕ್ರಾಂತಿಯು ಯಶಸ್ವಿಯಾಯಿತು. ಇದಾದ ಬಳಿಕ ಅಮೇರಿಕನ್

ಸಾಮ್ರಾಜ್ಯಶಾಹಿಗಳ ವಿರುದ್ಧ ವಿಯೆಟ್ನಾಮ್ ಕ್ರಾಂತಿಯ ಅಮೋಘ ಯಶಸ್ಸಿನ ಹೋರಾಟ ನಡೆದು ವಿಯೆಟ್ನಾಮ್‌ನ ಏಕೀಕರಣದೊಂದಿಗೆ ಪರ್ಯವಸಾನಗೊಂಡಿತು. ಅಮೇರಿಕನ್ ನರಮೇಧ ಹಾಗೂ ಬಾಂಬ್ ಸುರಿಮಳೆಗಳ ವಿರುದ್ಧದ ಹೋರಾಟವೂ ಕೂಡ, ಮಾರ್ಕ್ಸವಾದ-ಲೆನಿನ್‌ವಾದದ ಪತಾಕೆಯನ್ನು ಗಟ್ಟಿಯಾಗಿ ಮೇಲೆತ್ತಿ ಹಿಡಿದ ವಿಯೆಟ್ನಾಮ್‌ನ ಕಾರ್ಮಿಕರ ಪಕ್ಷದ ನೇತೃತ್ವದಲ್ಲಿಯೇ ಸಾಗಿತು. ಕ್ಯೂಬಾ, ಲಾವೋಸ್, ಕಂಪೂಚಿಯಾ ಇವು ಅದೇ ಸರ್ವವ್ಯಾಪಿ ವಿಚಾರಧಾರೆಯ ಇತರ ವಿಜಯಗಳು. ಇದಲ್ಲದೇ, ಇಂದು ದಾರಿದ್ರ್ಯ ಹಾಗೂ ಅಜ್ಞಾನಗಳ ನರಕದಿಂದ ನವವಸಾಹತುವಾದಿ ಪರ್ಜಿಸ್ಸು ಹಾಗೂ ಗುಲಾಮಗಿರಿಗಳ ಗಂಡಾಂತರದಿಂದ ತಮ್ಮ ಜನತೆಯನ್ನು ಪಾರುಗೊಳಿಸಲೋಸುಗ ಹೋರಾಡಲು ಎಲ್ಲ ನವಸ್ವತಂತ್ರ ದೇಶಗಳಲ್ಲೂ ಕ್ರಾಂತಿಕಾರಿ ಮತ್ತು ಪ್ರಗತಿಪರ ಶಕ್ತಿಗಳು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿಚಾರಧಾರೆಯನ್ನೇ ನಂಬಿದ್ದಾರೆ. ಬಂಡವಾಳಶಾಹಿ ಮಾರ್ಗದ ಹಾಗೂ ಸಮಾಜವಾದಿಯಲ್ಲದ ಮಾರ್ಗದ ಸಂಪೂರ್ಣ ದಿವಾಳಿಖೋರತನವು ದಿನದಿನಕ್ಕೂ ಎದ್ದು ಕಾಣುತ್ತಿದ್ದು, ಹೆಚ್ಚು ಹೆಚ್ಚು ಜನ ಮಾರ್ಕ್ಸವಾದಿ ವಿಚಾರಧಾರೆಯತ್ತ ಆಕರ್ಷಿತಗೊಳ್ಳುತ್ತಿದ್ದಾರೆ. ಈ ದೇಶಗಳ ಆಳುವ ವರ್ಗಗಳು ಪ್ರಚಾರ ಮಾಡುವ ಸಿದ್ಧಾಂತ ಹಾಗೂ ಧೋರಣೆಗಳು ಜನತೆಯ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ಹಾಗೂ ಅವರ ಹಿಂದುಳಿದತನವನ್ನು ಕೊನೆಗೊಳಿಸುವಲ್ಲಿ ತಮ್ಮ ವೈಫಲ್ಯವನ್ನು ಸಿದ್ಧಮಾಡಿ ತೋರಿಸುತ್ತಿವೆ.

ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತದ ವಿಜಯಗಳಾದ ಸಮಾಜವಾದಿ ದೇಶಗಳು ಅವುಗಳ ಪ್ರಗತಿ ಹಾಗೂ ಆರ್ಥಿಕ ಬಿಕ್ಕಟ್ಟಿನಿಂದ ಅವುಗಳ ಸ್ವಾತಂತ್ರ್ಯ, ಇವೊಂದು ಬಲಶಾಲಿಯಾದ, ಆಕರ್ಷಕವಾದ ಕ್ರಾಂತಿಕಾರಿ ಶಕ್ತಿಯಾಗಿದ್ದು, ಅದು ನವಸ್ವತಂತ್ರ ದೇಶಗಳಲ್ಲಿಯ ಕ್ರಾಂತಿಕಾರಿ ಚಳವಳಿಗಳನ್ನು ಪ್ರೇರೇಪಿಸುತ್ತಿದೆ. ಹಾಗೂ ಅಗಾಧ ಪ್ರಮಾಣದಲ್ಲಿ ಗಟ್ಟಿಗೊಳಿಸುತ್ತಿದೆ. ಸಮಾಜವಾದಿ ಬಣದ ಈ ಕ್ರಾಂತಿಕಾರಿ ಪಾತ್ರ ಹಾಗೂ ಅದರ ಶಕ್ತಿಶಾಲಿ ಮುನ್ನಡೆಗಳು ಮಾರ್ಕ್ಸ್‌ವಾದಿ ಸಿದ್ಧಾಂತದ ಜಗತ್ಪರಿವರ್ತಕ ಪಾತ್ರಕ್ಕೆ ಜೀವಂತ ಸಾಕ್ಷಿಯಾಗಿವೆ. ಈ ಸಿದ್ಧಾಂತವು ಹೊಸ ಹೊಸ ಜನತೆಯನ್ನು ಸದ್ಯದ ಸಮಾಜ ವ್ಯವಸ್ಥೆಯನ್ನು ನಷ್ಟಗೊಳಿಸಲು ಹಾಗೂ ಜಗತ್ತನ್ನು ಹೊಸರೀತಿಯಲ್ಲಿ ಕಟ್ಟಲು ಸತತವಾಗಿ ಉದ್ಯುಕ್ತಗೊಳಿಸುತ್ತಿದೆ. ಸಮಾಜವಾದಿ ದೇಶಗಳ ಆಕರ್ಷಕ ಶಕ್ತಿಯು ಇನ್ನಷ್ಟು ವರ್ಧನೆಗೊಳ್ಳಲು ಕಾರಣವೆಂದರೆ ಅಮೇರಿಕನ್ ಸಾಮ್ರಾಜ್ಯವಾದಿಗಳ ಅಣ್ವಸ್ತ್ರ ಯುದ್ಧ ಪಿತೂರಿಯ ವಿರುದ್ಧ ಹೋರಾಡುತ್ತ ಶಾಂತಿಯ ಕೊಡೆ ಹಿಡಿದುದು. ಸೋವಿಯೆಟ್ ಯೂನಿಯನ್ನಿನ ಮಿಲಿಟರಿ ಶಕ್ತಿ ಹಾಗೂ ವಿಶ್ವಶಾಂತಿಯ ರಕ್ಷಣೆಗಾಗಿ ಅದರ ಅವಿರತ ಹೋರಾಟಗಳನ್ನು ಬಡತನ ಹಾಗೂ ಅನ್ಯಾಯಗಳ ವಿರುದ್ಧ ಹೋರಾಡುತ್ತಿರುವ ಜನತೆಗಿರುವ ಭರವಸೆಗಳೆಂದು ಸ್ವಾಗತಿಸಲಾಗುತ್ತಿದೆ.

ಪರೀಕ್ಷೆ ಹಾಗೂ ವಿಜಯ

ಮಾರ್ಕ್ಸ್‌ವಾದಿ ಸಿದ್ಧಾಂತದ ಈ ವಿಜಯಗಳೇನು ಕೇವಲ ಸೈದ್ಧಾಂತಿಕ ಸೆಟಸಾಟದಲ್ಲಿ ಒಂದು ವಾದಕ್ಕೆ ಇನ್ನೊಂದು ಪ್ರತಿವಾದ ಹೂಡಿ, ಒಂದು ವಿಚಾರಕ್ಕೆ ಇನ್ನೊಂದು ಪ್ರತಿವಿಚಾರ ಮುಂದಿರಿಸಿ. ದೊರೆಯಲಿಲ್ಲ; ಅವು ದೊರೆತದ್ದು ಯಾದವೀ ಕಲಿಯುದ್ಧಗಳಲ್ಲಿ, ವರ್ಗಯುದ್ಧಗಳಲ್ಲಿ, ಬಂಡುಗಳಲ್ಲಿ, ಪ್ರದೀರ್ಘ ಸ್ವಾತಂತ್ರ್ಯ ಸಮರಗಳಲ್ಲಿ ಜಾಗತಿಕ ಸಮರಗಳಲ್ಲಿ, ಕ್ರಾಂತಿಗಳಲ್ಲಿ — ಇವೆಲ್ಲವುಗಳಲ್ಲಿ ದಶಲಕ್ಷಾವಧಿ ಜನಗಳ ಪ್ರಾಣದ ಬೆಲೆ ತೆತ್ತ ಬಳಿಕ ಸಂಘರ್ಷದ ಸಿದ್ಧಾಂತವು ವರ್ಗಯುದ್ಧದಲ್ಲಿ ಪರೀಕ್ಷಿಸಲ್ಪಟ್ಟಿತ್ತು; ಅದು ಕಾರ್ಮಿಕರ ರಾಜ್ಯದ ನಿರ್ವಹಣೆಯಲ್ಲಿ ಪರೀಕ್ಷಿಸಲ್ಪಟ್ಟಿತು; ಅದು ಸಮಾಜವಾದಿ ಅರ್ಥವ್ಯವಸ್ಥೆಯ ಆಯೋಜನೆಯಲ್ಲಿ ಪರೀಕ್ಷಿಸಲ್ಪಟ್ಟಿತು; ಅದು ರಣಭೂಮಿಯಲ್ಲಿ ಪರೀಕ್ಷಿಸಲ್ಪಟ್ಟಿತು; ಹಾಗೂ ಇವೆಲ್ಲದರಲ್ಲಿ ಅದು ವಿಜಯಿಯಾಗಿ ಹೊರಟಿಬಂತು. ಇದೆಲ್ಲವನ್ನೂ ನೆನಪಿನಲ್ಲಿಡುವದು ಅತ್ಯಗತ್ಯ. ಏಕೆಂದರೆ ಮಾರ್ಕ್ಸ್‌ವಾದದ ವಿಜಯಗಳನ್ನು ಅದರ ಕ್ರಾಂತಿಕಾರಿ ತಿರುಳಿನಿಂದ. ಅದರ ಕ್ರಾಂತಿಕಾರಿ ಕಾರ್ಯಾಚರಣೆಯಿಂದ, ಮಹಾನ್ ಹೋರಾಟಗಳಿಂದ ಹಾಗೂ ಅದರ ಉಳಿವು ಮತ್ತು ಮುನ್ನಡೆಗಾಗಿ ಮಿಲಿಯಾಂತರ ಜನರ ಬಲಿದಾನಗಳಿಂದ ಬೇರ್ಪಡಿಸುವವರು ಬಹಳ ಜನ ಇದ್ದಾರೆ. ಮಾರ್ಕ್ಸ್‌ವಾದವನ್ನು ಒಂದು ಉದಾರಮತವಾದಿ ವಿಚಾರಧಾರೆಯಾಗಿ, ಕಾಲಕಳೆಯಲೊಂದು ಸೈದ್ಧಾಂತಿಕ ಹವ್ಯಾಸವಾಗಿ ಮಾರ್ಪಡಿಸುವುದೇ ಇದರ ಉದ್ದೇಶ.

ಮಾರ್ಕ್ಸ್ ಎಂಗೆಲ್ಸ್‌ರ ವಿಚಾರಧಾರೆಯನ್ನು, ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಪ್ರತ್ಯಕ್ಷ ಕ್ರಾಂತಿಕಾರಿ ಪ್ರಕ್ರಿಯೆಯಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲ. ಮಾರ್ಕ್ಸ್ ಎಂಗೆಲ್ಸರು ಕೇವಲ ಸಿದ್ಧಾಂತಕಾರರಾಗಿರಲಿಲ್ಲ. ಅವರು ಕ್ರಾಂತಿಯ ಪ್ರತ್ಯಕ್ಷ ಮುಂದಾಳುಗಳೂ, ಸಂಘಟಕರೂ ಆಗಿದ್ದರು. ಪ್ರತ್ಯಕ್ಷದಲ್ಲಿ ಕ್ರಾಂತಿಕಾರಿ ಚಟುವಟಿಕೆಯ ಮಹತ್ವವನ್ನು ಮಾರ್ಕ್ಸ್ ಈ ರೀತಿ ವಿವರಿಸಿದರು: "ತತ್ವಶಾಸ್ತ್ರಜ್ಞರು ಜಗತ್ತನ್ನು ವಿಧವಿಧವಾಗಿ ಅರ್ಥೈಸಿದ್ದಾರಷ್ಟೇ; ಆದರೆ ಅದನ್ನು ಬದಲಿಸುವುದು ಮುಖ್ಯ". ಮಾರ್ಕ್ಸ್ ಹಾಗೂ ಎಂಗೆಲ್ಸರು ಕ್ರಾಂತಿಕಾರಿ ಚಿಂತಕರೂ. ಸಂಘಟಕರೂ ಆಗಿದ್ದರು. ವೈಜ್ಞಾನಿಕ ಸಿದ್ಧಾಂತಕ್ಕೆ ಸಂಪೂರ್ಣ ನಿಷ್ಠೆ ಹಾಗೂ ಕಾರ್ಯಾಚರಣೆಗಾಗಿ ಧೃಡ ಸಂಕಲ್ಪಗಳ ಏಕತೆಗಳನ್ನು — ತತ್ವ ಹಾಗೂ ಕಾರ್ಯಗಳ ಏಕತೆಯನ್ನು — ಅವರು ತಮ್ಮಲ್ಲಿ ಮೈಗೂಡಿಸಿಕೊಂಡಿದ್ದರು. ತಮ್ಮ ಕಾಲದ ಕಾರ್ಮಿಕ ಆಂದೋಲನದಲ್ಲಿ ಅವರು ಕ್ರಿಯಾಶೀಲರಾಗಿ ಪಾಲ್ಗೊಂಡರು. ಹಾಗೂ ನೇರವಾದ

ಕ್ರಾಂತಿಕಾರಿ ಕಾರ್ಯಾಚರಣೆಯಲ್ಲಿ ಭಾಗವಹಿಸಬೇಕಾಗಿ ಬಂದಾಗ ತಮ್ಮ ಸೈದ್ಧಾಂತಿಕ ಕಾರ್ಯವನ್ನು ನಿಲ್ಲಿಸಿ, ಅದರಲ್ಲಿ ಪಾಲ್ಗೊಳ್ಳುತ್ತಿದ್ದರು.

ಕ್ರಾಂತಿಯ ವಿಜ್ಞಾನ

ಮಾರ್ಕ್ಸ್ ಹಾಗೂ ಎಂಗೆಲ್ಸರು ಕ್ರಾಂತಿಕಾರಿ ಹೋರಾಟಗಾರರಾಗಿದ್ದರು. ಹಾಗೂ ಜಗತ್ತನ್ನೇ ಬದಲಿಸುವ ನಿರ್ಧಾರ ಹೊಂದಿದ್ದರು. ಬಂಡವಾಳಶಾಹಿ, ಪುಟ್ಟ ಬಂಡವಾಳಶಾಹಿಗಳ ವಿಚಾರಧಾರೆ, ಕಾರ್ಮಿಕ ವರ್ಗದ್ದಲ್ಲದೆ ಸಮಾಜವಾದಿ ಸಿದ್ಧಾಂತಗಳು, ಕಾರ್ಮಿಕ ಆಂದೋಲನದಲ್ಲಿಯ ಬಲ ಹಾಗೂ ಎಡ ಸಮಯಸಾಧಕತನ– ಇವೆಲ್ಲವುಗಳ ವಿರುದ್ಧ ಅವರು ಸೈದ್ಧಾಂತಿಕ ಹೋರಾಟ ನಡೆಸಿದ್ದು ಅವರ ಕ್ರಾಂತಿಕಾರಿ ಕಾರ್ಯಾಚರಣೆಯ ಭಾಗವೇ ಆಗಿತ್ತು.

ಪೂರ್ವ ಕಾಲದಿಂದ ಸಾಗಿ ಬಂದ ಸಾಮಾಜಿಕ ಘಟನೆಗಳ ಹಾಗೂ ಇತಿಹಾಸದ ಬಗೆಗಿನ ತಪ್ಪು ಕಲ್ಪನೆಗಳನ್ನು ಕೆಳಗುರುಳಿಸಿ ಕಾರ್ಮಿಕ ವರ್ಗಕ್ಕೆ ತನ್ನ ಕಾಲದ ಹಾಗೂ ಒಟ್ಟು ಮಾನವ ಇತಿಹಾಸದ ಸರಿಯಾದ ಕ್ರಾಂತಿಕಾರಿ ತಿಳುವಳಿಕೆ ಕೊಟ್ಟು ಅದನ್ನು ಸನ್ನದ್ಧಗೊಳಿಸುವ ಕಾರ್ಯವನ್ನು ಮಾರ್ಕ್ಸ್–ಎಂಗೆಲ್ಸ ಕೈಕೊಂಡರು. ತತ್ವಜ್ಞಾನ, ಅರ್ಥಶಾಸ್ತ್ರ. ರಾಜಕಾರಣ, ರಾಜ್ಯಸತ್ತೆ, (State), ಧರ್ಮ ಇವುಗಳ ಕುರಿತಾದ ಹಳೆಯ ಕಲ್ಪನೆಗಳನ್ನೆಲ್ಲ ಮುರಿದುಹಾಕಿ, ಅವುಗಳ ವರ್ಗೀಯ ಹಿನ್ನೆಲೆಯನ್ನು ಬಯಲುಗೊಳಿಸಿ, ಅವುಗಳ ಸ್ಥಾನದಲ್ಲಿ ವಸ್ತುನಿಷ್ಠ ಹಾಗೂ ವೈಜ್ಞಾನಿಕ ಸಂಕಲ್ಪನೆಯನ್ನು ಅವರು ನಿರ್ಮಿಸಬೇಕಾಯಿತು. ಶತಕಾನುಶತಕಗಳಿಂದ ಗುಂಪುಗೂಡಿದ್ದ ಪೂರ್ವಗ್ರಹಗಳಿಂದ, ಮಾನವ ಇತಿಹಾಸದ ಹಾಗೂ ಮಾನವ ಜೀವನದ ವಿವಿಧ ಅಂಗಗಳ ಬಗೆಗಿನ ವಿಕೃತ ವಿಚಾರಗಳಿಂದ ಹಿಂದೆಂದೂ ಇಷ್ಟು ಆಳವಾದ, ಕ್ರಾಂತಿಕಾರಿ ಕಡಿತ ಸಂಭವಿಸಿರಲಿಲ್ಲ.

ಈ ಕದನ ಹಾಗೂ ಪತನಗಳಿಂದಾಗಿಯೇ ಆಧುನಿಕ ಯುಗದ ಕ್ರಾಂತಿಕಾರಿ ವರ್ಗವಾದ ಕಾರ್ಮಿಕ ವರ್ಗದ ಸಿದ್ಧಾಂತ ಹಾಗೂ ಹೋರಾಟ ತಂತ್ರಗಳು ಹುಟ್ಟಿಕೊಂಡವು, ಸಿದ್ಧಾಂತ ಹಾಗೂ ಹೋರಾಟ ತಂತ್ರಗಳ ಈ ಉದಯದಿಂದಾಗಿಯೇ ಕಾರ್ಮಿಕ ವರ್ಗವು ಒಂದು ಸಂಪೂರ್ಣ ಕ್ರಾಂತಿ ವಿಜ್ಞಾನದ ಶಸ್ತ್ರದಿಂದ ಸನ್ನದ್ಧಗೊಂಡಿತು ಹಾಗೂ ಎಲ್ಲ ಪ್ರಕಾರದ ಶೋಷಣೆಯನ್ನೂ ಕೊನೆಗೊಳಿಸಲು ಎಲ್ಲ ಪ್ರಕಾರದ ವರ್ಗ ವರ್ಚಸ್ಸಿನ ಆಧಾರದ ಮೇಲೆ ನಿಂತ ವ್ಯವಸ್ಥೆಗೆ ಮೃತ್ಯುದಂಡನ ವಿಧಿಸಲು ಧೈರ್ಯದಿಂದ ಮುನ್ನುಗ್ಗಿತು. ಕಾರ್ಮಿಕ ವರ್ಗದ ಈ ಕ್ರಾಂತಿ ವಿಜ್ಞಾನವು ಒಟ್ಟು ಮಾನವ ಮುಕ್ತಿಯ ವಿಜ್ಞಾನವಾಗುವುದು ಕಾಲ ನಿರ್ಧಾರಿತವೇ ಆಗಿತ್ತು. ಏಕೆಂದರೆ ಕಾರ್ಮಿಕ ವರ್ಗಕ್ಕೆ ಬೇರಾವ ಗುರಿಯಿರಲು ಸಾಧ್ಯವೇ ಇಲ್ಲ.

ಅಂತೆಯೇ ನಾವಿಂದು ಜಗತ್ತಿನ ಎಲ್ಲ ದೇಶಗಳಲ್ಲೂ – ಕಾರ್ಮಿಕ ವರ್ಗ ಇನ್ನೂ ಅಶಕ್ತವಾಗಿರುವಲ್ಲಿ ಕೂಡ – ಮಾರ್ಕ್ಸವಾದ–ಲೆನಿನ್‌ವಾದ ಅಗಾಧ ಮಾನ್ಯತೆ ಹೊಂದಿರುವುದನ್ನು ಕಾಣುತ್ತೇವೆ. ಇದು ಅವರ ಮಾನವ ಮುಕ್ತಿಯಲ್ಲಿಯ ಪ್ರಭಾವಶಾಲಿ ಪಾತ್ರಕ್ಕೆ ಇರುವ ಮಾನ್ಯತೆ.

ಸಮಾಜ ವಿಕಾಸದ ನಿಯಮಗಳು

ಮಾರ್ಕ್ಸ್ ನಮ್ಮ ಕಾಲದ ಕ್ರಾಂತಿಕಾರಿ ಆಂದೋಲನಕ್ಕೆ ಸಾಮಾಜಿಕ–ಆರ್ಥಿಕ ವ್ಯವಸ್ಥೆಗಳ ವಿಕಾಸದ ನಿಯಮಗಳ ವೈಜ್ಞಾನಿಕ ಸಿದ್ಧಾಂತವನ್ನು ಕೊಟ್ಟರು ಹಾಗೂ ಈ ಜ್ಞಾನವನ್ನು ಆಧುನಿಕ ಬಂಡವಾಳಶಾಹಿ ಸಮಾಜಕ್ಕೆ ಅನ್ವಯಿಸಿದರು. ಅವರು ಬಂಡವಾಳಶಾಹಿಯ ಕ್ರಾಂತಿಕಾರಿ ವಿನಾಶ, ಸಮಾಜವಾದದಲ್ಲಿ ಅದರ ಬದಲಾವಣೆ ಹಾಗೂ ಕಮ್ಯುನಿಸ್ಟ್ ಸಮಾಜದಲ್ಲಿ ಅದರ ಮುಂದಿನ ಬದಲಾವಣೆ ಇವುಗಳ ಚಾರಿತ್ರಿಕ ಅನಿವಾರ್ಯತೆಯನ್ನು ತೋರಿಸಿಕೊಟ್ಟರು. ಹೀಗೆ ಮಾರ್ಕ್ಸವಾದವು ಮಾನವಕುಲದ ಮುಕ್ತಿಯ ಶಾಸ್ತ್ರವಾಯಿತು.

ತಾವು ಮುಂದಾಳತ್ವ ವಹಿಸಿದ ಅನೇಕ ವರ್ಗ ಹೋರಾಟಗಳ ಮೂಲಕ ಹಾಗೂ ಹಿಂದಿನ ಇತಿಹಾಸದ ಅಭ್ಯಾಸದ ಮೂಲಕ ಮಾರ್ಕ್ಸ್ ಹಾಗೂ ಎಂಗೆಲ್ಸರು ರಾಜಕೀಯ ಹಾಗೂ ರಾಜ್ಯಸತ್ತೆಯ (State) ಅಧಿಕಾರದ ಪ್ರಶ್ನೆಯತ್ತ ಗಮನ ಕೊಡುವ ಅಗತ್ಯ ಕಂಡರು. ರಾಜ್ಯಸತ್ತೆಯು ವರ್ಗಸಮಾಜದ ಉದಯದೊಂದಿಗೇ ಹುಟ್ಟಿಕೊಂಡಿದೆಯೆಂದೂ, ಅದು ಯಾವಾಗಲೂ ಆಳುವ ಶೋಷಕ ವರ್ಗದ ಕೈಯಲ್ಲಿಯ ಅಸ್ತ್ರವಾಗಿದೆಯೆಂದೂ ಅವರು ಕಲಿಸಿದರು. ತನ್ನನ್ನು ತಾನೇ ಪ್ರಜಾಪ್ರಭುತ್ವವೆಂದು ಘೋಷಿಸುವ, ಪಾರ್ಲಿಮೆಂಟ್, ಮತದಾನ ಹಕ್ಕು ಹಾಗೂ ಔಪಚಾರಿಕ ಹಕ್ಕುಗಳನ್ನು ಪ್ರದರ್ಶಿಸಿ ಮೋಸಗೊಳಿಸುವ ಆಧುನಿಕ ಬೂರ್ಜ್ವಾ ರಾಜ್ಯಸತ್ತೆಯ ವರ್ಗ ಸ್ವರೂಪವನ್ನು ಅವರು ಹೊರಗೆಡಹಿದರು. ಕಮ್ಯುನಿಸ್ಟ್ ಪ್ರಣಾಳಿಕೆ ಗುಡುಗಿತು!: "ಆಧುನಿಕ ರಾಜ್ಯಸತ್ತೆಯೆಂದರೆ ಬೂರ್ಜ್ವಾವರ್ಗದ ಒಟ್ಟು, ಸಾಮೂಹಿಕ ಹಿತಾಸಕ್ತಿಗಳನ್ನು ನೋಡಿಕೊಳ್ಳುವಂಥ ಒಂದು ಅನಿವಾರ್ಯ ತೀರ್ಮಾನಕ್ಕೆ ಬಂದರೇನೆಂದರೆ - ಬಂಡವಾಳದ ಶೋಷಣಮಯ ಬಿಗಿಹಿಡಿತದಿಂದ ಕಾರ್ಮಿಕ ವರ್ಗ ಹಾಗೂ ಒಟ್ಟು ಸಮಾಜ ಪಾರಾಗಬೇಕಾದರೆ ಬಂಡವಾಳಶಾಹಿ ರಾಜ್ಯಸತ್ತೆಯನ್ನು ನಷ್ಟಗೊಳಿಸಿ, ಕಾರ್ಮಿಕ ವರ್ಗವು ರಾಜಕೀಯ ಅಧಿಕಾರವನ್ನು ಕೈವಶಮಾಡಿಕೊಳ್ಳದೇ ಸಾಧ್ಯವಿಲ್ಲ. ಬಂಡವಾಳಶಾಹಿ ಯುಗದಿಂದ ಕಮ್ಯೂನಿಸಂವರೆಗಿನ ಸಂಕ್ರಮಣ ಕಾಲದಲ್ಲಿ ರಾಜ್ಯಸತ್ತೆಯ ಅವಶ್ಯಕತೆಯನ್ನು ಅವರು ಗುರುತಿಸಿದರು ಹಾಗೂ ಸಮಾಜವು ಕಮ್ಯೂನಿಸಂ ಹಂತವನ್ನು ತಲುಪಿದಾಗ ರಾಜ್ಯಸತ್ತೆ ಅಳಿದು ಹೋಗುತ್ತದೆಂದು ಹೇಳಿದರು. ಈ

ಸಂಕ್ರಮಣ ಕಾಲದಲ್ಲಿಯ ರಾಜ್ಯಸತ್ತೆಯು ಕಾರ್ಮಿಕವರ್ಗದ ಸರ್ವಾಧಿಕಾರತ್ವ–ಅಂದರೆ ಕಾರ್ಮಿಕ ವರ್ಗದ ನೇತೃತ್ವದಲ್ಲಿರುವ ಹಾಗೂ ಸಮಾಜವನ್ನು ಸಮಾಜವಾದ ಹಾಗೂ ಕಮ್ಯುನಿಸಂನತ್ತ ಮುನ್ನಡೆಸಲು ಇರುವ ರಾಜ್ಯಸತ್ತೆ–ಮಾತ್ರ ಆಗಿರಲು ಸಾಧ್ಯ ಎಂದವರು ಅಭಿಪ್ರಾಯಪಟ್ಟರು.

ಕಾರ್ಮಿಕ ವರ್ಗದ ನೇತೃತ್ವ

ಲೆನಿನ್ನರು ಕಾರ್ಮಿಕ ವರ್ಗದ ಐತಿಹಾಸಿಕ ಹೊಣೆಯ ಸಂಕಲ್ಪನೆಯನ್ನು ಶ್ರೀಮಂತಗೊಳಿಸಿ, ಪ್ರಜಾಪ್ರಭುತ್ವ ಕ್ರಾಂತಿಯಲ್ಲೂ ಕಾರ್ಮಿಕ ವರ್ಗದ ನೇತೃತ್ವದ ಅಗತ್ಯವನ್ನು ಸಾರಿದರು. ಮಾರ್ಕ್ಸ್ ಕಾರ್ಮಿಕ ವರ್ಗದ ಬಗ್ಗೆ ಬರೆದದ್ದು, ಸಮಾಜವಾದಿ ಕ್ರಾಂತಿ ಇನ್ನೂ ಆಗಬೇಕಿರುವ ಹಾಗೂ ಬೂರ್ಜ್ವಾ ಕ್ರಾಂತಿ (ಯುರೋಪಿನಲ್ಲಿ) ಪೂರ್ಣಗೊಂಡ ಕಾಲದಲ್ಲಿ. ಆದರೆ ಪ್ರಜಾಪ್ರಭುತ್ವ ಕ್ರಾಂತಿಯನ್ನು ಇನ್ನೂ ಸಂಘಟಿಸಿ ಯಶಸ್ವಿಯಾಗಿ ಹೋರಾಟ ನಡೆಸಬೇಕಾಗಿದ್ದ ರಶಿಯ ಮುಂತಾದ ದೇಶಗಳ ಕುರಿತು ಏನು ಎಂಬುದು- ಪ್ರಶ್ನೆಯಾಗಿತ್ತು. ಲೆನಿನ್ನರು ಮಾರ್ಕ್ಸ್‌ರ ತತ್ವಗಳನ್ನು ಸತತವಾಗಿ ಅನ್ವಯಿಸಿ ತೀರ್ಮಾನಕ್ಕೆ ಬಂದದ್ದೇನೆಂದರೆ ಕಾರ್ಮಿಕ ವರ್ಗದ ನೇತೃತ್ವವಿಲ್ಲದೇ ಪ್ರಜಾಪ್ರಭುತ್ವ ಕ್ರಾಂತಿಯ ಯಶಸ್ಸನ್ನು ನಿಶ್ಚಿತಗೊಳಿಸಲು ಸಾಧ್ಯವಿಲ್ಲ ಹಾಗೂ ಅದಿಲ್ಲದೇ ಸಮಾಜವಾದಿ ಕ್ರಾಂತಿಯತ್ತ ಸಂಕ್ರಮಣ ಕೈಕೊಳ್ಳುವುದೂ ಸಾಧ್ಯವಿಲ್ಲ. ಅವರು ಈ ಕ್ರಾಂತಿಕಾರಿ ಹಾಗೂ ವೈಜ್ಞಾನಿಕ ಸಂಕಲ್ಪನೆಯನ್ನು ತಮ್ಮ "ಸೋಶಿಯಲ್ ಡೆಮಾಕ್ರಸಿಯ ಎರಡು ತಂತ್ರಗಳು" ಪುಸ್ತಕದಲ್ಲಿ ವಿವೇಚಿಸಿದರು. ಮೆನ್ಶೆವಿಕ್‌ರ ತೀವ್ರ ವಿರೋಧವನ್ನೆದುರಿಸಿ ಅವರು ಈ ತತ್ವಕ್ಕಾಗಿ – ಹೋರಾಡಿದರು. ಏಕೆಂದರೆ ಮೆನ್ಶೆವಿಕ್‌ರ ತಂತ್ರಗಳನ್ನು ಅನುಸರಿಸಿದ್ದರೆ ಕ್ರಾಂತಿಯನ್ನು ಹೊಯ್ದಾಡುವ ಹಾಗೂ ಹೊಂದಾಣಿಕೆ ಪ್ರವೃತ್ತಿಯ ಬಂಡವಾಳಶಾಹಿ ವರ್ಗದ ನೇತೃತ್ವಕ್ಕೆ ಒಪ್ಪಿಸಿ ಬಿಟ್ಟುಕೊಟ್ಟಂತಾಗುತ್ತಿತ್ತು. ಕಾರ್ಮಿಕ ವರ್ಗದ ಮುಂದಾಳ್ತನದ ಸಂಕಲ್ಪನೆಯನ್ನು ನಂತರದ ಕಾಲದಲ್ಲಿ ಅನೇಕ ದೇಶಗಳ ರಾಷ್ಟ್ರೀಯ ವಿಮೋಚನಾ ಸಮರಗಳಿಗೂ ಅನ್ವಯಿಸಲಾಯಿತು ಹಾಗೂ ಅದು ಐತಿಹಾಸಿಕ ವಿಜಯಗಳನ್ನು ತಂದಿತು.

ಕಾರ್ಮಿಕ ವರ್ಗದ ಹೊಣೆಯ ಕುರಿತಾದ ಈ ಲೆನಿನ್‌ವಾದಿ ತತ್ವದಿಂದಾಗಿಯೇ ರಶಿಯಾದಲ್ಲಿ ಕಾರ್ಮಿಕ ವರ್ಗವು ಪ್ರಜಾಪ್ರಭುತ್ವ ಕ್ರಾಂತಿಯ ಮುಂದಾಳತ್ವ ವಹಿಸಿತಲ್ಲದೇ, ಅತ್ಯಲ್ಪ ಕಾಲದಲ್ಲಿ ಜನತೆಯನ್ನು ಯಶಸ್ವೀ ಸಮಾಜವಾದಿ ಕ್ರಾಂತಿಯತ್ತ ಸಾಗಿಸಿತು. ಚೀನೀ ಕಮ್ಯುನಿಸ್ಟ್ ಪಕ್ಷವು ಮಾವೋತ್ಸೆತುಂಗರ ನೇತೃತ್ವದಲ್ಲಿ ಕಾರ್ಮಿಕ ವರ್ಗದ ನೇತೃತ್ವದ ಈ ಲೆನಿನ್‌ವಾದಿ ತತ್ವವನ್ನು ಯಶಸ್ವಿಯಾಗಿ ತಂದು ಜಗತ್ತಿನಲ್ಲಿಯ ಅತ್ಯಂತ ಮಹಾನ್ ಕ್ರಾಂತಿಗಳಲ್ಲೊಂದಕ್ಕೆ ಮಾರ್ಗದರ್ಶನ ನೀಡಿತು. ಇದು ಸಮಾಜವಾದ ಹಾಗೂ ಕಾರ್ಮಿಕ ವರ್ಗದ ರಾಜ್ಯಸತ್ತೆಯತ್ತ ಸಾಗಲು ಬಹಳ ಸಹಾಯಕವಾಯಿತು. ಕೋರಿಯ, ವಿಯೆಟ್‌ನಾಮ್, ಕ್ಯೂಬಾ, ಪೂರ್ವ ಯೂರೋಪಿನ ದೇಶಗಳೂ ಕೂಡ ಇಂಥದೇ ಯಶೋಗಾಥೆಯನ್ನು ಹೇಳುತ್ತವೆ. ರಾಷ್ಟ್ರೀಯ ವಿಮೋಚನಾ ಸಮರದ ಕಾಲದಲ್ಲಿ ಯಾವ ದೇಶಗಳು ಕಾರ್ಮಿಕ ವರ್ಗ ಹಾಗೂ ಅದರ ಪಕ್ಷದ ನಾಯಕತ್ವದಲ್ಲಿ ಬಂದವೋ ಅವು ಮಾತ್ರ ಸ್ವಾತಂತ್ರ್ಯದ ನಂತರ ಸಮಾಜವಾದದತ್ತ ಯಶಸ್ವೀ ಮುನ್ನಡೆ ಸಾಧಿಸಿದವು. ಭಾರತವನ್ನು ಒಳಗೊಂಡ ಇತರ ದೇಶಗಳು ತಮ್ಮ ಆರ್ಥಿಕ ಸಾರ್ವಭೌಮತ್ವ ಹಾಗೂ ಸ್ವಾತಂತ್ರ್ಯಗಳಿಗೂ ಗಂಭೀರ ಗಂಡಾಂತರಗಳನ್ನೆದುರಿಸುತ್ತ ಭಾರಿ ಬವಣೆಯನ್ನನುಭವಿಸುತ್ತಿವೆ. ಇತರ ಹಲವು ದೇಶಗಳಂತೂ ಮಿಲಿಟರಿ ರಾಜ್ಯಾಡಳಿತ ಅಥವಾ ಬೇರೆ ಬಗೆಯ ಸರ್ವಾಧಿಕಾರಶಾಹಿ ಸರಕಾರಗಳ ಕೈಯಲ್ಲಿ ಸಿಲುಕಿಕೊಂಡಿವೆ.

ಅನುವಾದ : **ಸುಧೀಂದ್ರ ಕುಲಕರ್ಣಿ**

★

ಭ್ರಷ್ಟ ರಾಜಕಾರಣಿಗಳ ವಿರುದ್ಧ ನಿರ್ಭೀತವಾಗಿ ಬರೆಯುವ ದಿಟ್ಟ ಪತ್ರಿಕೆ

ಲಂಕೇಶ್ ಪತ್ರಿಕೆ

'ಕನ್ನಡ ಜಾಣ-ಜಾಣೆಯರ ವಾರ ಪತ್ರಿಕೆ'

೧೫೨೪, ಗೋವಿಂದಪ್ಪ ರಸ್ತೆ, ಬಸವನಗುಡಿ, ಬೆಂಗಳೂರು-೫೬೦ ೦೦೪.

FORM IV

(See Rule 8)

1. Place of Publication	:	BANGALORE
2. Periodicity of its Publication	:	WEEKLY
3. Printer's Name	:	P. RAMACHANDRA RAO
Whether Citizen of India?	:	YES
Address	:	L-56, K. V. Temple Street, Sultanpet, Bangalore-53.
4. Pablisher's Name	:	P. RAMACHANDRA RAO
Whether Citizen of India?	:	YES
Address	:	L-56, K. V. Temple Street, Sultanpet, Bangalore-53.
5. Editor's Name	:	P. RAMACHANDRA RAO
Whether Citizeu of India?	:	YES
Address	:	L-56, K. V. Temple Street, Sultanpet, Bangalore-53.
Names and addresses of individuals who own the News Paper and Partners or Share holders holding more than one percent of the total capital.		Communist Party of India, (Marxist) Karnataka State Committee, L-56, K.V. Temple Street, Sultanpet, Bangalore-53

I, P. RAMACHANDRA RAO hereby declare that the particulars given above are true to the best of my knowledge and belief.

P. RAMACHANDRA RAO

13-3-1983 *Signature of Publisher*

WITH BEST

WISHES

FROM A WELL WISHER

Reg. KRNB-368 MAG(2)PRB DECR 319/7879 13ನೇ ಮಾರ್ಚ್ 1983

"...ಡಾರ್ವಿನ್ ಜೀವ ಜಗತ್ತಿನ ಬೆಳವಣಿಗೆಯ ನಿಯಮವನ್ನು ಕಂಡುಹಿಡಿದಂತೆಯೇ ಮಾರ್ಕ್ಸ್ ಮಾನವ ಇತಿಹಾಸದ ಬೆಳವಣಿಗೆಯ ನಿಯಮವನ್ನು ಕಂಡುಹಿಡಿದ..........

ಇಷ್ಟೇ ಅಲ್ಲ. ಇಂದಿನ ಬಂಡವಾಳಶಾಹಿ ಉತ್ಪಾದನಾ ವಿಧಾನದ ಹಾಗೂ ಅದು ಸೃಷ್ಟಿಸಿದ ಬೂರ್ಜ್ವಾ ಸಮಾಜದ ಚಲನೆಯ ವಿಶೇಷ ನಿಯಮವನ್ನೂ ಮಾರ್ಕ್ಸ್ ಕಂಡುಹಿಡಿದ...........

ಇಂತಹ ಎರಡು ಸಂಶೋಧನೆಗಳು ಒಂದು ಜೀವಮಾನಕ್ಕೇ ಸಾಕಷ್ಟಾಗುತ್ತವೆ. ಇವುಗಳಲ್ಲಿ ಒಂದನ್ನಾದರೂ ಮಾಡುವ ಅವಕಾಶ ಹೊಂದಿದಾತನೂ ಧನ್ಯನೇ ಸರಿ. ಮಾರ್ಕ್ಸ್ ಹಲವು ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಿದ–ಕೇವಲ ಮೇಲು ಮೇಲಿನಲ್ಲಿ ಮಾತ್ರವಲ್ಲ, ಪ್ರತಿಯೊಂದನ್ನೂ ಆಳವಾಗಿ ಪರಿಶೀಲಿಸಿದ ಪ್ರತಿಯೊಂದು ಕ್ಷೇತ್ರದಲ್ಲೂ, ಗಣಿತದಲ್ಲೂ, ಸ್ವತಂತ್ರ ಸಂಶೋಧನೆ ನಡೆಸಿದ.

ಹೀಗಿದ್ದ ಆ ವಿಜ್ಞಾನಿ. ಹೀಗೆಂದಾಗ ಆ ಮನುಷ್ಯನ ಬಗ್ಗೆ ಅರ್ಧದಷ್ಟೂ ಹೇಳಿದಂತಾಗಲಿಲ್ಲ. ವಿಜ್ಞಾನ ಮಾರ್ಕ್ಸ್‌ಗಂತೂ ಚಾರಿತ್ರಿಕವಾಗಿ ಚಲನಶೀಲವಾದ ಕ್ರಾಂತಿಕಾರಿ ಶಕ್ತಿಯಾಗಿತ್ತು........ ....ಮಾರ್ಕ್ಸ್ ಎಲ್ಲಕ್ಕೂ ಮಿಗಿಲಾಗಿ ಕ್ರಾಂತಿವಾದಿಯಾಗಿದ್ದ. ಒಂದಿಲ್ಲೊಂದು ರೀತಿಯಲ್ಲಿ ಬಂಡವಾಳಶಾಹಿ ಸಮಾಜವನ್ನು, ಅದು ಸೃಜಿಸಿದ ಪ್ರಭುತ್ವದ ಸಂಸ್ಥೆಗಳನ್ನು ಕಿತ್ತೆಸೆಯುವ ಕಾರ್ಯದಲ್ಲಿ, ಆಧುನಿಕ ಕಾರ್ಮಿಕ ವರ್ಗದ ವಿಮುಕ್ತಿಯ ಕಾರ್ಯದಲ್ಲಿ ಸೇವೆ ಸಲ್ಲಿಸುವುದು ಆತನ ನಿಜವಾದ ಜೀವನ ಧ್ಯೇಯವಾಗಿತ್ತು. ಆಧುನಿಕ ಕಾರ್ಮಿಕ ವರ್ಗದಲ್ಲಿ ತನ್ನ ಸ್ವಂತ ಸ್ಥಿತಿಗತಿಯ ಬಗ್ಗೆ, ತನ್ನ ಅವಶ್ಯಕತೆಗಳ ಬಗ್ಗೆ, ತನ್ನ ವಿಮುಕ್ತಿಯ ಶರತ್ತುಗಳ ಬಗ್ಗೆ ಮೊತ್ತ ಮೊದಲು ಪ್ರಜ್ಞೆ ಮೂಡಿಸಿದಾತ ಆತನೇ. ಹೋರಾಟ ಆತನ ಮೂಲಗುಣವಾಗಿತ್ತು. ಒಂದು ಗಾಢ ಆವೇಶದಿಂದ, ಪಟ್ಟು ಹಿಡಿದು ಯಶಸ್ವಿಯಾಗಿ ಆತ ಹೋರಾಡಿದ. ಬೇರಾರೂ ಇದರಲ್ಲಿ ಆತನನ್ನು ಮೀರಿಸಲಾರರು...............

.......ಪರಿಣಾಮವಾಗಿ, ತನ್ನ ಕಾಲದಲ್ಲಿ ಅತ್ಯಂತ ದ್ವೇಷಕ್ಕೆ, ಅಪನಿಂದೆಗೆ ಮಾರ್ಕ್ಸ್ ಗುರಿಯಾದ. ಸರಕಾರಗಳು, ನಿರಂಕುಶ ಪ್ರಭುತ್ವ ಹಾಗೂ ಗಣತಂತ್ರ ಎರಡೂ, ಆತನನ್ನು ತಮ್ಮ ಪ್ರದೇಶಗಳಿಂದ ಗಡೀಪಾರು ಮಾಡಿದವು. ಬೂರ್ಜ್ವಾಗಳು, ಅವರು ಸಂಪ್ರದಾಯವಾದಿಗಳೇ ಆಗಿರಲಿ, ಅತಿ-ಜನತಂತ್ರವಾದಿಗಳೇ ಆಗಿರಲಿ, ಆತನ ಮೇಲೆ ಮಿಥ್ಯಾಪವಾದಗಳ ಸುರಿಮಳೆಗೈದರು. ಇವನ್ನೆಲ್ಲಾ ಕೇವಲ ಜೇಡರ ಬಲೆಯೆಂಬಂತೆ ಆತ ಪಕ್ಕಕ್ಕೆ ತಳ್ಳಿದ, ಕಡೆಗಣಿಸಿದ, ಅತೀ ಅಗತ್ಯ ಬಿದ್ದಾಗ ಮಾತ್ರ ಅವಕ್ಕೆ ಉತ್ತರಿಸಿದ ಮತ್ತು ಕೋಟ್ಯಾಂತರ ಕ್ರಾಂತಿಕಾರೀ ಸಹ ಕಾರ್ಮಿಕರ — ಸೈಬೀರಿಯಾದ ಗಣಿಗಳಿಂದ ಹಿಡಿದು ಕ್ಯಾಲಿಫೋರ್ನಿಯಾದ ವರೆಗೆ ಯುರೋಪು ಹಾಗೂ ಅಮೇರಿಕಾದ ಎಲ್ಲಾ ಕಾರ್ಮಿಕರ — ಪ್ರೀತಿ, ಗೌರವ ಶ್ರದ್ಧೆಗೆ ಪಾತ್ರನಾಗಿ ಮರಣಹೊಂದಿದ. ಆತನಿಗೆ ವಿರೋಧಿಗಳು ಬಹಳ ಜನರಿರಬಹುದು, ಆದರೆ ಒಬ್ಬನಾದರೂ ವೈಯಕ್ತಿಕ ಶತ್ರು ಇರಲಿಲ್ಲ ಎಂದು ಧೈರ್ಯದಿಂದ ನಾನು ಹೇಳಬಲ್ಲೆ.

ಆತನ ಹೆಸರು ಯುಗ ಯುಗಗಳವರೆಗೆ ಚಿರಸ್ಥಾಯಿಯಾಗುತ್ತದೆ. ಹಾಗೇ ಆತನ ಕೃತಿಗಳೂ ಕೂಡಾ."

[ಮಾನವ ಗೆಳೆತನ ಕುರಿತು ಪುರಾತನರ ಅತ್ಯಂತ ಭಾವಪೂರ್ಣ ಕಥೆಗಳನ್ನೂ ಮೀರಿಸುವ ಸಂಬಂಧವನ್ನು ಕಾರ್ಲ್ ಮಾರ್ಕ್ಸ್‌ನೊಂದಿಗೆ ಹೊಂದಿದ್ದ ಫ್ರೆಡರಿಕ್ ಎಂಗೆಲ್ಸ್ 1883ರ ಮಾರ್ಚ್ 17 ರಂದು ಮಾರ್ಕ್ಸ್ ಸಮಾಧಿಯ ಬಳಿ ಮಾಡಿದ ಭಾಷಣದಿಂದ ಉದ್ಧೃತ]

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56, K. V. Temple Street, Sultanpet Bangalore-560 053. Editorial and managerial office; L-56, K V. Temple Streeet, Sultanpet, Bangalore-560 053. Phone: 24154, Printed at Karnataka Pressmen Associates (P) Limited, 54/1, K. R. Road, Bangalore-560 004. Editor: P. RAMACHANDRA RAO